ಜನಶಕ್ತಿ


ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 51 | ಡಿಸೆಂಬರ್ 13–19, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com


ಮೊಟ್ಟೆ
ತಿನ್ನುವುದು
ತಿನ್ನದಿರುವುದು



ಮಕ್ಕಳ ಹಕ್ಕು



ಪತ್ರಕರ್ತರ ಮೇಲೆ
ದಾಳಿಗಳು ಏಕೆ?



ಕದನ ಗೆದ್ದಿದ್ದೇವೆ

ರೈತರ ಹಕ್ಕುಗಳ ಯುದ್ಧ ಮುಂದುವರೆಯುತ್ತದೆ

ಸಂಯುಕ್ತ ಕಿಸಾನ್ ಮೋರ್ಚಾ



ಘೋರ ಕಾನೂನು
AFSPA ರದ್ದಾಗಬೇಕು



ರಂಗಾಯಣ
ಪ್ರಯೋಗ ಶಾಲೆ
ಆಗುತ್ತಿದೆಯೇ?

ಡಿ. 16–17, 2021: ಬ್ಯಾಂಕ್ ಮುಷ್ಕರ
ಫೆ. 23–24, 2022: ಸಾರ್ವತ್ರಿಕ ಮುಷ್ಕರ

ಕದನ ಗೆದ್ದಿದ್ದೇವೆ-ರೈತರ ಹಕ್ಕುಗಳ ಯುದ್ಧ ಮುಂದುವರೆಯುತ್ತದೆ

–ಸಂಯುಕ್ತ ಕಿಸಾನ್ ಮೋರ್ಚಾ

"ಡಿಸೆಂಬರ್ 11 ರಂದು ವಿಜಯೋತ್ಸವದೊಂದಿಗೆ ಪ್ರತಿಭಟನಾ ಸ್ಥಳಗಳನ್ನು ತೆರವು ಮಾಡಲಾಗುವುದು"



ಕೃಪೆ: ಪ್ರತಿಭಟನಾ ಸ್ಥಳದಲ್ಲಿ ಪ್ರಕಟವಾಗುತ್ತಿರುವ 'ಟ್ರಾಲಿ ಟೈಮ್ಸ್'

ಡಿಸೆಂಬರ್ 9 ರಂದು, 378 ದಿನಗಳಿಂದ ಪ್ರತಿಭಟನೆಯಲ್ಲಿ ನಿರತರಾಗಿರುವ ರೈತರ ಹಲವು ಬಾಕಿ ಇರುವ ಬೇಡಿಕೆಗಳಿಗೆ ಒಪ್ಪುವ ಒಂದು ಔಪಚಾರಿಕ ಪತ್ರವನ್ನು ಭಾರತ ಸರ್ಕಾರ, ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯದ ಕಾರ್ಯದರ್ಶಿಯ ಮೂಲಕ ಸಂಯುಕ್ತ ಕಿಸಾನ್ ಮೋರ್ಚಾಗೆ ಕಳುಹಿಸಿದ ನಂತರ, ಸಂಯುಕ್ತ ಕಿಸಾನ್ ಮೋರ್ಚಾ(ಎಸ್.ಕೆ.ಎಂ.) ದೆಹಲಿ ಗಡಿಯಲ್ಲಿ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಮತ್ತು ಇತರೆಡೆಗಳಲ್ಲಿ ಮೋರ್ಚಾಗಳನ್ನು ಸ್ಥಗಿತಗೊಳಿಸುವುದಾಗಿ ಔಪಚಾರಿಕವಾಗಿ ಪ್ರಕಟಿಸಿದೆ. ಅಂದರೆ ಪ್ರಸಕ್ತ ಚಳುವಳಿಯನ್ನು ಸದ್ಯಕ್ಕೆ ನಿಲ್ಲಿಸಲಾಗಿದೆ – ಕದನವನ್ನು ಗೆದ್ದಿದ್ದೇವೆ ಮತ್ತು ಮತ್ತು ರೈತರ ಹಕ್ಕುಗಳನ್ನು ಖಾತ್ರಿಪಡಿಸುವ ಯುದ್ಧ, ವಿಶೇಷವಾಗಿ ಎಲ್ಲಾ ರೈತರಿಗೆ ಕನಿಷ್ಟ ಬೆಂಬಲ ಬೆಲೆಯನ್ನು ಪಡೆಯುವ ಕಾನೂನಾತ್ಮಕ ಹಕ್ಕನ್ನು ಗಳಿಸುವ ಹೋರಾಟ ಮುಂದುವರಿಯುತ್ತದೆ ಎಂದು ಅದು ಹೇಳಿದೆ.

ಈ ಮೊದಲು ಸಂಯುಕ್ತ ಕಿಸಾನ್ ಮೋರ್ಚಾ ಡಿಸೆಂಬರ್ 4ರಂದು ಒಂದು ಮಹತ್ವದ ಸಭೆಯನ್ನು ನಡೆಸಿತು. ರೈತ ಆಂದೋಲನದ ಬಾಕಿ ಇರುವ ಬೇಡಿಕೆಗಳು ಮತ್ತು ಭಾರತ ಸರ್ಕಾರದಿಂದ ಔಪಚಾರಿಕ ಪ್ರತಿಕ್ರಿಯೆಯ ಕೊರತೆಯ ಬಗ್ಗೆ ಚರ್ಚಿಸಲು ನಡೆದ ಈ ಸಭೆ ಭಾರತ ಸರ್ಕಾರದಿಂದ ಔಪಚಾರಿಕ ಮತ್ತು ತೃಪ್ತಿಕರ ಪ್ರತಿಕ್ರಿಯೆಗಳು ಬರುವವರೆಗೆ ರೈತರ ಆಂದೋಲನವನ್ನು ಯಥಾಸ್ಥಿತಿಯಲ್ಲಿ ಮುಂದುವರಿಸಲಾಗುವುದು ಎಂದು ಸರ್ವಾನುಮತದಿಂದ ನಿರ್ಧರಿಸಿತ್ತು.

ನವೆಂಬರ್ 19 ರಂದು 3 ಕೃಷಿ ಕಾನೂನುಗಳನ್ನು ರದ್ದುಗೊಳಿಸುವುದಾಗಿ ಪ್ರಧಾನ ಮಂತ್ರಿಗಳು ಪ್ರಕಟಿಸಿದ ನಂತರ ನವಂಬರ್ 21ರಂದು ಎಸ್.ಕೆ.ಎಂ. ಪ್ರಧಾನಿಗಳಿಗೆ ಬರೆದ ಪತ್ರದಲ್ಲಿ ಆರು ಬೇಡಿಕೆಗಳನ್ನು ಮುಂದಿಡಲಾಗಿತ್ತು.

ಕೇಂದ್ರ ಸರಕಾರ ಈ ಪತ್ರಕ್ಕೆ ಸ್ಪಂದಿಸುವ ಬದಲು ಅನೌಪಚಾರಿಕವಾಗಿ ಕೆಲಸ ಮಾಡಲು ಬಯಸುವಂತಿದೆ ಮತ್ತು ರೈತರು ಎತ್ತಿರುವ ಪ್ರಶ್ನೆಗಳಿಗೆ ಚೂರು–ಚೂರಾಗಿ ಪ್ರತಿಕ್ರಿಯಿಸುತ್ತಿದೆ.. ರೈತ ಸಂಘಟನೆಗಳು ಅಲ್ಪ–ಸ್ವಲ್ಪ ಮೌಖಿಕ ಭರವಸೆಗಳನ್ನು ನಂಬಿಕೊಂಡು ಚಳುವಳಿಯನ್ನು ಹಿಂತೆಗೆದುಕೊಂಡ ನಂತರ ಸರಕಾರ ಹಿಂದೇಟು ಹಾಕಿರುವ ಕಹಿ ಅನುಭವದಿಂದಾಗಿ, ತಾವು ಎತ್ತಿದ ಪ್ರತಿಯೊಂದು ಪ್ರಶ್ನೆಗೆ ಔಪಚಾರಿಕ ಸ್ಪಂದನೆ ದೊರೆಯದೆ ಈ ಹೋರಾಟವನ್ನು ನಿಲ್ಲಿಸುವುದಿಲ್ಲ, ಮತ್ತು ಈ ಆಂದೋಲನದ ಭಾಗವಾಗಿ ರೈತರು ಹಾಗೂ ಅವರ ಬೆಂಬಲಿಗರ ವಿರುದ್ಧ ಹೂಡಿರುವ ಎಲ್ಲಾ ಪ್ರಕರಣಗಳನ್ನು ಹಿಂಪಡೆಯುವ ಭರವಸೆ ಔಪಚಾರಿಕವಾಗಿ ಬರಬೇಕು ಎಂದು ಸಭೆಯ ನಂತರ ಎಸ್‌ಕೆಎಂ ಮುಖಂಡರು ಹೇಳಿದ್ದರು..

ಈ ಸಭೆಯಲ್ಲಿ, ಬಾಕಿ ಇರುವ ಪ್ರಶ್ನೆಗಳನ್ನು ಕುರಿತಂತೆ ಭಾರತ ಸರ್ಕಾರದೊಂದಿಗೆ ಮಾತುಕತೆ ನಡೆಸಲು ಅಶೋಕ್ ಧವಳೆ, ಬಲ್ಬೀರ್ ಸಿಂಗ್ ರಾಜೇವಾಲ್, ಗುರ್ನಾಮ್ ಸಿಂಗ್ ಚದುನಿ, ಶಿವ ಕುಮಾರ್ ಕಕ್ಕಾಜಿ ಮತ್ತು ಯುದ್ಧ್ವೀರ್ ಸಿಂಗ್ ಒಳಗೊಂಡ 5 ಸದಸ್ಯರ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿ ಈ ವಿಷಯಗಳ ಕುರಿತು ಕೆಲವು ರಾಜ್ಯ ಸರ್ಕಾರಗಳೊಂದಿಗೆ ಮಾತುಕತೆ ನಡೆಸಬೇಕಾದ ರಾಜ್ಯ ಮಟ್ಟದ ತಂಡಗಳನ್ನು ಸಹ ನಿರ್ಧರಿಸುತ್ತದೆ, ಮುಂದಿನ ಎರಡು ದಿನಗಳನ್ನು ಭಾರತ ಸರ್ಕಾರದ ಪ್ರತಿಕ್ರಿಯೆಗೆ ಮತ್ತು ಎಸ್‌ಕೆಎಂ ರಚಿಸಿರುವ ಸಮಿತಿಯೊಂದಿಗೆ ಮಾತುಕತೆ ನಡೆಸಿ ಒಂದು ಇತ್ಯರ್ಥಕ್ಕೆ ಬರಲು ಅನುವು ಮಾಡಿಕೊಡಲು ಬಿಟ್ಟು, ಮುಂದಿನ ಸಭೆಯನ್ನು ಡಿಸೆಂಬರ್ 7 ಕ್ಕೆ ನಿಗದಿಪಡಿಸಲಾಗಿತ್ತು.

ಕೊನೆಗೂ ಸರಕಾರ ಔಪಚಾರಿಕವಾಗಿ ಪತ್ರವನ್ನು ಕಳಿಸಿದ ನಂತರ ಡಿಸೆಂಬರ್ 9ರಂದು ಎಸ್.ಕೆ.ಎಂ. ಸದ್ಯಕ್ಕೆ ಚಳುವಳಿಯನ್ನು ನಿಲ್ಲಿಸಲು ನಿರ್ಧರಿಸಿದೆ.

ಈ ಅದ್ಭುತ ಮತ್ತು ಐತಿಹಾಸಿಕ ವಿಜಯವನ್ನು ಲಖೀಂಪುರ ಖೇರಿಯಲ್ಲಿ ಪ್ರಾಣಾರ್ಪಣೆ ಮಾಡಿದ ರೈತರು ಸೇರಿದಂತೆ ಚಳವಳಿಯ ಸುಮಾರು 715 ಹುತಾತ್ಮರಿಗೆ ಅರ್ಪಿಸುವುದಾಗಿ ಎಸ್.ಕೆ.ಎಂ. ಹೇಳಿದೆ ಮತ್ತು ಮತ್ತು ಒಂದು ಅಭೂತಪೂರ್ವ ಚಳುವಳಿಯನ್ನು ನಡೆಸಿದ್ದಕ್ಕಾಗಿ ಹಾಗೂ ಇದು ಗಳಿಸಿರುವ ಭವ್ಯ ಸಾಧನೆಗಾಗಿ ಎಲ್ಲ ಪ್ರತಿಭಟನಾ ನಿರತ ರೈತರು ಮತ್ತು ನಾಗರಿಕರನ್ನು ಮತ್ತು ಅವರ ಬೆಂಬಲಿಗರನ್ನು ಹೃತ್ಪೂರ್ವಕವಾಗಿ ಅಭಿನಂದಿಸಿದೆ.

ರೈತರ ಒಗ್ಗಟ್ಟು, ಶಾಂತಿ ಮತ್ತು ತಾಳ್ಮೆಯೇ ಈ ಗೆಲುವಿನ ಕೀಲಿಕೈಯಾಗಿದ್ದು, ಯಾವುದೇ ಸಂದರ್ಭದಲ್ಲೂ ಇದು ಕ್ಷೀಣಗೊಳ್ಳಲು ಬಿಡುವುದಿಲ್ಲ, ಎಸ್.ಕೆ.ಎಂ., ಜಾಗರೂಕವಾಗಿರುತ್ತದೆ, ಸಾಮೂಹಿಕವಾಗಿ ನಿರ್ಧರಿಸುತ್ತದೆ ಮತ್ತು ಆಶ್ವಾಸನೆಗಳನ್ನು ಈಡೇರಿಸುವಂತೆ ಖಾತ್ರಿಪಡಿಸುತವುದಾಗಿ ರೈತರು ಪ್ರತಿಜ್ಞೆ ಕೈಗೊಳ್ಳುತ್ತಾರೆ ಎಂದೂ ಅದು ಹೇಳಿದೆ.

ರಕ್ಷಣಾ ಪಡೆಗಳ ಮುಖ್ಯಸ್ಥರಾಗಿದ್ದ ಜನರಲ್ ಬಿಪಿನ್ ರಾವತ್ ಮತ್ತು ಅವರ ಸಂಗಡಿಗರ ನಿಧನಕ್ಕೆ ರಾಷ್ಟ್ರವು ಶೋಕಾಚರಣೆ ನಡೆಸುತ್ತಿರುವುದರಿಂದ ರೈತರ ಈ ವಿಜಯಕ್ಕೆ ಸಂಬಂಧಿಸಿದಂತೆ ಎಲ್ಲಾ ಆಚರಣೆಗಳನ್ನು ಮುಂದೂಡಲು ನಿರ್ಧರಿಸಿರುವ ಸಂಯುಕ್ತ ಕಿಸಾನ್ ಮೋರ್ಚಾ ವಿಜಯೋತ್ಸವವನ್ನು ಡಿಸೆಂಬರ್ 11 ರಂದು ರೈತರು ಸಂಭ್ರಮಾಚರಣೆಗಳೊಂದಿಗೆ ಪ್ರತಿಭಟನಾ ಸ್ಥಳಗಳನ್ನು ಒಟ್ಟಿಗೇ ತೆರವು ಮಾಡುವ ಸಂದರ್ಭದಲ್ಲಿ ನಡೆಸಲಾಗುವುದು ಎಂದು ಹೇಳಿದೆ.

ಭಾರತ ಸರ್ಕಾರವು ಪ್ರತಿಭಟನಾ ನಿರತ ರೈತರಿಗೆ ನೀಡಿರುವ ಆಶ್ವಾಸನೆಗಳಿಗೆ ಬದ್ಧವಾಗಿರುವಂತೆ ಖಚಿತಪಡಿಸಿಕೊಳ್ಳಲು ಮತ್ತು ಮುಂದಿನ ಕಾರ್ಯಾಚರಣೆಯನ್ನು ರೂಪಿಸಲು, ತನ್ನ ಮುಂದಿನ ಸಭೆಯನ್ನು ಜನವರಿ 15 ರಂದು ದೆಹಲಿಯಲ್ಲಿ ನಡೆಸುವುದಾಗಿಯೂ ಎಸ್.ಕೆ.ಎಂ. ಹೇಳಿದೆ.

ಈ ಸುದೀರ್ಘ ಆಂದೋಲನದ ಉದ್ದಕ್ಕೂ ಪ್ರತಿಭಟನಾ ಸ್ಥಳಗಳಲ್ಲಿ ತಾಳ್ಮೆಯಿಂದ ಬೆಂಬಲ ವ್ಯಕ್ತಪಡಿಸಿದ ಸ್ಥಳೀಯ ಸಮುದಾಯಗಳಿಗೆ ಎಸ್.ಕೆ.ಎಂ.. ಧನ್ಯವಾದಗಳನ್ನು ಅರ್ಪಿಸುತ್ತ, ಅವರಿಗೆ ಉಂಟಾದ ಅನಾನುಕೂಲತೆಗಳಿಗಾಗಿ ಕ್ಷಮೆಯಾಚಿಸುವುದಾಗಿ ಹೇಳಿದೆ. ಈ ಆಂದೋಲನದಲ್ಲಿ ರೈತರೊಂದಿಗೆ ಕಾರ್ಮಿಕ ಸಂಘಗಳು, ಮಹಿಳಾ ಸಂಘಟನೆಗಳು ಮತ್ತು ಯುವಜನ/ವಿದ್ಯಾರ್ಥಿ ಸಂಘಟನೆಗಳು ಜತೆಗೂಡಿ ಹೋರಾಡಿವೆ. ವಕೀಲರು ಕಾನೂನು ನೆರವೊದಗಿಸಿದರು ಮತ್ತು ಸೌಹಾರ್ದ್ಯ ಪ್ರದರ್ಶಿಸಿದರು; ವೈದ್ಯರು ವೈದ್ಯಕೀಯ ಶಿಬಿರಗಳನ್ನು ಸ್ಥಾಪಿಸಿ ಅವಿರತ ಸೇವೆ ಸಲ್ಲಿಸಿದರು; ವಿವಿಧ ಧಾರ್ಮಿಕ ಸಂಸ್ಥೆಗಳು ಲಂಗರ್‌ಗಳನ್ನು ಸ್ಥಾಪಿಸಿ ಪ್ರತಿಭಟನಾಕಾರರಿಗೆ ಬೇಷರತ್ತಾಗಿ ಮತ್ತು ಅಡೆತಡೆಯಿಲ್ಲದೆ ಆಹಾರ ನೀಡಿದವು; ಮಾನವ ಹಕ್ಕುಗಳ ಗುಂಪುಗಳು ಸೇರಿದಂತೆ ವಿವಿಧ ಪ್ರಗತಿಪರ ಸಂಘಟನೆಗಳು, ಹಲವಾರು ಕಲಾವಿದರು. ಆಂದೋಲನದಲ್ಲಿ ನಿರಂತರವಾಗಿ ಕೈಜೋಡಿಸಿದರು; ಇವರೆಲ್ಲರಿಗೂ, ಹಲವಾರು ಸಂಸ್ಥೆಗಳು, ಹೆದ್ದಾರಿ ಧಾಬಾ ಮಾಲೀಕರು ಮತ್ತು ಕಿಸಾನ್ ಆಂದೋಲನಕ್ಕೆ ಅದರ ಸಾಂಸ್ಥಿಕ ಸಭೆಗಳನ್ನು ನಡೆಸಲು ಜಾಗ ನೀಡಿದ ಜನರು ಅನಿವಾಸಿ ಭಾರತೀಯರು ಮತ್ತು ಅಂತರರಾಷ್ಟ್ರೀಯ ರೈತ ಸಂಘಟನೆಗಳು ಮತ್ತು ತಂತಮ್ಮ ಸ್ಥಳಗಳಲ್ಲಿ ಸೌಹಾರ್ದ ಕಾರ್ಯಾಚರಣೆಗಳು ಇತ್ಯಾದಿಗಳ ಮೂಲಕ ಬೆಂಬಲಿಸಿದವರು ಮತ್ತು ಹಿತೈಷಿಗಳು ಸೇರಿದಂತೆ ಎಲ್ಲರಿಗೂ ಸಂಯುಕ್ತ ಕಿಸಾನ್ ಮೋರ್ಚಾ ಈ ಸಂದರ್ಭದಲ್ಲಿ ನೀಡಿರುವ ಹೇಳಿಕೆಯಲ್ಲಿ ಕೃತಜ್ಞತೆಗಳನ್ನು ಸಲ್ಲಿಸಿದೆ.

ಎಐಕೆಎಸ್ ಅಭಿನಂದನೆ: ಸ್ವಾತಂತ್ರ್ಯದ 75ನೇ ವರ್ಷದಲ್ಲಿ ಪ್ರಜಾಪ್ರಭುತ್ವ ಮತ್ತು ಜಾತ್ಯತೀತ ಮೌಲ್ಯಗಳಿಗೆ ಒಂದು ಮಹತ್ವದ ವಿಜಯ

ಒಂದು ವರ್ಷದ ದೀರ್ಘ ಹೋರಾಟದ ನಂತರ ದೇಶದ ರೈತರು ಚಾರಿತ್ರಿಕ ವಿಜಯವನ್ನು ಸಾಧಿಸಿದ್ದಾರೆ ಎನ್ನುತ್ತ ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಇದಕ್ಕಾಗಿ ರೈತರನ್ನು ಅಭಿನಂದಿಸಿದೆ.

ಹಲವು ಲಿಖಿತ ಮಾತುಕತೆಗಳ ನಂತರ ಅಂತಿಮವಾಗಿ ಭಾರತ ಸರಕಾರ ರೈತರ ಬಾಕಿಯಿರುವ ಎಲ್ಲ ಆಗ್ರಹಗಳನ್ನು ಸ್ವೀಕರಿಸಲು ಒಪ್ಪಿದೆ, ಅದರಿಂದಾಗಿ ಸಂಯುಕ್ತ ಕಿಸಾನ್ ಮೋರ್ಚಾ ಅಧಿಕೃತವಾಗಿ ಹೋರಾಟದ ವಿಜಯವನ್ನು ಪ್ರಕಟಿಸಿದೆ ಮತ್ತು 378 ದಿನಗಳ ನಂತರ ರೈತರು ದಿಲ್ಲಿಯ ಗಡಿಗಳಿಂದ ಹೋಗುತ್ತಾರೆ ಎಂದು ತಿಳಿಸಿದೆ.

ಇದು ದೇಶದ ರೈತರ ಮತ್ತು ಕಾರ್ಮಿಕರ ಐಕ್ಯ ಹೋರಾಟಕ್ಕೆ ಮತ್ತು 715 ಹುತಾತ್ಮರ ಅತ್ಯುನ್ನತ ತ್ಯಾಗಕ್ಕೆ ಸಿಕ್ಕಿರುವ ವಿಜಯ ಎಂದಿರುವ ಎಐಕೆಎಸ್ ಅಧ್ಯಕ್ಷರಾದ ಅಶೋಕ ಧವಳೆ ಮತ್ತು ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ ಈ ಹೋರಾಟದಲ್ಲಿ ನೇರವಾಗಿ ಮತ್ತು ಪರೋಕ್ಷವಾಗಿ ಕೈಜೋಡಿಸಿದ ಎಲ್ಲ ಪ್ರಜಾಪ್ರಭುತ್ವ ಶಕ್ತಿಗಳನ್ನು ಅಭಿನಂದಿಸುವುದಾಗಿ ಹೇಳಿದ್ದಾರೆ.

ಇದು ಸ್ವಾತಂತ್ರ್ಯಾನಂತರದ ಅತಿ ದೀರ್ಘವಾದ ಹೋರಾಟ. ಸ್ವಾತಂತ್ರ್ಯದ 75ನೇ ವರ್ಷಾಚರಣೆ ನಡೆಸುತ್ತಿರುವಾಗ ನಮ್ಮ ಸಂವಿಧಾನದಲ್ಲಿ ನಿರೂಪಿಸಿರುವ, ಆದರೆ ಈಗ ಆಳುವ ಸರ್ವಾಧಿಕಾರಶಾಹೀ ಸರಕಾರದಿಂದ ಹಲವಾರು ದಾಳಿಗಳಿಗೆ ಒಳಗಾಗಿರುವ ಪ್ರಜಾಪ್ರಭುತ್ವ ಮೌಲ್ಯಗಳನ್ನು ಈ ಚಳುವಳಿ ಬಲಪಡಿಸುತ್ತದೆ. ಇದು ನಮ್ಮ ದೇಶದ ಪ್ರಜಾಪ್ರಭುತ್ವ ಮತ್ತು ಜಾತ್ಯತಿತ ಮೌಲ್ಯಗಳಿಗೆ ಸಿಕ್ಕ ವಿಜಯ ಎಂದಿರುವ ಇವರು ಎಸ್‌ಕೆಎಂ ನಿರ್ಧಾರದ ಪ್ರಕಾರ ಡಿಸೆಂಬರ್ 11ರಂದು ವಿಜಯೋತ್ಸವ ನಡೆಸಬೇಕು ಮತ್ತು ಈ ಹೋರಾಟದ ಸಂದೇಶವನ್ನು ಮತ್ತು ಈ ವಿಜಯದ ಮಹತ್ವವನ್ನು ದೇಶದ ಪ್ರತಿ ಮೂಲೆಗೂ ಒಯ್ಯಬೇಕು ಎಂದು ಎಐಕೆಎಸ್‌ನ ಎಲ್ಲ ಘಟಕಗಳಿಗೆ ಕರೆ ನೀಡಿದ್ದಾರೆ.

ಕರಾಳ ಕಾಯ್ದೆಗಳ ವಿರುದ್ಧ ಹೋರಾಟ ಗೆದ್ದಿದೆ, ಆದರೆ ಕನಿಷ್ಟ ಬೆಂಬಲ ಬೆಲೆಯನ್ನು ಖಾತ್ರಿಪಡಿಸುವ ಕಾಯ್ದೆಗಾಗಿ ಹೋರಾಟ ಮುಂದುವರೆಯುತ್ತದೆ ಎಂದು ಅಶೋಕ ಧವಳೆ ಮತ್ತು ಹನ್ನನ್ ಮೊಲ್ಲ ಹೇಳಿದ್ದಾರೆ.

ನಾಗಾಲ್ಯಾಂಡ್ ಹತ್ಯೆಗಳಿಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

"ಸಶಸ್ತ್ರ ಪಡೆಗಳಿಗೆ ವಿಶೇಷ ಅಧಿಕಾರಗಳ ಕಾಯ್ದೆ" ಹೋಗಬೇಕು

ನಾಗಾಲ್ಯಾಂಡ್‌ನ ಮೋನ್ ಜಿಲ್ಲೆಯಲ್ಲಿ ಸೇನೆಯ ಒಡ್ಡೊಡ್ಡು ಕಾರ್ಯಾಚರಣೆ ಕನಿಷ್ಠ 17 ನಾಗರಿಕರು ಮತ್ತು ಒಬ್ಬ ಸೈನಿಕನ ಹತ್ಯೆಗೆ ಕಾರಣವಾಗಿದೆ ಎಂದು ಸಿಪಿಐ(ಎಂ) ನ ಪೊಲಿಟ್ ಬ್ಯೂರೋ ಬಲವಾಗಿ ಖಂಡಿಸಿದೆ.

ಮೃತರ ಕುಟುಂಬಗಳಿಗೆ ಪೊಲಿಟ್ ಬ್ಯೂರೋ ತನ್ನ ಹೃತ್ಪೂರ್ವಕ ಸಂತಾಪವನ್ನು ವ್ಯಕ್ತಪಡಿಸುತ್ತ, ಕೇಂದ್ರ ಸರ್ಕಾರ ತಕ್ಷಣವೇ ಸೂಕ್ತ ಪರಿಹಾರವನ್ನು ಪ್ರಕಟಿಸಬೇಕೆಂದು ಒತ್ತಾಯಿಸಿದೆ.

"ಗುಪ್ತಚರ ವೈಫಲ್ಯದಿಂದ" ಈ ಭೀಕರ ಹತ್ಯೆಗಳು ಸಂಭವಿಸಿವೆ ಎಂದು ಸೇನೆಯು ನೀಡಿರುವ ವಿವರಣೆಯು ಇಂತಹ ಹೊಂಚು ಪ್ರಮಾದ ಹೇಗೆ ಸಂಭವಿಸಿತು ಎಂಬುದನ್ನು ವಿವರಿಸುವುದಿಲ್ಲ. ಒಂದು ಆಮೂಲಾಗ್ರ ತನಿಖೆಯನ್ನು ತ್ವರಿತವಾಗಿ ನಡೆದು ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು.

ಈ ಘಟನೆಯು ಮತ್ತೊಮ್ಮೆ, ಸಶಸ್ತ್ರ ಪಡೆಗಳ (ವಿಶೇಷ ಅಧಿಕಾರ) ಕಾಯಿದೆ (AFSPA) ಯನ್ನು ಶಾಸನ ಪುಸ್ತಕದಿಂದ ತೆಗೆದುಹಾಕುವ ಅಗತ್ಯವನ್ನು ಒತ್ತಿಹೇಳುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಸಾರ್ವತ್ರಿಕ ಮುಷ್ಕರ

ಫೆಬ್ರವರಿ 23-24 ರಂದು

ಪುಟ 14 ನೋಡಿ

ಡಿ.16–17 ರಂದು ಬ್ಯಾಂಕ್ ಮುಷ್ಕರ

ಸಾರ್ವಜನಿಕ ವಲಯುದ ಬ್ಯಾಂಕ್‌ಗಳ ಖಾಸಗೀಕರಣವನ್ನು ವಿರೋಧಿಸಿ ಬ್ಯಾಂಕ್ ಸಂಘಗಳ ಐಕ್ಯ ವೇದಿಕೆ (ಯುಎಫ್‌ಬಿಯು) ಡಿಸೆಂಬರ್ 16 ಹಾಗೂ 17ರಂದು ರಾಷ್ಟ್ರವ್ಯಾಪಿ ಬ್ಯಾಂಕ್ ಮುಷ್ಕರಕ್ಕೆ ಕರೆ ನೀಡಿದೆ. ಇದಕ್ಕೆ ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಸ್ವತಂತ್ರ ವಲಯವಾರು ಅಖಿಲ ಭಾರತ ಒಕ್ಕೂಟಗಳು ಮತ್ತು ಸಂಘಗಳ ಜಂಟಿ ವೇದಿಕೆಯು ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ. .

ಪುಟ 12 ನೋಡಿ

ಸಂಪಾದಕೀಯ

ಮೊಟ್ಟೆಯನ್ನು ತಿನ್ನುವುದು ಅಥವ ತಿನ್ನದಿರುವುದು ಮಕ್ಕಳ ಹಕ್ಕು

'ಏನು ತಿನ್ನಬೇಕು, ಏನು ತಿನ್ನಬಾರದು ಎಂಬುದು ಅವರವರ ಇಷ್ಟಕ್ಕೆ ಬಿಟ್ಟದ್ದು. ತಾವು ಬಯಸಿದ್ದನ್ನು ತಿನ್ನಲು ಜನರಿಗೆ ತಡೆಯೊಡ್ಡಬೇಡಿ. ಕೆಲವರ ಅಹಂ ಸಂತೃಪ್ತಿಗೊಳಿಸಬೇಡಿ' ಎಂದು ಇತ್ತೀಚೆಗೆ ಗುಜರಾತ್ ಹೈಕೋರ್ಟ್ ಹೇಳಿದೆ. ಶಾಲೆಗಳಲ್ಲಿ ಮಕ್ಕಳಿಗೆ ಊಟದ ಜೊತೆಯಲ್ಲಿ ಮೊಟ್ಟೆ ನೀಡುವುದನ್ನು ವಿರೋದಿಸುತ್ತಿರುವ ನಮ್ಮ ಕೆಲವು ಮಠಾಧೀಶರ ಕಣ್ಣು ತೆರೆಯಿಸಲು ಗುಜಾರಾತ್ ಹೈಕೋರ್ಟ್ ನೀಡಿದ ಸ್ಪಷ್ಟ ಹೇಳಿಕೆ ಸಹಕಾರಿಯಾಗಬಹುದು. ನಮ್ಮ ಆ ಕೆಲವು ಮಠಾಧೀಶರಿಗೆ ಊ.ಮ.ಹೇ. ಬಿಟ್ಟು ಮಾಡಲು ಬೇರೆ ಕೆಲಸ ಇದ್ದಂತೆ ಕಾಣುವುದಿಲ್ಲ. ಆಗಾಗ ಎಚ್ಚರಗೊಂಡು ತಾರ್ಕಿಕವಲ್ಲ ಹೇಳಿಕೆ ನೀಡಿ ಸುದ್ದಿಮಾಡುತ್ತಾರೆ.

ಮಕ್ಕಳಿಗೆ ತಿನ್ನಲು ಮೊಟ್ಟೆ ನೀಡುವ ವಿಷಯದಲ್ಲಿ ಮಠಾಧೀಶರ ಹಸ್ತಕ್ಷೇಪ ಸಲ್ಲದು. ನಮ್ಮ ಮಕ್ಕಳು ಎನ್ನುವ ಕಾರಣಕ್ಕೆ ಅವರ ಹಕ್ಕುಗಳನ್ನು ನಿರಾಕರಿಸುವುದು ಸರಿಯೆ? ಡಿಸೆಂಬರ್ 10 ವಿಶ್ವ ಮಾನವ ಹಕ್ಕುಗಳ ದಿನ. ಅಲ್ಲವೆ? ಮಕ್ಕಳು ಮಾನವರಲ್ಲವೆ? ಅವರಿಗೂ ಹಕ್ಕುಗಳು ಇರಬೇಕಲ್ಲವೆ? ಜಾತಿ ಧರ್ಮದ ಹೆಸರಿನಲ್ಲಿ ಶಾಲೆಯಲ್ಲಿ ಮಕ್ಕಳಿಗೆ ಮೊಟ್ಟೆ ನೀಡುವುದನ್ನು ವಿರೋಧಿಸುವುದರಿಂದ ಮಕ್ಕಳ ಆಹಾರದ ಹಕ್ಕನ್ನು ಕಿತ್ತುಕೊಂಡಂತೆ ಆಗುವುದಿಲ್ಲವೆ?

ಊಟ, ಉಪಹಾರಕ್ಕೆ ಏನಿರಬೇಕು ಎಂಬುದನ್ನು ತಾವೇ ನಿರ್ಧರಿಸುವ ಹಕ್ಕನ್ನು ನಮ್ಮ ಮಕ್ಕಳಿಗೆ ನಾವೇ ಕೊಟ್ಟಿಲ್ಲ. ತಮಗೆ ಬೇಕಾದುದ್ದನ್ನು ಪಡೆದು ತಿನ್ನುವುದು ಅವರಿಗೆ ಸಾಧ್ಯವಿಲ್ಲದ ಮಾತು. ತಮ್ಮ ಮಕ್ಕಳ ಆರೋಗ್ಯಕರ ಬೆಳವಣಿಗೆಯನ್ನು ಬಯಸುವ ಪೋಷಕರು, ತಮ್ಮ ಮಕ್ಕಳನ್ನು ದೇಶಕ್ಕಾಗಿ ಬೆಳೆಸಬಯಸುವವರು ಮಕ್ಕಳಿಗೆ ಆಯ್ಕೆಯ ಹಕ್ಕನ್ನು ಉದಾರವಾಗಿಯೇ ನೀಡಬೇಕು. ಆದರೆ ನಮ್ಮ ದೇಶದಲ್ಲಿ ಶೇ.50 ರಷ್ಟು ಮಕ್ಕಳು ಮತ್ತು ಮಹಿಳೆಯರು ರಕ್ತ ಹೀನತೆಯಿಂದ ಬಳಲುತ್ತಿರುತ್ತಾರೆ. ಮಕ್ಕಳಲ್ಲಿನ ಅಪೌಷ್ಟಿಕತೆಯನ್ನು ಹೋಗಲಾಡಿಸಲು ಅವರಿಗೆ ಶಾಲೆಯಲ್ಲಿ ಮೊಟ್ಟೆ ನೀಡುವ ಕ್ರಮವನ್ನು ನಾವೆಲ್ಲರೂ ಬೆಂಬಲಿಸಬೇಕು.

ಮನೆಯಲ್ಲಿ ಬಹಳಷ್ಟು ಪಾಲಕರಿಗೆ ಊಟದ ಜೊತೆಯಲ್ಲಿ ತಮ್ಮ ಮಕ್ಕಳಿಗೆ ಮೊಟ್ಟೆ ನೀಡುವುದು ಸಾಧ್ಯವಾಗದು. ಶಾಲೆಯಲ್ಲಿ ಅದನ್ನು ಒದಗಿಸಲು ಸಾಧ್ಯವಾದರೆ ಅದು ಅತ್ಯಂತ ಸ್ವಾಗತಾರ್ಹ ವಿಚಾರ. ಮೊಟ್ಟೆ ತಿನ್ನಲು ಬಯಸುವ ಪ್ರತಿಯೊಂದು ಮಗುವಿಗೂ ಅದು ತಪ್ಪದೆ ಸಿಗುತ್ತಿರಬೇಕು. ಮೊಟ್ಟೆ ತಿನ್ನಬೇಕು ಎಂದು ಒತ್ತಾಯಿಸುವುದು. ಈ ಹಂತದಲ್ಲಿ ಅವರಿಗೆ ಅದು ಸಾಧ್ಯವಾಗದಿರಬಹುದು. ಆದರೆ ಹದ್ದಿನಂತೆ ಬಂದು ಮಕ್ಕಳ ಕೈಯಿಂದ ಅದನ್ನು ಕಿತ್ತುಕೊಳ್ಳಲು ಮಠಾಧೀಶರು ತಮ್ಮ ಕಾವಿ ಪೋಷಾಕನ್ನು ಬಳಸಿ ಬೆದರಿಸಲು ಮುಂದಾಗಬಾರದು. ಒಂದು ಮಗು, ಅದು ಯಾವುದೇ ಜಾತಿ ಕುಟುಂಬದಿಂದ ಬಂದಿರಲಿ, ಅದು ಮೊಟ್ಟೆ ನೀಡಿದರೆ ಅದು ತಿನ್ನಲು ಕಲಿತರೆ ಪಾಲಕರ ತಮ್ಮ ಮಕ್ಕಳ ಕುರಿತಾದ ಆತಂಕ ಪರಿಹಾರವಾಗುವುದು. ಮಕ್ಕಳ ಅಪೌಷ್ಠಿಕತೆಗೆ ದಿನಕ್ಕೊಂದು ಮೊಟ್ಟೆ ಔಷಧಿಯಂತೆ ಕೆಲಸ ಮಾಡುವುದು. ಹೀಗೆ ಎಲ್ಲಾ ಜಾತಿ ಧರ್ಮಗಳ ಮಕ್ಕಳು ಆರೋಗ್ಯಕರವಾಗಿ ಬೆಳೆದು ದೇಶದ ಅಭಿವೃದ್ಧಿಗೆ ತಮ್ಮ ಕೊಡುಗೆ ನೀಡಲು ಸಮರ್ಥರಾಗುವರು. ಅಪೌಷ್ಟಿಕತೆಗೆ ಬಲಿಯಾದ ಮಕ್ಕಳು ಕೋವಿಡ್ ಅಂತಹ ಸಾಂಕ್ರಾಮಿಕಕ್ಕೆ ಸುಲಭವಾಗಿ ಸಿಕ್ಕಿಹಾಕಿಕೊಂಡು ಪಾಲಕರಿಗೂ, ದೇಶಕ್ಕೂ ಸಮಸ್ಯೆಯಾಗಿ, ಆರ್ಥಿಕ ಹೊರೆಯಾಗಿ ಪರಿಣಮಿಸುವರು.

ಇಂದು ನಮ್ಮ ದೇಶದಲ್ಲಿ ನಮ್ಮ ಆಹಾರ ಪದ್ಧತಿಗಳು ದ್ವೇಷದ ರಾಜಕಾರಣಕ್ಕೆ ಬಲಿಯಾಗುತ್ತಿವೆ. ಕೆಲವರು ತಮ್ಮ ಆಹಾರ ಪದ್ಧತಿಯೇ ಶ್ರೇಷ್ಠ ಎಂಬ ಮನೋಭಾವ ಉಳ್ಳವರಾಗಿದ್ದು ಸಮಾಜದಲ್ಲಿ ಅಶಾಂತಿಯನ್ನು ಹುಟ್ಟುಹಾಕುತ್ತಿರುತ್ತಾರೆ. ಯಾವ ಆಹಾರವೂ ಮೇಲಲ್ಲ, ಯಾವುದೂ ಕೀಳಲ್ಲ. ಮಕ್ಕಳ ದೈಹಿಕ, ಮಾನಸಿಕ, ಬೌದ್ಧಿಕ ಬೆಳವಣಿಗೆಗೆ ಮೊಟ್ಟೆ ಪರಿಪೂರ್ಣ ಆಹಾರ ಎಂದು ದೇಶ, ವಿದೇಶಗಳ ತಜ್ಞರು ಒಪ್ಪಿಕೊಂಡಿದ್ದಾರೆ.

ಬುದ್ಧ ಭಾರತ ಕಂಡ ಮಹಾನ್ ಚಿಂತಕ. ಆತ ಅಹಿಂಸೆಯನ್ನು ಬಲವಾಗಿ ಪ್ರತಿಪಾದಿಸಿದರೂ ಸಸ್ಯಹಾರವನ್ನು ಪ್ರತಿಪಾದಿಸಲಿಲ್ಲ. ಆತನ ಭಕ್ತರು, ಬೌಧ ಭಿಕ್ಷುಗಳು ಮಾಂಸಹಾರವನ್ನೇ ಸೇವಿಸುತ್ತಾರೆ. ಅದಕ್ಕೆ ಚಾರಿತ್ರಿಕ ಕಾರಣಗಳು ಇರಬಹುದು. ನಮ್ಮ ದೇಶದ ಜನ ತಮ್ಮ ಆಹಾರ ಪದ್ಧತಿಗಳನ್ನು ಬೆಳೆಸಿಕೊಂಡು ಬಂದಿದ್ದಾರೆ ಬದಲಾಯಿಸಿಕೊಂಡಿದ್ದಾರೆ. ಬೇರೆಯವರಿಂದ ಪಡೆದುಕೊಂಡಿದ್ದಾರೆ. ಈ ಕುರಿತು ಪೂರ್ವಾಗ್ರಹಗಳಿಗೆ ಅವಕಾಶ ಇರಬಾರದು. ನಮಗೆ ದ್ವೇಷ ಇರಬೇಕಾಗಿಲ್ಲ. ಆಹಾರ ಪದ್ದತಿಗಳು ಬೇರೆ ಬೇರೆಯಾಗಿದ್ದರೂ ನಾವೆಲ್ಲರೂ ಅನ್ಯೋನ್ಯವಾಗಿ ಬದುಕಲು ಸಾಧ್ಯವಿದೆ. ಮಕ್ಕಳ ಆರೋಗ್ಯದ ವಿಷಯದಲ್ಲಿ ಮಾತ್ರ ಚೌಕಾಸಿ ಸಲ್ಲದು. ಮಕ್ಕಳಿಗೆ ಶಾಲೆಯಲ್ಲಿ ಬಿಸಿಯೂಟದ ಜೊತೆಯಲ್ಲಿ ಮೊಟ್ಟೆ ನೀಡುವ ನಿರ್ಧಾರದಿಂದ ಸರ್ಕಾರ ಹಿಂದೆ ಸರಿಯಬಾರದು. ಇಲ್ಲಿ ಪಾಲಕರ ಇಷ್ಟ ಮುಖ್ಯವಲ್ಲ. ಮಕ್ಕಳ ಬಯಕೆಯೇ ಮುಖ್ಯ.

ರೈತ ವಿರೋಧಿ ಕಾಯ್ದೆ ವಾಪಸ್ಸು ಪಡೆಯಲು ಡಿ.12ಕ್ಕೆ ಬೆಳಗಾವಿಯಲ್ಲಿ ರೈತರ ಬೃಹತ್ ಸಮಾವೇಶ

ರೈತರ ಸಮರಶೀಲ ಹೋರಾಟಕ್ಕೆ ಮಣಿದು ಕೇಂದ್ರ ಸರಕಾರವು ರದ್ದುಪಡಿಸಿದ ಕೃಷಿ ಕಾಯ್ದೆಗಳ ಮುಂದುವರೆದ ಭಾಗವಾಗಿ ರಾಜ್ಯದ ಬಿಜೆಪಿ ಸರ್ಕಾರವು ಜಾರಿಗೊಳಿಸಿದ ಕೃಷಿ ವಿರೋಧಿ ಕಾಯ್ದೆಗಳನ್ನು ರದ್ದುಗೊಳಿಸಬೇಕೆಂದು ಡಿಸೆಂಬರ್ 12ರಂದು ರಾಜ್ಯಮಟ್ಟದ ರೈತರ ಸಮಾವೇಶವನ್ನು ಬೆಳಗಾವಿಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಯುಕ್ತ ಹೋರಾಟ ಕರ್ನಾಟಕದ ಸಂಚಾಲಕ ಜಿ.ಸಿ. ಬಯ್ಯಾರೆಡ್ಡಿ ತಿಳಿಸಿದರು.

ಪ್ರೆಸ್‌ಕ್ಲಬ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಡಿಸೆಂಬರ್ 13, 2021 ರಿಂದ ಬೆಳಗಾವಿಯಲ್ಲಿ ಆರಂಭವಾಗುವ ಚಳಿಗಾಲದ ವಿಧಾನಸಭಾ ಅಧಿವೇಶನದಲ್ಲಿ ರಾಜ್ಯ ಸರ್ಕಾರ ಜಾರಿಗೊಳಸಿರುವ ಭೂ ಸುಧಾರಣೆ ಕಾಯ್ದೆ, ಎಪಿಎಂಸಿ ಕಾಯ್ದೆ, ಜಾನುವಾರು ಹತ್ಯೆ ನಿಷೇಧ ಕಾಯ್ದೆಯ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳುವುದಲ್ಲದೆ, ಬೆಳೆ ನಷ್ಟ ಪರಿಹಾರ, ಇತ್ಯಾದಿ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸುತ್ತಿದ್ದೇವೆ ಎಂದರು.

ರಾಜ್ಯದ ಸುಮಾರು 50 ರೈತರು, ದಲಿತರು, ಕಾರ್ಮಿಕರು, ಸಾಮಾಜಿಕ ಸಂಘಟನೆಗಳು, ವಿದ್ಯಾರ್ಥಿ, ಯುವಜನ, ಮಹಿಳಾ ಸಂಘಟನೆಗಳನ್ನು ಒಳಗೊಂಡು ರಚನೆಯಾಗಿರುವ ಸಂಯುಕ್ತ ಹೋರಾಟ–ಕರ್ನಾಟಕ ಸಂಘಟಿಸುತ್ತಿರುವ ಈ 'ರೈತರ ಅಧಿವೇಶನ'ದ ಅಧ್ಯಕ್ಷತೆಯನ್ನು ಬಂಡಾಯ ಸಾಹಿತಿಗಳಾದ ಶ್ರೀ ಅಲ್ಲಮ ಪ್ರಭು ಬೆಟ್ಟದೂರು ವಹಿಸಲಿದ್ದಾರೆ. ಸಂಯುಕ್ತ ಕಿಸಾನ್ ಮೋರ್ಚಾ(ಎಸ್‌ಕೆಎಂ)ದ ರಾಷ್ಟ್ರೀಯ ನಾಯಕ ಯೋಗೇಂದ್ರ ಯಾದವ್ ಅಧಿವೇಶನವನ್ನು ಉದ್ಘಾಟನೆ ಮಾಡಲಿದ್ದಾರೆ. ರಾಜ್ಯದ ಎಲ್ಲೆಡೆಗಳಿಂದ ಸಾವಿರಾರು ಸಂಖ್ಯೆಯಲ್ಲಿ ಸಮಾವೇಶದಲ್ಲಿ ಭಾಗವಹಿಸಲಿದ್ದರೆ ಎಂದು ತಿಳಿಸಿದರು.

ಕೃಷಿ ಭೂಮಿ, ಕೃಷಿ ಉತ್ಪಾದನೆ, ಕೃಷಿ ಮಾರುಕಟ್ಟೆ, ಇತ್ಯಾದಿ ಕೃಷಿ ಸಂಬಂಧಿತ ಎಲ್ಲಾ ಕ್ಷೇತ್ರಗಳನ್ನು ಜಗತ್ತಿನ, ದೇಶದ ಕಾರ್ಪೋರೇಟ್ ಕಂಪನಿಗಳಿಗೆ ವಹಿಸಲು ರೂಪಿಸಲಾಗಿದ್ದ ಕರಾಳ ಮೂರು ಕೃಷಿ ಕಾಯ್ದೆಗಳನ್ನು ಶತಮಾನದ ಚಾರಿತ್ರಿಕ ರೈತರ ಹೋರಾಟಕ್ಕೆ ಮಣಿದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಕಾಯ್ದೆಗಳನ್ನು ಹಿಂತೆಗೆದುಕೊಂಡಿದೆ.

ಹೀಗಾಗಿ ಡಿಸೆಂಬರ್ 13 ರಿಂದ ಆರಂಭವಾಗಲಿರುವ ಬೆಳಗಾವಿ ಚಳಿಗಾಲದ ಅಧಿವೇಶನದಲ್ಲಿ ಕೂಡಲೇ ಕಾಯ್ದೆಗಳನ್ನು ಹಿಂತೆಗೆದುಕೊಳ್ಳಬೇಕು, ಅಲ್ಲದೆ ವಿಪರೀತವಾದ ಮಳೆಯಿಂದ ಲಕ್ಷಾಂತರ ಹೆಕ್ಟೇರ್‌ನಲ್ಲಿ ಸಾವಿರಾರು ಕೋಟಿ ರೂ.ಗಳ ಬೆಳೆ ನಷ್ಟವಾಗಿದ್ದು, ಆಹಾರ ಧಾನ್ಯ ಬೆಳೆಗಳ ಎಕರೆಗೆ ಕನಿಷ್ಠ 25,000 ರೂ, ತರಕಾರಿ, ತೋಟಗಾರಿಕೆ ಬೆಳೆಗಳ ಎಕರೆಗೆ ಕನಿಷ್ಟ 1 ಲಕ್ಷ ರೂ. ಬೆಳೆ ನಷ್ಟ ಪರಿಹಾರವನ್ನು ನೀಡಬೇಕು. ಸಂಕಷ್ಟದಲ್ಲಿ ಇರುವ ಹೈನುಗಾರಿಕೆ ರೈತರಿಗೆ ರಾಜ್ಯ ಸರ್ಕಾರ ನೀಡುತ್ತಿರುವ ಪ್ರೋತ್ಸಾಹ ಧನವನ್ನು 5 ರಿಂದ 15 ರೂ.ಗೆ ಏರಿಸಬೇಕು ಎಂದು ಆಗ್ರಹಿಸಿದರು.

ಸಂಯುಕ್ತ ಹೋರಾಟ ಕರ್ನಾಟಕ ಸಂಚಾಲಕ ಬಡಗಲಪುರ ನಾಗೇಂದ್ರ ಮಾತನಾಡಿ, ರಾಜ್ಯದ ಬಿಜೆಪಿ ಸರ್ಕಾರ ಕಾಯ್ದೆಗಳನ್ನು ವಾಪಸ್ಸು ಪಡೆಯಲು ಹಿಂದೇಟು ಹಾಕುತ್ತಿದೆ. ರೈತ ವಿರೋಧಿ ರಾಜ್ಯ ಸರ್ಕಾರದ ಭೂ ಸ್ವಾಧೀನ ಕಾಯ್ದೆ ತಿದ್ದುಪಡಿಗಳನ್ನು ರದ್ದು ಮಾಡಬೇಕು ಅದರೊಂದಿಗೆ, ಬಗರ್ ಹುಕ್ಕಂ, ಅರಣ್ಯ ಭೂಮಿ ಸಕ್ರಮಕ್ಕೆ ಅಗತ್ಯವಿರುವ ಕಾನೂನು ತಿದ್ದುಪಡಿಗಳನ್ನು ರೂಪಿಸಬೇಕು. ರಾಜ್ಯದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಕೃಷಿ ಭೂಮಿ ಖರೀದಿ ಮಾಡಲು ರಾಜ್ಯದ ಬಜೆಟ್‌ನಲ್ಲಿ ಕನಿಷ್ಠ 2000 ಕೋಟಿ ರೂ. ಗಳನ್ನು ಮೀಸಲಿಡಬೇಕು, ಗ್ರಾಮೀಣ ಬಡವರ ಮನೆ ನಿವೇತನದ ಗಂಭೀರ ಸಮಸ್ಯೆಯ ಪರಿಹಾರಕ್ಕೆ ಬಿ.ಡಿ.ಎ. ಮಾದರಿಯಲ್ಲಿ ಭೂ ಸ್ವಾಧೀನ ಮಾಡಿ, ಉಚಿತವಾಗಿ ನಿವೇಶನ, ವಸತಿ ನೀಡಬೇಕು ಎಂದು ತಿಳಿಸಿದರು.

ಹೆಚ್.ವಿ. ದಿವಾಕರ್ ಜಾನುವಾರು ಹತ್ಯೆ ಕಾಯ್ದೆಯ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳುವರಿಗೆ ವಯಸ್ಸಾದ, ಕೃಷಿಗೆ ಯೋಗ್ಯವಲ್ಲದ ದನ, ಕರುಗಳನ್ನು ಮಾರುಕಟ್ಟೆ ದರದಲ್ಲಿ ರಾಜ್ಯ ಸರ್ಕಾರವೇ ಖರೀದಿ ಮಾಡಬೇಕು, ವ್ಯಾಪಕ ಕೃಷಿ ಸಾಲ ನೀಡಿಕೆ, ವಿಶೇಷ ಸಂದರ್ಭಗಳಲ್ಲಿ ಸಾಲ ಮನ್ನಾದಂತಹ ಅಂಶಗಳಿಗೆ ಸಂಬಂಧಿಸಿದ "ಋಣ ಮುಕ್ತ ಕಾಯ್ದೆ" ಯನ್ನು ಜಾರಿಗೆ ತರಬೇಕು, ರೈತರ ಆತ್ಮಹತ್ಯೆಗಳನ್ನು ತಡೆಯಲು 'ಕನಿಷ್ಠ ಬೆಂಬಲ ಬೆಲೆ ಕಾನೂನು'ನ್ನು ರಚನೆ ಮಾಡಬೇಕು, ಜನವಿರೋಧಿ ಹೊಸ ಶಿಕ್ಷಣ ನೀತಿ (ಎನ್.ಇ.ಪಿ) ಹಿಂತೆಗೆದುಕೊಳ್ಳಬೇಕು, ಅಸಂಘಟಿತ ಕಾರ್ಮಿಕರಿಗೆ ಮಾಸಿಕ 21,000 ರೂ. ಕನಿಷ್ಟ ವೇತನ ಜಾರಿ ಮಾಡಬೇಕು. ಸಾರ್ವಜನಿಕ ಉದ್ದಿಮೆಗಳ ಮಾರಾಟ ನಿಲ್ಲಿಸಬೇಕು, ಸಾಮಾನ್ಯ ಜನರನ್ನು ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ರಕ್ಷಿಸಲು, ಪಡಿತರ ವ್ಯವಸ್ಥೆಯನ್ನು ಬಲಪಡಿಸಬೇಕು. ಉದ್ಯೋಗ ಖಾತರಿ ಯೋಜನೆಯ ಕೂಲಿಯನ್ನು 600 ಕ್ಕೆ ಹೆಚ್ಚಳ ಮಾಡಿ, ನಗರ ಪ್ರದೇಶಗಳಿಗೂ ವಿಸ್ತರಿಸಬೇಕು ಇತ್ಯಾದಿ ಬೇಡಿಕೆಗಳನ್ನು ಆಗ್ರಹಿಸಿ ಬೆಳಗಾವಿಯ "ರೈತರ ಅಧಿವೇಶನ" ಸಂಘಟಿಸಲಾಗುತ್ತಿದ್ದು, ಕೂಡಲೇ ಈ ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಹತ್ತಾರು "ಕಿಸಾನ್ ಮಹಾ ಪಂಚಾಯತ್"ಗಳನ್ನು ಸಂಘಟಿಸಿ, "ದೆಹಲಿ ಮಾದರಿ"ಯ ಹೋರಾಟಗಳನ್ನು ಹಮ್ಮಿಕೊಳ್ಳಲು ಸಂಯುಕ್ತ ಹೋರಾಟ–ಕರ್ನಾಟಕ ನಿರ್ಧರಿಸಿದೆ ಎಂದು ಹೇಳಿದರು.

ರೈತರು, ಶೋಷಿತರ ಈ ಹೋರಾಟವನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕೆಂದು ಎಚ್ಚರಿಕೆ ನೀಡುತ್ತೇವೆ. ಈ ರೈತ ಆಂದೋಲನದಲ್ಲಿ ರೈತರು ಮಾತ್ರವಲ್ಲದೆ, ದಲಿತರು, ಕಾರ್ಮಿಕರು, ವಿದ್ಯಾರ್ಥಿ, ಯುವಜನರು, ಮಹಿಳೆಯರು ಸೇರಿದಂತೆ ಎಲ್ಲಾ ವಿಭಾಗದ ಜನತೆ ಭಾಗವಹಿಸಲಿದ್ದಾರೆ.

ಸಂಚಾಲನಾ ಸಮಿತಿಯಲ್ಲಿ ಕವಿತಾ ಕುರುಗಂಟಿ, ಕೋಡಿಹಳ್ಳಿ ಚಂದ್ರಶೇಖರ್, ಗುರುಪ್ರಸಾದ ಕೆರಗೊಡು, ಮಾವಳ್ಳಿ ಶಂಕರ್, ಕೆ.ವಿ.ಭಟ್, ಪಿಆರ್‌ಎಸ್ ಮಣಿ, ನೂರ್ ಶ್ರೀಧರ್, ದೇವಿ, ವಾಸುದೇವರೆಡ್ಡಿ, ಜಯಣ್ಣ ಇದ್ದಾರೆ.

ಎಲ್ಲಾ ಮುನಿಸಿಪಲ್ ಕಾರ್ಮಿಕ ಸೇವೆ ಖಾಯಂಮಾತಿಗೆ ಒತ್ತಾಯಿಸಿ ಪ್ರತಿಭಟನೆ



ಎಲ್ಲಾ ಗುತ್ತಿಗೆ–ಹೊರಗುತ್ತಿಗೆ, ನೇರ ಪಾವತಿ, ಸಮಾನ ಕೆಲಸಕ್ಕೆ ಸಮಾನ ವೇತನದ ಅಡಿಯಲ್ಲಿ ದುಡಿಯುತ್ತಿರುವ ಪೌರಕಾರ್ಮಿಕರು, ಲೋಡರ್‌ಗಳು, ವಾಟರ್ ಮ್ಯಾನ್‌ಗಳು, ಕಸದ ಅಟೋ ಚಾಲಕರು, ಕಂಪ್ಯೂಟರ್ ಅಪರೇಟರ್‌ಗಳು, ಯು.ಜಿ.ಡಿ ಕಾರ್ಮಿಕರು, ಕಛೇರಿ ಸಹಾಯಕರು, ಮಸಣ ಕಾರ್ಮಿಕರು, ಉದ್ಯಾನವನದಲ್ಲಿ ದುಡಿವ ಕಾರ್ಮಿಕರು ಇವರೆಲ್ಲರನ್ನೂ ಖಾಯಂಗೊಳಿಸಬೇಕು ಎಂದು ಆಗ್ರಹಿಸಿ ಪ್ರತಿಭಟನೆ ನಡೆಸಿದರು.

ಡಿಸೆಂಬರ್ 7 ರಂದು ಸಿಐಟಿಯು ನೇತೃತ್ವದಲ್ಲಿ ಪೌರ ಕಾರ್ಮಿಕರ ಸಂಘ, ನೀರು ಸರಬರಾಜು ಕಾರ್ಮಿಕರು, ಕಸದ ಅಟೋ ಚಾಲಕ ಮತ್ತು ಸಹಾಯಕರ ಸಂಘಗಳು ಜಂಟಿಯಾಗಿ ತುಮಕೂರು ನಗರ ಟೌನ್ ಹಾಲ್‌ನಿಂದ ಸ್ವಾತಂತ್ರ ಚೌಕದ ತನಕ ಪ್ರತಿಭಟನಾ ಮೆರವಣಿಗೆ ನಡೆಸಿ ಮನವಿ ಪತ್ರವನ್ನು ಸಲ್ಲಿಸಿದರು.

ಗುತ್ತಿಗೆ–ಹೊರಗುತ್ತಿಗೆ, ನೇರ ಪಾವತಿ, ಸಮಾನ ಕೆಲಸಕ್ಕೆ? ಸಮಾನ ವೇತನದಡಿಯಲ್ಲಿ ಹತ್ತಾರು ವರ್ಷಗಳ ಕಾಲ ದುಡಿದು ಸೇವೆಯಲ್ಲಿ ಇರುವಾಗಲೇ ಮರಣ ಹೊಂದಿರುವ ಕಾರ್ಮಿಕರ ಕುಟುಂಬದ ದುಡಿವ ಮುಖ್ಯಸ್ಥರನ್ನು ಕಳೆದುಕೊಂಡು ಬೀದಿಗೆ ಬಿದ್ದಿರುತ್ತಾರೆ. ಹಾಗಾಗಿ ಸೇವಯಲ್ಲಿ ಇರುವಾಗಲೇ ಮರಣ ಹೊಂದಿರುವ ಎಲ್ಲಾ ಮುನಿಸಿಪಾಲ್ ಕಾರ್ಮಿಕ ಅವಲಂಬಿತರಿಗೆ ಕಡ್ಡಾಯವಾಗಿ ಮಾನವಿಯತೆಯ ನೆಲೆಯಲ್ಲಿ ಕೆಲಸ ನೀಡುಬೇಕು ಎಂದು ಸಹ ಆಗ್ರಹಿಸಿದ್ದಾರೆ.

ತಮ್ಮ ಸೇವೆಯನ್ನು ಖಾಯಂಗೊಳಿಸುವ ತನಕ ಎಲ್ಲಾ ಕಾರ್ಮಿಕರಿಗೆ ನೇರ ಪಾವತಿಯಡಿಯಲ್ಲಿ ಸಂಬಳ ನೀಡಬೇಕು. ಸುಪ್ರೀಂಕೋರ್ಟ್ ತೀರ್ಪಿನಂತೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು, ಎಲ್ಲಾ ಕಾರ್ಮಿಕರಿಗೆ ವಾರದಲ್ಲಿ ಸಂಬಳ ಸಹಿತ ರಜೆ, ರಾಷ್ಟ್ರೀಯ ಹಬ್ಬಗಳ ರಜೆ, ನಿಗದಿತ ಹಬ್ಬಗಳ ರಜೆ, ಗಳಿಕೆ ರಜೆ, ಅನಾರೋಗ್ಯ ರಜೆ, ಹತ್ತಾರು ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತಿ/ಮರಣ ಹೊಂದುವ ಮುನಿಸಿಪಲ್ ಕಾರ್ಮಿಕರಿ/ಅವಲಂಬಿತರಿಗೆ ಉಪಧನ ನೀಡುವ ಸಂಬಂದ ಸ್ಪಷ್ಟವಾದ ಅದೇಶ ಹೊರಡಿಸಬೇಕು ತಿಳಿಸಿದರು.

ಎಲ್ಲಾ ಗುತ್ತಿಗೆ ಮುನಿಸಿಪಾಲ್ ಕಾರ್ಮಿಕರು ಅಲ್ಪವೇತನದಲ್ಲಿ ಬದುಕುತ್ತಿದ್ದು, ಸರ್ಕಾರದ ಗೃಹಭಾಗ್ಯ ಯೋಜನೆಯಡಿಯಲ್ಲಿ ಉಚಿತ ನೀವೆಶನವನ್ನು ನೀಡಬೇಕು, ಕಸವನ್ನು ಸಂಗ್ರಹಿಸಿ ನಗರದ ಸ್ವಚ್ಛತೆಯಲ್ಲಿ ತೊಡಗಿಕೊಂಡಿರುವ ಎಲ್ಲಾ ಪೌರಕಾರ್ಮಿಕರು, ಲೋಡರ್ಸ್, ಕ್ಲೀನರ್ಸ್ ಮತ್ತು ಕಸದ ವಾಹನದ ಚಾಲಕರನ್ನು ಪೌರ ಕಾರ್ಮಿಕರೆಂದು ಪರಿಗಣಿಸಬೇಕು. ಸಮವಸ್ತ್ರ, ಸುರಕ್ಷಾತ ಸಲಕರಣೆಗಳು, ರೈನ್ ಕೋಟ್‌ಗಳನ್ನು ಕಡ್ಡಾಯವಾಗಿ ನೀಡಬೇಕು.

ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ಮಾಡುವ ನೌಕರರ ಸಂಖ್ಯೆ ನಿಗದಿಗೆ ಸಿ ಎಂಡ್ ಆರ್. ಇದೆ. ಪೌರಕಾರ್ಮಿಕ ಸಂಖ್ಯೆ ನಿಗದಿಪಡಿಸುವಾಗ 700 ಜನಸಂಖ್ಯೆಗೆ ಒಬ್ಬರಂತೆ ಮತ್ತು ಸಾಲಿಡ್ ವೇಸ್ಟ್ ಮ್ಯಾನೇಜಮೆಂಟ್ ಈ ಮೂರು ಆದೇಶಗಳಿದ್ದು ಸರ್ಕಾರ ಯಾವುದಾದರೂ ಒಂದು ಜಾರಿಗೆ ತರಲು ನಿರ್ದಿಷ್ಟ ಆದೇಶ ಹೊರಡಿಸಬೇಕು.

ಜಿಲ್ಲಾ ಮಟ್ಟದಲ್ಲಿ ಸಭೆ ನಡೆಸಲು ಉಪವಿಭಾಗಧಿಕಾರಿ ಭರವಸೆ:

ಪ್ರತಿಭಟನಾ ಸ್ಥಳಕ್ಕೆ ಅಗಮಿಸಿದ ಜಿಲ್ಲಾ ಯೋಜನಾ ನಿರ್ದೇಶಕರು, ಉಪ ವಿಭಾಗಧಿಕಾರಿ ಅಜಯ್ ಅವರು ಮುನಿಸಿಪಾಲ್ ಕಾರ್ಮಿಕರ ಸೇವೆಗಳು ನಾಗರೀಕ ಸಮಾಜಕ್ಕೆ ಅಗತ್ಯ ನಿಮ್ಮ ಸಮಸ್ಯೆಗಳನ್ನು ಪರಿಹರಿಸಲು ಸಭೆಯೊಂದನ್ನು ತಕ್ಷಣದಲ್ಲೇ ನಡೆಸುವುದಾಗಿ ತಿಳಿಸಿದರು.

ಇದಕ್ಕೂ ಮುನ್ನ ಮಹಾನಗರ ಪಾಲಿಕೆ ಮುಂಭಾಗದಲ್ಲಿ ಪ್ರತಿಭಟನಾಕಾರರು ನಗರ ಪಾಲಿಕೆ ಆಯುಕ್ತೆ ಶ್ರೀಮತಿ ರೇಣುಕ ಅವರಿಗೆ ಮನವಿ ಸಲ್ಲಿಸಿದರು. ಎಲ್ಲಾ ಕಾರ್ಮಿಕರಿಗೆ ರಜೆಗಳಿಗೆ ಸಂಬಂಧಿಸಿದಂತೆ ಹಾಗೂ ಅಧಿಕ ಕೆಲಸದ ಒತ್ತಡ ಕುರಿತು ದೂರು ನೀಡಿದರು. ಎಲ್ಲಾರಿಗೂ ತಿಂಡಿ ಹಾಗೂ ರೈನ್ ಕೋಟ್ ನೀಡುವಂತೆ ಅಗ್ರಹಿಸಿದರು. ಇದಕ್ಕೆ ಸಕಾರತ್ಮಕವಾಗಿ ಸ್ಪಂದಿಸಿದ ಅಯುಕ್ತರು ಕಾನೂನು ಬದ್ದ ಸೌಲಭ್ಯಗಳನ್ನು ನೀಡುವುದಾಗಿ ಹೇಳಿದರು.

ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಆಗ್ರಹ:

ನಗರ ಪಾಲಿಕೆಯಲ್ಲಿ ಖಾಲಿ ಇರುವ ಪೌರ ಕಾರ್ಮಿಕರು, ವಾಟರ್ ಮ್ಯಾನ್, ಚಾಲಕರು ಲೋಡರ್‌ಗಳ ಹುದ್ದೆಗಳಿಗೆ ಹಾಲಿ ದುಡಿಯುತ್ತಿರುವ ಕಾರ್ಮಿಕರನ್ನೇ ನೇಮಿಸುವಂತೆ ಪ್ರತಿಭಟನಾಕಾರರು ಒತಾಯಿಸಿದರು.

ಸಿಐಟಿಯು ಅಧ್ಯಕ್ಷ ಸೈಯದ್ ಮುಜೀಬ್, ಕಾರ್ಯದರ್ಶಿ ಎನ್.ಕೆ.ಸುಬ್ರಮಣ್ಯ, ಪೌರ ಕಾರ್ಮಿಕ ಸಂಘದ ಕೆಂಪರಾಜು ನಾಗರಾಜು, ಸಿ.ವೆಂಕಟೇಶ್, ತುಮಕೂರು ಜಿಲ್ಲಾ ನೀರು ಸರಬರಾಜು ನೌರಕರರ ಸಂಘ ಅಧ್ಯಕ್ಷ ಕುಮಾರ್, ಉಪಾಧ್ಯಕ್ಷರಾದ ನಂದೀಶ್, ನಟರಾಜು, ಚಂದ್ರಪ್ಪ, ಕಾರ್ಯದರ್ಶಿಗಳಾದ ಮಂಜುನಾಥ್, ಪ್ರಕಾಶ್, ತುಮಕೂರು ಮಹಾನಗರ ಪಾಲಿಕೆ ಕಸದ ಅಟೋ ಚಾಲಕರು ಮತ್ತು ಸಹಾಯಕರ ಸಂಘ (ರಿ.) ಕಾರ್ಯದರ್ಶಿ ಶಿವರಾಜು, ಸಹ ಕಾರ್ಯದರ್ಶಿಗಳಾದ ಮಂಜುನಾಥ್, ಇರ್ಫಾನ್, ಶ್ರೀನಿವಾಸ್, ಸಾದ್ದಿಕ್ ಪಾಷ, ಅಂಜನಪ್ಪ, ಚಂದ್ರಣ್ಣ ಇತರರು ಮಾತನಾಡಿದರು.



ಅಲ್ಪಸಂಖ್ಯಾತರ ಮೇಲಿನ ದಾಳಿ ಖಂಡಿಸಿ ಸಿಪಿಐ(ಎಂ) ಪ್ರತಿಭಟನೆ



ಬೆಂಗಳೂರು:

ಅಲ್ಪಸಂಖ್ಯಾತರ ಮೇಲಿನ ದಾಳಿ ಮತ್ತು ಅವರ ಸಾಂವಿಧಾನಿಕ ಹಕ್ಕುಗಳ ದಮನ ಖಂಡಿಸಿ ಸಿಪಿಐ(ಎಂ) ಕೇಂದ್ರ ಸಮಿತಿಯ ಕರೆಯ ಮೇರೆಗೆ ದೇಶದಾದ್ಯಂತ ಪ್ರತಿಭಟನೆಯನ್ನು ಸೋಮವಾರ ಬೆಂಗಳೂರು ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)– ಸಿಪಿಐ(ಎಂ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿ ಅಡಿಯಲ್ಲಿ ಪ್ರತಿಭಟನೆ ನಡೆಯಿತು.

ಭಾರತದ ಬಹುತ್ವ ಸಂಸ್ಕೃತಿಯನ್ನು ನಾಶ ಮಾಡಲು ಹೊರಟಿರುವ ಬಿಜೆಪಿ ಮತ್ತದರ ಗುಂಪುಗಳು ದೇಶದ ಎಲ್ಲ ಕಡೆಗಳಲ್ಲೂ ಅಲ್ಪಸಂಖ್ಯಾತ ಸಮುದಾಯದವರ ಮೇಲೆ ಹಿಂಸೆ, ಹಲ್ಲೆ, ದಾಳಿ ನಡೆಸುತ್ತಿರುವ ಕೃತ್ಯವನ್ನು ಖಂಡಿಸಲಾಯಿತು. ದೇಶದ ಎಲ್ಲಾ ಸಮಸ್ಯೆಗಳಿಗೂ 'ಮುಸ್ಲಿಮರೇ' ಕಾರಣ ಎಂದು ಜನಮಾನಸದಲ್ಲಿ ದ್ವೇಷದ ಬೀಜ ಬಿತ್ತುತ್ತಿರುವ ಕೋಮುವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸಬೇಕೆಂದು ಕರೆ ನೀಡಲಾಯಿತು. ಅದೇ ಸಮಯದಲ್ಲಿ ಅಲ್ಪಸಂಖ್ಯಾತರ ಮಧ್ಯೆ ಇರುವ ಮೂಲಭೂತವಾದಿ ಪ್ರವೃತ್ತಿಯನ್ನು ತೊಡೆದುಹಾಕಬೇಕೆಂದು ವಿನಂತಿ ಮಾಡಲಾಯಿತು.

ಪ್ರತಿಭಟನೆಯನ್ನು ಉದ್ದೇಶಿಸಿ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯೆ ವಿಮಲಾ ಕೆ.ಎಸ್., ದಕ್ಷಿಣ ಜಿಲ್ಲಾ ಕಾರ್ಯದರ್ಶಿ ಬಿ.ಎನ್. ಮಂಜುನಾಥ್, ಉತ್ತರ ಜಿಲ್ಲಾ ಕಾರ್ಯದರ್ಶಿ ಪ್ರತಾಪ್ ಸಿಂಹ, ಉತ್ತರ ದಕ್ಷಿಣ ಜಿಲ್ಲಾ ಮುಖಂಡರಾದ ಮುನಿರಾಜು ಮತ್ತು ಬಿ.ರಾಜಶೇಖರ್ ಮೂರ್ತಿ ಮಾತನಾಡಿದರು. ಉತ್ತರ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯೆ ಟಿ. ಲೀಲಾವತಿ ಕಾರ್ಯಕ್ರಮ ನಡೆಸಿಕೊಟ್ಟರು.

ದ.ಕ, ಉಡುಪಿ ಜಿಲ್ಲೆಗಳಲ್ಲಿ ಪ್ರತಿಭಟನೆ:

ಅಲ್ಪಸಂಖ್ಯಾತರ ಮೇಲೆ ಹಿಂದುತ್ವ ಕೋಮುವಾದಿಗಳು ಪದೇ ಪದೇ ಮಾಡುತ್ತಿರುವ ದಾಳಿಗಳನ್ನು ಖಂಡಿಸಿ ಹಾಗೂ ಅವರಿಗೆ ಸಂವಿಧಾನಬದ್ಧ ರಕ್ಷಣೆ ನೀಡಲು ಆಗ್ರಹಿಸಿ ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಸಮಗ್ರ ಅಭಿವೃದ್ಧಿಗೆ ಒತ್ತಾಯಿಸಿ ದ.ಕ.ಜಿಲ್ಲೆ ಹಾಗೂ ಉಡುಪಿ ಜಿಲ್ಲೆಯ ಪಟ್ಟಣಗಳಲ್ಲಿ ಸಿಪಿಐ(ಎಂ) ಪಕ್ಷದ ಆಯಾ ವಲಯ ಘಟಕಗಳ ನೇತೃತ್ವದಲ್ಲಿ ಪ್ರತಿಭಟನಾ ಪ್ರದರ್ಶನವನ್ನು ನಡೆಸಲಾಯಿತು. ಅಲ್ಪಸಂಖ್ಯಾಕರ ರಕ್ಷಣೆ ಆಗ್ರಹಿಸಿ ದೇಶದಾದ್ಯಂತ ಪ್ರದರ್ಶನ ನಡೆಸಲು ಸಿಪಿಐ(ಎಂ) ಕೇಂದ್ರ ಸಮಿತಿ ನೀಡಿದ ಕರೆಯ ಮೇರೆಗೆ ಈ ಪ್ರತಿಭಟನಾ ಪ್ರದರ್ಶನವನ್ನು ನಡೆಸಲಾಗಿದೆ. ಈ ವೇಳೆ ಕೋಮುದ್ವೇಷ ಹಬ್ಬಿಸುವ ಬಿಜೆಪಿ ಹಾಗೂ ಸಂಘ ಪರಿವಾರದ ವಿರುದ್ಧ ಪ್ರತಿಭಟನಾಕಾರರು ಘೋಷಣೆ ಕೂಗಿದರು.

ಮಂಗಳೂರು ನಗರದ ಕ್ಲಾಕ್‌ಟವರ್ ಬಳಿ ಡಿಸೆಂಬರ 3 ರಂದು ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಸಮಿತಿ ಮತ್ತು ಉತ್ತರ ಸಮಿತಿ ಜಂಟಿಯಾಗಿ ನಡೆಸಿದ ಪ್ರತಿಭಟನೆಯನ್ನುದ್ದೇಶಿಸಿ ಸಿಪಿಐ(ಎಂ) ದ.ಕ. ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮುನೀರ್ ಕಾಟಿಪಳ್ಳ, ಸುನಿಲ್ ಕುಮಾರ್ ಬಜಾಲ್, ಮಂಗಳೂರು ನಗರ ದಕ್ಷಿಣ ಸಮಿತಿ ಕಾರ್ಯದರ್ಶಿ ಸಂತೋಷ್ ಬಜಾಲ್ ಮಾತನಾಡಿದರು. ಸಿಪಿಐ(ಎಂ) ಮಂಗಳೂರು ಉತ್ತರ ಸಮಿತಿ ಕಾರ್ಯದರ್ಶಿ ಬಶೀರ್ ಅಹಮ್ಮದ್, ಸಮಿತಿಗಳ ಮುಖಂಡರಾದ ಬಿ.ಕೆ.ಇಮ್ತಿಯಾಜ್, ಭಾರತಿ ಬೋಳಾರ್, ದಯಾನಂದ ಶೆಟ್ಟಿ, ಅಶೋಕ್ ಶ್ರೀಯಾನ್, ನವೀನ್ ಕೊಂಚಾಡಿ, ಕೃಷ್ಣ ತಣ್ಣೀರುಬಾವಿ, ದಿನೇಶ್ ಶೆಟ್ಟಿ, ಪ್ರಮೀಳಾ ಶಕ್ತಿನಗರ ಪ್ರದರ್ಶನದಲ್ಲಿ ಭಾಗವಹಿಸಿದ್ದರು.

ಬೆಳ್ತಂಗಡಿ ಮಿನಿ ವಿಧಾನಸೌಧದ ಮುಂಭಾಗದಲ್ಲಿ ಡಿಸೆಂಬರ 6 ರಂದು ಸಿಪಿಐ(ಎಂ) ಬೆಳ್ತಂಗಡಿ ತಾಲೂಕು ಸಮಿತಿಯ ವತಿಯಿಂದ ಪ್ರತಿಭಟನಾ ಪ್ರದರ್ಶನವನ್ನು ನಡೆಸಲಾಯಿತು. ಪಕ್ಷದ ತಾಲೂಕು ಕಾರ್ಯದರ್ಶಿ ಶಿವಕುಮಾರ್, ತಾಲೂಕು ಸಮಿತಿ ಸದಸ್ಯ ಶೇಖರ ಲಾಯಿಲ ಪ್ರದರ್ಶನವನ್ನುದ್ದೇಶಿಸಿ ಮಾತನಾಡಿದರು. ಪ್ರತಿಭಟನೆಯಲ್ಲಿ ತಾಲೂಕು ಸಮಿತಿ ಮುಖಂಡರಾದ ವಸಂತ ನಡ, ನ್ಯಾಯವಾದಿ ಸುಕನ್ಯ, ನಿಲೇಶ್, ಸುಜಿತ್ ಭಾಗವಹಿಸಿದರು.

ಉಡುಪಿ ಜಿಲ್ಲಾ ಸಿಪಿಐ(ಎಂ) ನೇತೃತ್ವದಲ್ಲಿ ಉಡುಪಿಯ ಅಜ್ಜರಕಾಡು ಹುತಾತ್ಮ ಸ್ಮಾರಕದ ಬಳಿ ಡಿಸೆಂಬರ 7 ರಂದು ಪ್ರತಿಭಟನಾ ಪ್ರದರ್ಶನವನ್ನು ನಡೆಸಲಾಯಿತು. ಪ್ರತಿಭಟನಾಕಾರರನ್ನುದ್ದೇಶಿಸಿ ಸಿಪಿಐ(ಎಂ) ರಾಜ್ಯ ಕೇಂದ್ರದ ಸದಸ್ಯ ಕೆ. ಶಂಕರ್, ಉಡುಪಿ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಮಾತನಾಡಿದರು. ಪಕ್ಷದ ಉಡುಪಿ ತಾಲೂಕು ಕಾರ್ಯದರ್ಶಿ ಶಶಿಧರ ಗೊಲ್ಲ, ಪಕ್ಷದ ಉಡುಪಿ ಜಿಲ್ಲಾ ಸಮಿತಿ ಸದಸ್ಯರಾದ ಸುರೇಶ್ ಕಲ್ಲಾಗರ, ವೆಂಕಟೇಶ್ ಕೋಣಿ, ಕವಿರಾಜ್ ಮೊದಲಾದವರು ಉಪಸ್ಥಿತರಿದ್ದರು.



ಮಾರ್ಗಸೂಚಿ ಉಲ್ಲಂಘನೆ : 10 ಸಾವಿರ ಖಾಸಗಿ ಶಾಲೆಗಳಿಗೆ ಬೀಗ? ನಿರ್ಲಕ್ಷ್ಯದ ಹೊಣೆ ಹೊರುವವರು ಯಾರು?



ಗುರುರಾಜ ದೇಸಾಯಿ

ಸುರಕ್ಷತಾ ಮಾನದಂಡ ಹಾಗೂ ಸೂಕ್ತ ಮಾರ್ಗಸೂಚಿಗಳನ್ನು ಸರಿಯಾಗಿ ಪಾಲನೆ ಮಾಡದಂತ ರಾಜ್ಯದ 10 ಸಾವಿರಕ್ಕೂ ಹೆಚ್ಚು ಖಾಸಗಿ ಶಾಲೆಗಳು ಬಾಗಿಲು ಮುಚ್ಚುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ. ಸುರಕ್ಷತಾ ಮಾನದಂಡಗಳನ್ನು ಖಾಸಗಿ ಶಾಲೆಗಳು ಅನುಸರಿಸದೆ ಇರುವುದಕ್ಕೆ ಕಾರಣ ಯಾರು? ಇದರ ಹೊಣೆಯನ್ನು ಹೊರುವವರು ಯಾರು ಎಂಬ ಪ್ರಶ್ನೆ ಎದ್ದಿದೆ. ಶಾಲೆಗಳು ಮುಚ್ಚಿದರೆ ಮಕ್ಕಳ ಭವಿಷ್ಯವೇನು ಎಂಬ ಪ್ರಶ್ನೆ ಪೋಷಕರನ್ನು ಕಾಡುತ್ತಿದೆ.

ಲೋಕೋಪಯೋಗಿ ಇಲಾಖೆ ಮಾರ್ಗಸೂಚಿಗಳನ್ನು ನೀಡಿದ್ದು, ಅಗ್ನಿಶಾಮಕ ದಳ ಮತ್ತು ಸುರಕ್ಷತಾ ಪ್ರಮಾಣಗಳನ್ನು 10 ದಿನಗಳ ಗಡುವಿನೊಳಗೆ ಪಡೆಯುವಂತೆ ಸೂಚಿಸಿದೆ. ಕೇವಲ 10 ದಿನದೊಳಗೆ ಪ್ರಮಾಣ ಪತ್ರಗಳನ್ನು ಹೇಗೆ ಪಡೆಯುವುದು? ಸರಕಾರ ಯಾಕೆ ಈ ರೀತಿ ಒತ್ತಡ ಹೇರುತ್ತಿದೆ? ಸರಿಯಾದ ಮಾರ್ಗಸೂಚಿಗಳನ್ನು ನೀಡುತ್ತಿಲ್ಲ, ನಾವು ದಾಖಲೆಗಳನ್ನು ನೀಡಲು ಸಿದ್ದರಿದ್ದೇವೆ, ಆದರೆ ಅದಕ್ಕೆ ಕಾಲಾವಕಾಶ ನೀಡಬೇಕಿದೆ. ಇಲ್ಲದೆ ಹೋದರೆ. ಭ್ರಷ್ಟ ಅಧಿಕಾರಿಗಳು ಹಣ ಮಾಡಿ ಪ್ರಮಾಣ ಪತ್ರ ನೀಡಲು ದಾರಿ ಮಾಡಿಕೊಟ್ಟಂತಾಗುತ್ತದೆ ಎಂದು ಖಾಸಗಿ ಶಾಲೆಗಳು ಆರೋಪಿಸುತ್ತಿವೆ.

ಈ ನಿರ್ಲಕ್ಷ್ಯಕ್ಕೆ ಯಾರು ಹೊಣೆ:

ಖಾಸಗಿ ಶಾಲೆಗಳ ಕಟ್ಟಡ ಸುರಕ್ಷತೆಯ ಕುರಿತು ನಿರ್ಲಕ್ಷ್ಯ ಎದ್ದು ಕಾಣುತ್ತಿದೆ. ಈ ನಿರ್ಲಕ್ಷ್ಯ ಯಾರದ್ದು ಎಂಬ ಪ್ರಶ್ನೆ ಇದೆ. ಖಾಸಗಿ ಶಿಕ್ಷಣ ಸಂಸ್ಥೆಗಳದ್ದಾ? ಅಥವಾ ಸರಕಾರ ಮತ್ತು ಶಿಕ್ಷಣ ಇಲಾಖೆಯದ್ದ? ಖಾಸಗಿ ಶಿಕ್ಷಣ ಸಂಸ್ಥೆಗಳು ಶಿಕ್ಷಣ ಇಲಾಖೆಯತ್ತ ಬೊಟ್ಟು ಮಾಡಿ ತೋರಿಸುತ್ತಿವೆ. ಹೌದ ಶಿಕ್ಷಣ ಇಲಾಖೆಯ ನಿರ್ಲಕ್ಷ್ಯ ಈಗ ಎದ್ದು ಕಾಣುತ್ತಿದೆ. ಈ ಸ್ಥಿತಿಯ ಹೊಣೆಗಾರಿಗೆಯನ್ನು ಶಿಕ್ಷಣ ಇಲಾಖೆ ಹೊರಬೇಕಿದೆ. ಯಾಕೆ ಅಂದರೆ 2009 ರಲ್ಲಿ ಕಟ್ಟಡ ಸುರಕ್ಷತೆಯ ಕುರಿತು ಸುಪ್ರಿಂ ಕೋರ್ಟ್ ಆದೇಶವನ್ನು ನೀಡಿತ್ತು. ಆದರೆ ಆ ಆದೇಶ ಜಾರಿಯಾಗಿದ್ದು 2020 ರಲ್ಲಿ. ಅಲ್ಲಿಯವರೆಗೆ ಶಿಕ್ಷಣ ಇಲಾಖೆ ಮೌನವಹಿಸಿದ್ದು ಯಾಕೆ ಎಂಬ ಪ್ರಶ್ನೆ ಈಗ ಎದ್ದಿದೆ. 12 ವರ್ಷಗಳ ಕಾಲ ಬಾಯಿಗೆ ಬೀಗ ಹಾಕಿಕೊಂಡಿದ್ದ ಶಿಕ್ಷಣ ಇಲಾಖೆ ಈಗ ಧೀಡರನೇ ಲಾಕ್ ಓಪನ್ ಮಾಡಿದ್ದುನ್ನು ಗಮನಿಸಿದರೆ ಶಿಕ್ಷಣ ಇಲಾಖೆ ಲಾಭಿಗೆ ಮುಂದಾಗಿದೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ಸುಪ್ರೀಂ ಕೋರ್ಟ್ ನಿರ್ದೇಶನದಲ್ಲಿ ಏನಿದೆ:

2009 ರಲ್ಲಿ ಸುಪ್ರಿಂ ಕೋರ್ಟ್ ನೀಡಿದ ತೀರ್ಪಿನಂತೆ ಎಲ್ಲಾ ಶಾಲೆಗಳು ಸುರಕ್ಷಿತವಾದ ಕಟ್ಟಡವನ್ನು ಹೊಂದಬೇಕು ಎಂದು ಹೇಳಿದೆ. 2012 ರೊಳಗಾಗಿ ಎಲ್ಲಾ ಖಾಸಗಿ ಶಿಕ್ಷಣ ಸಂಸ್ಥೆಗಳು ಕಟ್ಟಡ ಸುರಕ್ಷತಾ ಪ್ರಮಾಣ ಪತ್ರವನ್ನು ಹೊಂದರಿಬೇಕು. ಯಾವ ಶಾಲೆ? ಕಟ್ಟಡ ಸುರಕ್ಷ? ಪ್ರಮಾಣ ಪತ್ರವನ್ನು ಹೊಂದಿರುವುದಿಲ್ಲ ಅಂತಹ ಶಾಲೆಯ ಮಾನ್ಯತೆಯನ್ನು ರದ್ದು ಮಾಡಬೇಕು ಎಂದು ಹೇಳಿದೆ. ಆದರೆ ರಾಜ್ಯ ಸರಕಾರ 2020 ರವರೆಗೆ ಮೌನವಾಗಿದ್ದು. ತರಾತುರಿಯಲ್ಲಿ ಈಗ ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಒತ್ತಡ ಹೇರುತ್ತಿದೆ. ಬರೋಬ್ಬರಿ 11 ವರ್ಷಗಳ ಕಾಲ ಸುಪ್ರಿಂ ಆದೇಶವನ್ನು ಟಿಜೋರಿಯಲ್ಲಿ ಭದ್ರವಾಗಿಸಿ ಇಟ್ಟದ್ದ ಶಿಕ್ಷಣ ಇಲಾಖೆ 2020–21 ರಲ್ಲಿ ಎಲ್ಲಾ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸುತ್ತೋಲೆಯನ್ನು ಹೊರಡಿಸುತ್ತದೆ. ಆ ಸುತ್ತೋಲೆಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ಬಿಲ್ಡಿಂಗ್ ಕೋಡ್ ಪ್ರಮಾಣಪತ್ರವನ್ನು ಹಾಗೂ ಅಗ್ನಿಶಾಮಕ ಇಲಾಖೆಯಿಂದ ನಿರಾಕ್ಷೇಪಣ ಪತ್ರವನ್ನು ಕಡ್ಡಾಯವಾಗಿ ಪಡೆಯಬೇಕು ಇಲ್ಲದೆ ಇದ್ದರೆ ಮಾನ್ಯತೆಯನ್ನು ರದ್ದು ಮಾಡುವುದಾಗಿ ಹೇಳಿದೆ. ಹಲವಾರಿ ಬಾರಿ ಖಾಸಗಿ ಶಿಕ್ಷಣ ಸಂಸ್ಥೆಗಳು ಕಾಲಾವಕಾಶಕ್ಕೆ ಮನವಿ ಮಾಡಿದರೂ ಕೇವಲ 10 ದಿನಗಳಲ್ಲಿ ಈ ಎಲ್ಲಾ ದಾಖಲೆಗಳನ್ನು ನೀಡುವಂತೆ ಸೂಚಿಸಿದೆ.

ಜವಾಬ್ದಾರಿ ಮರೆತವೇ ಖಾಸಗಿ ಶಿಕ್ಷಣ ಸಂಸ್ಥೆಗಳು:

2009 ರಲ್ಲಿ ಕಟ್ಟಡ ಸುರಕ್ಷತೆಯ ಕುರಿತು ಸುಪ್ರಿಂ ಮಾಡಿರುವ ಆದೇಶ ಖಾಸಗಿ ಶಿಕ್ಷಣ ಸಂಸ್ಥೆಗಳಿಗೂ ಗೊತ್ತಿದೆ. ಆದರೆ ಇವರು ಸುಪ್ರಿಂ ತೀರ್ಮಾನವನ್ನು ಜಾರಿ ಮಾಡುವ ಬದಲು, ಸರಕಾರ/ ಶಿಕ್ಷಣ ಇಲಾಖೆಯ ಆದೇಶಕ್ಕೆ ಕಾದು ಕುಳಿತು ಜಾಣ ನಡೆ ಅನುಸರಿಸಿವೆ. ಇಲ್ಲದ ಸಮಸ್ಯೆಯನ್ನು ನಾವ್ಯಾಕೆ ಮೈಮೇಲೆ ಹಾಕಿ ಕೊಳ್ಳಬೇಕು ಎಂಬುದು ಖಾಸಗಿ ಶಿಕ್ಷಣ ಸಂಸ್ಥೆಗಳ ವಾದ ಇದ್ದಂತೆ ಕಾಣುತ್ತದೆ. 2009 ರಲ್ಲಿ ಸುಪ್ರೀಂ ತೀರ್ಪು ಬಂದಿದೆ. 2012 ರೊಳಗಾಗಿ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ಯಾಕೆ ಹೊಂದಲು ಸಾಧ್ಯವಾಗಲಿಲ್ಲ ಎಂದು ರುಪ್ಸ ಅಧ್ಯಕ್ಷ ಲೋಕೇಶ್ ತಾಳಿಕಟ್ಟಿಯವರನ್ನು ಕೇಳಿದಾಗ " ನಾವು 2012 ರಿಂದಲೂ ಶಿಕ್ಷಣ ಇಲಾಖೆಯನ್ನು ಕೇಳುತ್ತಲೇ ಇದ್ದೇವೆ. ಕಟ್ಟಡದ ಸುರಕ್ಷತೆಯ ಪ್ರಮಾಣ ಪತ್ರ ಪಡೆಯಲು ಶಿಕ್ಷಣ ಇಲಾಖೆ ಏನಾದರೂ ಮಾರ್ಗಸೂಚಿ ಇದೆಯಾ? ಅದಕ್ಕೇನಾದರೂ ಅರ್ಜಿ ಇದೆಯಾ? ಅದನ್ನು ಯಾವರೀತಿ ಇಲಾಖೆಗೆ ಸಲ್ಲಿಸಬೇಕು ಎಂದು ಶಿಕ್ಷಣ ಇಲಾಖೆಯನ್ನು ಕೇಳುತ್ತಲೆ ಬಂದಿದ್ದೇವೆ. ಆದರೆ ಸರಕಾರ ಇಲ್ಲಿಯವರೆಗೆ ಸರಿಯಾದ ಮಾರ್ಗಸೂಚಿಯನ್ನು ನೀಡಿಲ್ಲ. ಈಗ ಒತ್ತಡ ಹಾಕುತ್ತಿರುವುದು ಎಷ್ಟು ಸರಿ ಎಂದು ಪ್ರಶ್ನಿಸುತ್ತಾರೆ.

ಸಿಬ್ಬಂದಿಯ ಕೊರತೆ:

ನೃಪತುಂಗ ರಸ್ತೆಯಲ್ಲಿರುವ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ತಂತ್ರಜ್ಞರು ಹಾಗೂ ಸಿಬ್ಬಂದಿಯ ಕೊರತೆ ಎದ್ದು ಕಾಣುತ್ತಿದೆ. ನೀವು ಇಲಾಖೆ ಭೇಟಿ ನೀಡಿದರೆ ಒಂದು ಸಣ್ಣ ಕೆಲಸ ಮುಗಿಸಿಕೊಂಡ ಹೊರ ಬರುವಷ್ಟರಲ್ಲಿ ಸಂಜೆಯಾಗುತ್ತದೆ. ಖಾಸಗಿ ಶಿಕ್ಷಣ ಸಂಸ್ಥೆಗಳ ದಾಖಲೆಯನ್ನು ಪರಿಶೀಲನೆ ನಡೆಸಲು ಪ್ರತ್ಯೇಕ ವಿಭಾಗವಿದ್ದರೂ ಅಲ್ಲಿ ತರಬೇತಿ ಗೊಳ್ಳದ ಸಿಬ್ಬಂದಿ ಇರುವ ಕಾರಣ ಇಂತಹ ಎಡವಟ್ಟು ಆದಂತೆ ಕಾಣುತ್ತದೆ. ಸುಪ್ರಿಂ ಕೋರ್ಟ್ ಆದೇಶ ಜಾರಿ ಯಾಗುವುದಕ್ಕೆ 11 ವರ್ಷ ಸಮಯ ತೆಗೆದುಕೊಂಡಿದೆ ಎಂದರೆ ಅಲ್ಲಿರುವ ಸಿಬ್ಬಂದಿಗಳ ಕೊರತೆ ಎಷ್ಟಿದೆ ಎಂಬುದನ್ನು ಇದು ತೋರಿಸುತ್ತದೆ.

ಒಟ್ಟಿನಲ್ಲಿ ಶಿಕ್ಷಣ ಇಲಾಖೆ, ಸರಕಾರದ ನಿರ್ಲಕ್ಷ್ಯಕ್ಕೆ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳ ಜಾಣ ನಡೆಯಿಂದಾಗಿ ಪೋಷಕರು ಮತ್ತು ವಿದ್ಯಾರ್ಥಿಗಳು ಕಂಗಾಲಾಗಿದ್ದಾರೆ. ಇದರ ಸಾಧಕ ಬಾದಕ ತಿಳದಿರುವ ಶಿಕ್ಷಣ ಇಲಾಖೆ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳಬೇಕಿದೆ. ಇನ್ನೂ ಖಾಸಗಿ ಶಿಕ್ಷಣ ಸಂಸ್ಥೆಗಳು ತಾಂತ್ರಿಕವಾಗಿ ವರ್ತಿಸದೆ ಮಕ್ಕಳ ಭವಿಷ್ಯದ ದೃಷ್ಟಿಯಲ್ಲಿ ಕರ್ತವ್ಯವನ್ನು ಮರೆಯಬೇಕಿದೆ, ಮಕ್ಕಳಿಂದ ಶಾಲಾ ಕಟ್ಟಡ ಶುಲ್ಕ ಪಡೆಯುವ ಖಾಸಗಿ ಶಿಕ್ಷಣ ಸಂಸ್ಥೆಗಳು ಕಟ್ಟಡ ಸುರಕ್ಷತೆಯ ಪ್ರಮಾಣಪತ್ರವನ್ನು ಪಡೆಯಬೇಕು ಎಂಬುದನ್ನು ಅರಿಯದೇ ಶಾಲೆ ನಡೆಸುತ್ತಿವೆಯಾ ಎಂಬ ಪ್ರಶ್ನೆಗಳು ಸಾರ್ವಜನಿಕರಿಂದ ಕೇಳಿ ಬರುತ್ತಿವೆ.

ಸರ್ಕಾರಿ ಶಾಲೆಯಲ್ಲಿ ಮೊಟ್ಟೆ ವಿತರಣೆ ಬಗ್ಗೆ ಸ್ವಾಮೀಜಿಗಳ ವಿರೋಧಕ್ಕೆ ಸರ್ಕಾರ ಮಣಿಯದಿರಲಿ: ವಿದ್ಯಾರ್ಥಿಗಳ ಆಗ್ರಹ

ಮಕ್ಕಳಿಗೆ ಅಪೌಷ್ಠಿಕತೆ ನಿವಾರಣೆಗಾಗಿ ಸರ್ಕಾರಿ ಶಾಲೆಯಲ್ಲಿ ಮಧ್ಯಾಹ್ನದ ಬಿಸಿಯೂಟದೊಂದಿಗೆ ವಾರದಲ್ಲಿ 3 ದಿನಗಳ ಕಾಲ ಮೊಟ್ಟೆ ಮತ್ತು ಬಾಳೇಹಣ್ಣು ವಿತರಣೆ ಮಾಡುವ ರಾಜ್ಯ ಸರ್ಕಾರದ ಆದೇಶವನ್ನು ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ರಾಜ್ಯ ಸಮಿತಿ ಸ್ವಾಗತಿಸಿದೆ. ಕೆಲವು ಮಠಾಧೀಶರು ಸರ್ಕಾರದ ಆದೇಶವನ್ನು ವಾಪಸ್ಸು ಪಡೆಯಬೇಕೆಂದು ಒತ್ತಡ ಹಾಕುತ್ತಿರುವುದು ಸರಿಯಲ್ಲ ಎಂದು ಎಸ್‌ಎಫ್‌ಐ ಮನವಿ ಮಾಡಿದೆ.

ಇಂದು ಎಸ್‌ಎಫ್‌ಐ ಸಂಘಟನೆ ರಾಜ್ಯ ನಿಯೋಗವು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದ ಎಸ್‌ಎಫ್‌ಐ ಸಂಘಟನೆಯು ಮೊಟ್ಟೆಯನ್ನು ತಿನ್ನುವುದು ಹಾಗೂ ತಿನ್ನದಿರುವುದನ್ನು ಮಕ್ಕಳ ಆಯ್ಕೆಯಾಗಿರುತ್ತದೆ ಇದನ್ನೇ ತಿನ್ನಬೇಕು, ಇದನ್ನೇ ತಿನ್ನಬಾರದೆಂದು ಆಹಾರದ ಹಕ್ಕಿನ ಮೇಲೆ ಸ್ವಾಮೀಜಿಗಳು ದಾಳಿ ಮಾಡುವುದನ್ನು ಸಂಘಟನೆಯು ತೀವ್ರವಾಗಿ ಖಂಡಿಸುತ್ತದೆ ಎಂದಿದೆ.

ರಾಜ್ಯದಲ್ಲಿ ಶಾಲಾ ಮಕ್ಕಳ ಅಪೌಷ್ಠಿಕತೆ ನಿವಾರಣೆಗಾಗಿ ಕಲ್ಯಾಣ ಕರ್ನಾಟಕದ ಕೊಪ್ಪಳ, ಬೀದರ್, ಯಾದಗಿರಿ, ಕಲಬುರಗಿ, ಬೀದರ್, ಬಳ್ಳಾರಿ, ರಾಯಚೂರು ಸೇರಿದಂತೆ ಬಿಜಾಪುರ ಜಿಲ್ಲೆಯಲ್ಲಿ 1 ರಿಂದ 8ನೇ ತರಗತಿವರೆಗೆ ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳು ಅಪೌಷ್ಠಿಕತೆ ಮತ್ತು ರಕ್ತ ಹೀನತೆಯಿಂದ ಬಳಲುತ್ತಿದ್ದಾರೆ ಎಂದು ಸಾರ್ವಜನಿಕ



ಶಿಕ್ಷಣ ಇಲಾಖೆಯ ಸಮೀಕ್ಷೆಯಿಂದ ಬೆಳಕಿಗೆ ಬಂದಿದೆ. ರಾಜ್ಯದ ಅತೀ ಹಿಂದುಳಿದ ಪ್ರದೇಶವಾದ ಹೈದ್ರಾಬಾದ್ ಕರ್ನಾಟಕದ ಈಗೀನ ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಮಕ್ಕಳ ಅಪೌಷ್ಠಿಕತೆಯ ಪ್ರಮಾಣ ಯಾದಗಿರಿ– ಶೇ. 74, ಕಲಬುರಗಿ– ಶೇ. 72.4, ಬಳ್ಳಾರಿ– ಶೇ. 72.3, ಕೊಪ್ಪಳ– ಶೇ. 70.7, ರಾಯಚೂರು– ಶೇ. 70.6, ಬೀದರ್– ಶೇ. 69.1, ಬಿಜಾಪುರ– ಶೇ. 68ರಷ್ಟು ಇದೆ.

ಇವೆಲ್ಲವೂದರ ನಡುವೆ ಕೆಲವು ಮಠದ ಸ್ವಾಮೀಜಿಗಳು ಜಾತಿ ಮತ್ತು ಧಾರ್ಮಿಕತೆ, ನಂಬಿಕೆಯ ಹೆಸರಿನಲ್ಲಿ ರಾಜ್ಯದ ಮುಖ್ಯಮಂತ್ರಿಗಳ ಮೇಲೆ ಒತ್ತಡ ಹಾಕಿ ಮೊಟ್ಟೆ ವಿತರಣೆಗೆ ಅಡ್ಡಿಪಡಿಸುತ್ತಿದ್ದಾರೆ. ಅಪೌಷ್ಠಿಕತೆ ಸಮಸ್ಯೆಯ ನಿವಾರಣೆಗೆ ಸ್ವಾಮೀಜಿಗಳು ಶ್ರಮವಹಿಸಲಿ ಅದನ್ನು ಬಿಟ್ಟು ಜಾತಿ, ಧರ್ಮದ ಹೆಸರಿನಲ್ಲಿ, ಸಮಾಜದಲ್ಲಿ ಅಶಾಂತಿಯನ್ನು ಸೃಷ್ಠಿ ಮಾಡುವ ಸ್ವಾಮೀಜಿಗಳ ಕ್ಷುಲ್ಲಕ ಮನಸ್ಥಿತಿಯನ್ನು ಎಸ್‌ಎಫ್‌ಐ ಸಂಘಟನೆ ವಿರೋಧಿಸುತ್ತದೆ ಎಂದು ಮನವಿಯಲ್ಲಿ ಉಲ್ಲೇಖಿಸಿದೆ.

ಮೊಟ್ಟೆ ಮತ್ತು ಬಾಳೇಹಣ್ಣು ವಿತರಣೆ ನಂತರ ಇದೇ ತಿಂಗಳಲ್ಲಿ ಶಾಲೆಗಳಲ್ಲಿ ಮಕ್ಕಳ ಹಾಜರಾತಿಯಲ್ಲಿ ಶೇ.10 ರಿಂದ 12ರಷ್ಟು ಏರಿಕೆ ಕಂಡುಬಂದಿದೆ. 80ರಷ್ಟು ಮಕ್ಕಳು ಮೊಟ್ಟೆ ಬೇಕೆಂದು ಬೇಡಿಕೆ ಇಟ್ಟಿದ್ದಾರೆ ಸುಮಾರು 14,44,000 ಮಕ್ಕಳ ಅಪೌಷ್ಠಿಕತೆ ನಿವಾರಣೆಗೆ ಮೊಟ್ಟೆ ಸಹಾಯವಾಗಲಿದೆ ಶೇಕಡ 20ರಷ್ಟು ಮಕ್ಕಳಿಗೆ ಬಾಳೇಹಣ್ಣು ವಿತರಣೆ ಮಾಡುವುದರಿಂದ ಯಾವುದೇ ವಿದ್ಯಾರ್ಥಿಗಳಿಗೆ ಬೇಧಭಾವ ತಾರತಮ್ಯ ಮಾಡುವ ಅವಕಾಶವಿರುವುದಿಲ್ಲ ಇದನ್ನು ಸ್ವಾಮೀಜಿಗಳು ಅರ್ಥ ಮಾಡಿಕೊಳ್ಳಲಿ ಎಂದು ಎಸ್‌ಎಫ್‌ಐ ತಿಳಿಸಿದೆ.

ಅಲ್ಲದೇ, ರಾಜ್ಯದ ಬಹುತೇಕ ಸರ್ಕಾರಿ ಶಾಲೆಗಳಲ್ಲಿ ವಿವಿಧ ಜಾತಿ–ಧರ್ಮದ ತುಳಿತಕ್ಕೆ ಒಳಗಾದ ಸಮುದಾಯದ, ಬಡವರ, ಹಿಂದುಳಿದ ವರ್ಗ ಸಮುದಾಯದ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದು, ರಾಜ್ಯದ ಎಲ್ಲಾ ಶಾಲೆಗಳಿಗೂ ಅಪೌಷ್ಠಿಕತೆ ನಿವಾರಣೆಗಾಗಿ ಮೊಟ್ಟೆ ಮತ್ತು ಬಾಳೇಹಣ್ಣನ್ನು ವಿತರಣೆ ಮಾಡಲು ಸರ್ಕಾರ ಮುಂದಾಗಬೇಕೆಂದು ಎಂದು ತಿಳಿಸಿದೆ.

ನಿಯೋಗದಲ್ಲಿ ಎಸ್‌ಎಫ್‌ಐ ರಾಜ್ಯ ಅಧ್ಯಕ್ಷ ಅಮರೇಶ ಕಡಗದ, ರಾಜ್ಯ ಉಪಾಧ್ಯಕ್ಷ ದಿಲೀಪ್ ಶೆಟ್ಟಿ, ಪ್ರಜ್ವಲ್, ಭೀಮನಗೌಡ, ಸಂಗಮೇಶ, ಬಸವರಾಜ, ಮಣಿಕಂಠ, ಇತರರು ಇದ್ದರು.

ಅತಿಥಿ ಅಂಕಣ



ನಾ ದಿವಾಕರ

ಈ ಬಾರಿ ತಾಯಿ ಬಹುರೂಪಿ ನಾಟಕೋತ್ಸವಕ್ಕೆ ಚಲನಚಿತ್ರ ನಟಿ ಮಾಳವಿಕಾ ಅವಿನಾಶ್ ಮತ್ತು ಸಮಾರೋಪ ಭಾಷಣ ಮಾಡಲು ಚಕ್ರವರ್ತಿ ಸೂಲಿಬೆಲೆ ಅವರನ್ನು ಆಯ್ಕೆ ಮಾಡುವ ಮೂಲಕ ರಂಗಾಯಣದ ನಿರ್ದೇಶಕರು, ರಂಗಾಯಣಕ್ಕೆ ಕೇವಲ ರಾಜಕೀಯ ಸ್ಪರ್ಶವನ್ನಷ್ಟೇ ಅಲ್ಲದೆ, ನಿರ್ದಿಷ್ಟ ಕೋಮಿನ ಚಿಂತನೆಗಳ ಸ್ಪರ್ಶವನ್ನೂ ನೀಡಲೆತ್ನಿಸಿದ್ದಾರೆ. ಬಿಜೆಪಿ ಸಂಘಪರಿವಾರ ಪ್ರತಿಪಾದಿಸುವ ಹಿಂದುತ್ವ ಮತ್ತು ಹಿಂದೂ ಮತದತಾತ್ವಿಕ ನೆಲೆಗಳಿಗೆ ಸಾಂಸ್ಕೃತಿಕ ಲೋಕದಲ್ಲಿ ಒಂದು ವೇದಿಕೆಯನ್ನು ಒದಗಿಸುವ ಈ ಪ್ರಯತ್ನವೇ ಅಪಾಯಕಾರಿಯಾಗಿ ಕಾಣುತ್ತದೆ. ಸಂಸ್ಕೃತಿ ಮತ್ತು ಸಾಂಸ್ಕೃತಿಕ ಕಲಾಭಿವ್ಯಕ್ತಿಯ ಮಾರ್ಗಗಳನ್ನು ಹಿಂದೂ ಮತದ ತಾತ್ವಿಕ ನೆಲೆಗಳೊಂದಿಗೆ ಬೆಸೆಯುವ ವೈದಿಕ ಶಾಹಿ ಪರಂಪರೆಯ ಪ್ರಯತ್ನಗಳಿಗೆ ರಂಗಾಯಣ ಒಂದು ಪ್ರಯೋಗ ಶಾಲೆಯಾಗುವುದನ್ನು ಕರ್ನಾಟಕದ ಜನ ಸಾಂಸ್ಕೃತಿಕ ಮನಸುಗಳು ಒಪ್ಪುವುದಿಲ್ಲ, ಒಪ್ಪಲಾಗುವುದೂ ಇಲ್ಲ.

ಸಾಂಸ್ಕೃತಿಕ ಕಲಾಭಿವ್ಯಕ್ತಿಯನ್ನು ಹಿಂದುತ್ವದ ತಾತ್ವಿಕ ನೆಲೆಗಳೊಂದಿಗೆ ಬೆಸೆಯಲು ರಂಗಾಯಣ ಪ್ರಯೋಗ ಶಾಲೆಯಾಗಬಾರದು

ಕರ್ನಾಟಕದ ಸಾಂಸ್ಕೃತಿಕ ಪರಂಪರೆಯಲ್ಲಿ ಮೈಸೂರಿನ ರಂಗಾಯಣ ಒಂದು ಪ್ರತಿಷ್ಠಿತ ಸ್ಥಾನ ಪಡೆದಿರುವಂತಹ ಸ್ವಾಯತ್ತ ಸಂಸ್ಥೆ. ಬಿ.ವಿ. ಕಾರಂತರ ಕನಸಿನ ಕೂಸು ಎಂದೇ ಹೇಳಲಾಗುವ ರಂಗಾಯಣ ಕಳೆದ ಮೂರು ದಶಕಗಳಿಗೂ ಹೆಚ್ಚು ಕಾಲ ಕರ್ನಾಟಕದ ಕಲಾಭಿವ್ಯಕ್ತಿಯ ಮಾಧ್ಯಮವಾಗಿ ಜನಸಾಮಾನ್ಯರ ನಡುವೆ ತನ್ನದೇ ಆದ ನೆಲೆ ಮಾಡಿದೆ. ಮೂಲತಃ ಒಂದು ಸ್ವಾಯತ್ತ ಸಂಸ್ಥೆಯಾಗಿರುವ ರಂಗಾಯಣ ಸರ್ಕಾರದ ಅನುದಾನದಲ್ಲಿ ನಡೆಯುವ ಒಂದು ರಂಗ ಸಂಸ್ಥೆಯಾದರೂ, ಸಾಂಸ್ಕೃತಿಕವಾಗಿ ತನ್ನ ಸ್ವಾಯತ್ತತೆಯನ್ನು ಉಳಿಸಿಕೊಂಡೇ ಬಂದಿದೆ. ಯಾವುದೇ ರಾಜಕೀಯ ಹಸ್ತಕ್ಷೇಪವಿಲ್ಲದೆ, ನಿರ್ದಿಷ್ಟ ರಾಜಕೀಯ ಸಿದ್ಧಾಂತಗಳ ಸೋಂಕಿಲ್ಲದೆ, ರಂಗಭೂಮಿ, ನಾಟಕ, ನಾಟ್ಯ ಮತ್ತಿತರ ಕಲಾಪ್ರಕಾರಗಳಿಗೆ ರಂಗಾಯಣ ಒಂದು ಬೌದ್ಧಿಕ ತಾಣವಾಗಿ ರೂಪುಗೊಂಡಿದೆ. ಬಾಹ್ಯ ಸಮಾಜದ ಸಾಂಸ್ಕೃತಿಕ –ಸಾಹಿತ್ಯ ವಲಯದ ಸೈದ್ಧಾಂತಿಕ ಒಲುಮೆ ನಿಲುಮೆಗಳನ್ನೂ ಮೀರಿ ಕರ್ನಾಟಕದ ಜನ ಸಂಸ್ಕೃತಿಯನ್ನು, ಸಾಂಸ್ಕೃತಿಕ ನೆಲೆಯನ್ನು ಸಂರಕ್ಷಿಸಿ, ಪೋಷಿಸುವ ನಿಟ್ಟಿನಲ್ಲಿ ರಂಗಾಯಣ ನಡೆದು ಬಂದಿದೆ.

ಈವರೆಗೂ ನಡೆದು ಬಂದ ಹಾದಿಯನ್ನು ಗಮನಿಸಿದರೆ, ಆಂತರಿಕವಾದ ಹಲವಾರು ಸಮಸ್ಯೆಗಳ ಹೊರತಾಗಿಯೂ, ರಂಗಾಯಣ ತನ್ನ ನಿಷ್ಪಕ್ಷಪಾತ ಸಾಂಸ್ಕೃತಿಕ ನಿಲುಮೆಯನ್ನು ಭಂಗಗೊಳಿಸದೆ ನಡೆದು ಬಂದಿದೆ ಎನ್ನಬಹುದು. ಈ ಸ್ವಾಯತ್ತ ಸಂಸ್ಥೆಗೆ ನೇಮಕವಾಗಿರುವ ನಿರ್ದೇಶಕರೂ ಸಹ ಈವರೆಗಿನ ತಮ್ಮ ಆಡಳಿತ ನಿರ್ವಹಣೆಯಲ್ಲಿ ತಮ್ಮ ವೈಯಕ್ತಿಕ ತಾತ್ವಿಕ ನಿಲುಮೆಗಳನ್ನು ಬದಿಗಿಟ್ಟು ರಂಗಾಯಣದ ಮೂಲ ಆಶಯಗಳಿಗೆ ಚ್ಯುತಿ ಬರದಂತೆ ನಡೆದುಕೊಂಡಿದ್ದಾರೆ. ಹಾಗಾಗಿಯೇ ರಂಗಾಯಣ ಇಂದಿಗೂ ತನ್ನ ಅಂತಃ ಸತ್ವವನ್ನು ಉಳಿಸಿಕೊಂಡಿದೆ. ಎಡ–ಬಲ–ಮಧ್ಯಮ ಪಂಥದ ತಾತ್ವಿಕ ಒಲವು, ನಿಲುಮೆಗಳು ಈ ಸಂಸ್ಥೆ ನಡೆಸುವ ಕಾರ್ಯಕ್ರಮಗಳಿಗೆ ಅಥವಾ ಕೈಗೊಳ್ಳುವ ಯೋಜನೆಗಳಿಗೆ ಚ್ಯುತಿ ಉಂಟು ಮಾಡದಂತೆ ಈವರೆಗಿನ ಆಡಳಿತ ವ್ಯವಸ್ಥೆ ಎಚ್ಚರ ವಹಿಸುವುದೂ ಹೌದು.

ಈ ಹಿನ್ನೆಲೆಯಲ್ಲೇ ಈ ಬಾರಿಯ "ತಾಯಿ ಬಹುರೂಪಿ ನಾಟಕೋತ್ಸವ" ವಿವಾದ ಸೃಷ್ಟಿಸಿದೆ. ಕಳೆದ ಹಲವು ವರ್ಷಗಳಿಂದ ನಡೆಯುತ್ತಿರುವ ಈ ವಾರ್ಷಿಕ ನಾಟಕೋತ್ಸವದಲ್ಲಿ ನಡೆಸುವ ವಿಚಾರ ಸಂಕಿರಣಗಳು, ಸಂವಾದಗಳು, ಚರ್ಚೆಗಳು ಮತ್ತು ನಾಟಕಗಳೂ ಸಹ ಜನಸಾಮಾನ್ಯರ ಬದುಕಿಗೆ ಹತ್ತಿರವಾದ, ತುಳಿತಕ್ಕೊಳಗಾದ ಜನಸಮುದಾಯಗಳ ಬದುಕನ್ನು ಬಿಂಬಿಸುವ ನಿಟ್ಟಿನಲ್ಲಿ ಇರುತ್ತವೆ.



ಈ ಚರ್ಚಾವೇದಿಕೆಗಳಲ್ಲಿ ಪಾಲ್ಗೊಳ್ಳುವ ಚಿಂತಕರೂ ಸಹ ತಮ್ಮ ಎಡ–ಬಲ ಸಿದ್ಧಾಂತಗಳ ಪರಿಧಿಯಿಂದಾಚೆಗಿನ ಜನಸಂಸ್ಕೃತಿಯ ನೆಲೆಗಳನ್ನು ಕಂಡುಕೊಳ್ಳಲು ಯತ್ನಿಸಿರುವುದನ್ನು ಗಮನಿಸಿದ್ದೇವೆ. ಸಾಂಸ್ಕೃತಿಕ ಜಗತ್ತಿನಲ್ಲಿ ಅಂತರ್ಗತವಾಗಿರಬೇಕಾದ ಜನಸಂಸ್ಕೃತಿಯ ನೆಲೆಗಳನ್ನು ಕಾಪಾಡಿಕೊಳ್ಳುತ್ತಲೇ ಆಧುನಿಕತೆಗೆ ತೆರೆದುಕೊಳ್ಳುವ ಸಾಧ್ಯತೆಗಳನ್ನೂ ರಂಗಾಯಣದಲ್ಲಿ ಕಂಡಿದ್ದೇವೆ.

ಹಾಗಾಗಿ ಈ ನಾಟಕೋತ್ಸವದ ಸಂದರ್ಭದಲ್ಲಿ ಆಯ್ಕೆಯಾಗುವ ಅತಿಥಿಗಳು, ಭಾಷಣಕಾರರು, ಸಮಾರೋಪ ಉಪನ್ಯಾಸಕರು ಇವರೆಲ್ಲರಿಗೂ ಒಂದು ಸಾಂಸ್ಕೃತಿಕ ಹಿನ್ನೆಲೆ ಇರಬೇಕಾಗುತ್ತದೆ. ಸಾಹಿತ್ಯ, ಕಲೆ, ನಾಟಕ, ರಂಗಭೂಮಿ ಹೀಗೆ ವಿಭಿನ್ನ ಸಾಂಸ್ಕೃತಿಕ ನೆಲೆಗಳ ಪರಿಚಯ ಅಗತ್ಯವಾಗಿ ಇರಬೇಕಾಗುತ್ತದೆ. ಅಷ್ಟೇ ಅಲ್ಲದೆ ರಂಗಾಯಣ ಪ್ರತಿನಿಧಿಸುವ ಜನಸಂಸ್ಕೃತಿಯ ಬೇರುಗಳನ್ನು ಅರ್ಥಮಾಡಿಕೊಳ್ಳುವ ಮತ್ತು ಅರ್ಥೈಸುವ ಬೌದ್ಧಿಕ ಸಾಮರ್ಥ್ಯವೂ ಇಲ್ಲಿ ಮುಖ್ಯವಾಗುತ್ತದೆ. ಮತ–ಧರ್ಮ–ಜಾತಿಯ ನೆಲೆಗಳಿಂದ ಹೊರತಾದ ಸಂಸ್ಕೃತಿಯ ಗ್ರಹಿಕೆ ಇಲ್ಲದ ಯಾವುದೇ ವ್ಯಕ್ತಿಯೂ ಈ ಸಂವಹನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದು ಅಪಭ್ರಂಶ ಎಂದೇ ಎನಿಸುತ್ತದೆ. ಯಾವುದೇ ಒಂದು ನಿರ್ದಿಷ್ಟ ಸಿದ್ಧಾಂತಕ್ಕೆ ಅಂಟಿಕೊಳ್ಳದೆ, ಜನಸಂಸ್ಕೃತಿಯ ತಾತ್ವಿಕ ನೆಲೆಗಳನ್ನು ಬಿಂಬಿಸುವ ನಿಟ್ಟಿನಲ್ಲಿ ಇಲ್ಲಿ ಉಪನ್ಯಾಸಗಳು, ಚರ್ಚೆಗಳು ಇರಬೇಕಾಗುತ್ತದೆ. ಹಾಗಾಗಿಯೇ ರಂಗಾಯಣ ಮತ್ತು ಇಲ್ಲಿನ ಕಾರ್ಯಕ್ರಮಗಳು ರಾಜಕೀಯ ಸ್ಪರ್ಶದಿಂದ ಹೊರತಾಗಿಯೇ ಇರಬೇಕಾಗುತ್ತದೆ. ಬಹುಶಃ ಕಳೆದ ಮೂರು ದಶಕಗಳಲ್ಲಿ ಇದೇ ಪರಂಪರೆ ಬೆಳೆದು ಬಂದಿರುವುದನ್ನು ಅಲ್ಲಗಳೆಯಲೂ ಆಗುವುದಿಲ್ಲ.

ಆದರೆ ಈ ಬಾರಿ ತಾಯಿ ಬಹುರೂಪಿ ನಾಟಕೋತ್ಸವಕ್ಕೆ ಚಲನಚಿತ್ರ ನಟಿ ಮಾಳವಿಕಾ ಅವಿನಾಶ್ ಮತ್ತು ಸಮಾರೋಪ ಭಾಷಣ ಮಾಡಲು ಚಕ್ರವರ್ತಿ ಸೂಲಿಬೆಲೆ ಅವರನ್ನು ಆಯ್ಕೆ ಮಾಡುವ ಮೂಲಕ ರಂಗಾಯಣದ ನಿರ್ದೇಶಕರು, ರಂಗಾಯಣಕ್ಕೆ ಕೇವಲ ರಾಜಕೀಯ ಸ್ಪರ್ಶವನ್ನಷ್ಟೇ ಅಲ್ಲದೆ, ನಿರ್ದಿಷ್ಟ ಕೋಮಿನ ಚಿಂತನೆಗಳ ಸ್ಪರ್ಶವನ್ನೂ ನೀಡಲೆತ್ನಿಸಿದ್ದಾರೆ. ಬಿಜೆಪಿ ಸಂಘಪರಿವಾರ ಪ್ರತಿಪಾದಿಸುವ ಹಿಂದುತ್ವ ಮತ್ತು ಹಿಂದೂ ಮತದ ತಾತ್ವಿಕ ನೆಲೆಗಳಿಗೆ ಸಾಂಸ್ಕೃತಿಕ ಲೋಕದಲ್ಲಿ ಒಂದು ವೇದಿಕೆಯನ್ನು ಒದಗಿಸುವ ಈ ಪ್ರಯತ್ನವೇ ಅಪಾಯಕಾರಿಯಾಗಿ ಕಾಣುತ್ತದೆ. ಇಲ್ಲಿ ಬಲಪಂಥದ ಪ್ರಶ್ನೆಗಿಂತಲೂ ಮುಖ್ಯವಾಗುವುದು ಆಯ್ಕೆಯಾಗಿರುವ ಅತಿಥಿಗಳ ಸಾಂಸ್ಕೃತಿಕ ಕಲಾಭಿವ್ಯಕ್ತಿಯ ಹಿನ್ನೆಲೆ ಮತ್ತು ಸಂಸ್ಕೃತಿಯ ಗ್ರಹಿಕೆ. ಸಂಸ್ಕೃತಿ ಮತ್ತು ಸಾಂಸ್ಕೃತಿಕ ಕಲಾಭಿವ್ಯಕ್ತಿಯ ಮಾರ್ಗಗಳನ್ನು ಹಿಂದೂ ಮತದ ತಾತ್ವಿಕ ನೆಲೆಗಳೊಂದಿಗೆ ಬೆಸೆಯುವ ವೈದಿಕಶಾಹಿ ಪರಂಪರೆಯ ಪ್ರಯತ್ನಗಳಿಗೆ ರಂಗಾಯಣ ಒಂದು ಪ್ರಯೋಗ ಶಾಲೆಯಾಗುವುದನ್ನು ಕರ್ನಾಟಕದ ಜನಸಾಂಸ್ಕೃತಿಕ ಮನಸುಗಳು ಒಪ್ಪುವುದಿಲ್ಲ, ಒಪ್ಪಲಾಗುವುದೂ ಇಲ್ಲ.

ಸಾಂಸ್ಕೃತಿಕ ನೆಲೆಗಳ ಹುಡುಕಾಟದಲ್ಲಿ

ಒಂದು ನಾಡಿನ ಜನತೆಯ ಸಂಸ್ಕೃತಿಯನ್ನು ಜನಸಮುದಾಯಗಳ ನಿತ್ಯ ಬದುಕಿನಲ್ಲಿ ಕಂಡುಕೊಳ್ಳಬೇಕು. ಯಾವುದೇ ಭೂ ಪ್ರದೇಶದ ಸಂಸ್ಕೃತಿಯ ಪ್ರತಿಫಲನವಾಗುವುದು ಅಲ್ಲಿನ ಜನಜೀವನದಲ್ಲಿ ಮತ್ತು ಈ ಜೀವನ ರೂಪುಗೊಳ್ಳುವ ಸಾಮಾಜಿಕ ಸಂಬಂಧಗಳ ಮೂಲಕ. ಸಂಸ್ಕೃತಿ ಎನ್ನುವುದನ್ನು ನೆಲಮಟ್ಟದ ಸಾಮುದಾಯಿಕ ಬದುಕಿನ ಚೌಕಟ್ಟಿನಲ್ಲಿ ವಿಸ್ತರಿಸುತ್ತಾ ಹೋದಂತೆ ಒಂದು ಸಮಾಜ ರೂಪುಗೊಳ್ಳಲು ನೆರವಾಗುವ ಎಲ್ಲ ಬೌದ್ಧಿಕ ಪರಿಕರಗಳೂ, ಲೌಕಿಕ ಸ್ಥಿತ್ಯಂತರಗಳೂ ಮತ್ತು ನಿತ್ಯಜೀವನದ ಚಟುವಟಿಕೆಗಳೂ ಸಹ ತಮ್ಮದೇ ಆದ ಪ್ರಾಶಸ್ತ್ಯವನ್ನು ಪಡೆಯುತ್ತವೆ. ಕಲೆ, ಸಾಹಿತ್ಯ, ಸಂಗೀತ, ರಂಗಭೂಮಿ, ನಾಟಕ ಹೀಗೆ ಮಾನವನ ಸಾಮಾಜಿಕ ಅಭಿವ್ಯಕ್ತಿಯ ಹಲವು ಆಯಾಮಗಳ ಮೂಲಕವೇ ನೆಲ ಸಂಸ್ಕೃತಿಯೂ ಬೆಳೆಯುತ್ತದೆ. ಇದನ್ನು ಪೋಷಿಸುವ ಮೂಲಕವೇ ಸಮಾಜದ ಅಂತಃಸತ್ವವನ್ನೂ ಕಾಪಾಡಿಕೊಳ್ಳಲು ಸಾಧ್ಯ.

ಭಾರತ ಒಂದು ಬಹುಸಂಸ್ಕೃತಿಯ ರಾಷ್ಟ್ರ ಎಂದು ಹೇಳುವಾಗ ನಮ್ಮಗಮನದಲ್ಲಿರಬೇಕಾದುದು ಈ ಸಾಂಸ್ಕೃತಿಕ ನೆಲೆಗಳು. ನೆಲಸಂಸ್ಕೃತಿಯಿಂದ ಬೇರ್ಪಡಿಸಿ ಭಾರತವನ್ನು ಅರ್ಥಮಾಡಿಕೊಳ್ಳಲು ಯತ್ನಿಸಿದರೆ ಅಲ್ಲಿ ನಮ್ಮ ನಡುವಿನ ಅನೇಕ ವಿಭಜಕ ಅಸ್ಮಿತೆಗಳು ಅಡ್ಡಗೋಡೆಗಳನ್ನು ನಿರ್ಮಿಸಿಬಿಡುತ್ತವೆ. ನೂರಾರು ಜಾತಿ ಉಪಜಾತಿಗಳು, ಹಲವು ಧಾರ್ಮಿಕ ನಂಬಿಕೆಗಳು, ಹತ್ತಾರು ಪಂಥಗಳು ಶತಮಾನಗಳಿಂದ ಬೇರೂರಿರುವ ಭಾರತದಲ್ಲಿ ಜನಸಮುದಾಯಗಳು ತಮ್ಮದೇ ಆದ ಸಾಂಸ್ಕೃತಿಕ ನೆಲೆಗಳನ್ನೂ ರೂಪಿಸಿಕೊಂಡಿವೆ. ಈ ಸಾಂಸ್ಕೃತಿಕ ನೆಲೆಗಳು ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಹೊಸತನವನ್ನು ಪಡೆದುಕೊಳ್ಳುತ್ತಿರುವಂತೆಯೇ ತಮ್ಮ ಮೂಲ ಅಂತಃಸತ್ವವನ್ನು ಉಳಿಸಿಕೊಳ್ಳುತ್ತಲೂ ಬಂದಿವೆ.

ನೆಲ ಸಂಸ್ಕೃತಿಯ ಈ ವೈವಿಧ್ಯತೆಯೇ ಭಾರತ ಎಂಬೋ ದೇಶವನ್ನೂ ಕಟ್ಟಿದೆ. ಭೌಗೋಳಿಕವಾಗಿ ಒಂದು ದೇಶವಾಗಿರುವ ಭಾರತ ಆಂತರಿಕವಾಗಿ ಸಾಂಸ್ಕೃತಿಕ ನೆಲೆಯಲ್ಲಿ ಹಲವು ದೇಶಗಳಾಗಿ ಇಂದಿಗೂ ಕಾಣುತ್ತಿರುವುದು ವಾಸ್ತವ. ಅತಿಯಾದ ಭಾವುಕ "ದೇಶಭಕ್ತಿ" ಇದ್ದರೆ ಮಾತ್ರ ಇದನ್ನು ನಿರಾಕರಿಸಲು ಸಾಧ್ಯ. ಈ ವೈವಿಧ್ಯತೆಯ ನೆಲೆಯಲ್ಲೇ ಪರಸ್ಪರ ಸಾಂಸ್ಕೃತಿಕ ವಿನಿಮಯದ ಮೂಲಕ ಭಾರತ ಭೌಗೋಳಿಕವಾಗಿ ಸದೃಢ ರಾಷ್ಟ್ರವಾಗಿ ರೂಪುಗೊಂಡಿದೆ. ಈ ಅಖಂಡತೆಯನ್ನು ಕಾಪಾಡಿಕೊಂಡು ಬರಬೇಕಾದರೆ, ನೆಲ ಸಂಸ್ಕೃತಿಯ ಮೂಲ ಸ್ವರೂಪಗಳನ್ನೂ ವಿರೂಪಗೊಳಿಸದೆ ಕಾಪಾಡಿಕೊಂಡು ಬರಬೇಕಾಗುತ್ತದೆ. ದೇಶವನ್ನು ಪ್ರೀತಿಸುವವರಲ್ಲಿ ಈ ಮಾತೃ ವಾತ್ಸಲ್ಯದ ಕೊರತೆ ಹೆಚ್ಚಾದಂತೆಲ್ಲಾ ವಿಭಜಕ ಶಕ್ತಿಗಳು ಮೇಲುಗೈ ಸಾಧಿಸುತ್ತವೆ.

ಭಾರತ ಇಂದು ಇಂತಹ ಶಕ್ತಿಗಳ ಕೈವಶವಾಗುವತ್ತ ಸಾಗಿದೆ. ನೆಲ ಮೂಲದ ಸಾಂಸ್ಕೃತಿಕ ನೆಲೆಗಳನ್ನು ಧ್ವಂಸ ಮಾಡುತ್ತಾ, ಶತಮಾನಗಳ ಸಾಂಸ್ಕೃತಿಕ ಪರಂಪರೆಗಳನ್ನು ನಿರಾಕರಿಸುತ್ತಾ, ಕಲ್ಪಿತ ಸಂಸ್ಕೃತಿಯೊಂದನ್ನು ಹೇರಲು ಮತ–ಧರ್ಮಗಳ ಗ್ರಾಂಥಿಕ ಪರಿಕಲ್ಪನೆಗಳನ್ನು ಬಳಸಲಾಗುತ್ತಿದೆ. ಈ ಪ್ರತಿಯೊಂದು ಮತಾಚರಣೆಗಳ ಆಂತರ್ಯದಲ್ಲೂ ನೆಲಮೂಲದ ಸಾಂಸ್ಕೃತಿಕ ಧಾತುಗಳು ಜೀವಂತವಾಗಿರುವುದನ್ನು ಸೂಕ್ಷ್ಮವಾಗಿ ಗಮನಿಸದೆ ಹೊದರೆ, ಬಹುಶಃ ನೆಲಸಂಸ್ಕೃತಿಯ ನೆಲೆಗಳೇ ನಾಶವಾಗುವ ಸಾಧ್ಯತೆಗಳಿವೆ. ಈ ಮೂರೂ ಮತಗಳ ಸಾಂಸ್ಥಿಕ ನೆಲೆಗಳಲ್ಲಿ ಸಮಸ್ತ ಜನಸಮುದಾಯಗಳನ್ನು ಆವರಿಸಿಕೊಳ್ಳುವ ಹಪಹಪಿ ಹೆಚ್ಚಾಗಿರುವುದೇ ಹೊರತು, ಸಾಮುದಾಯಿಕ ಅಸ್ಮಿತೆಗಳನ್ನು ಪ್ರತಿನಿಧಿಸುವ ನಿತ್ಯ ಬದುಕಿನ ಸಾಮಾಜಿಕ–ಸಾಂಸ್ಕೃತಿಕ ಮೂಲಗಳನ್ನು ಮಾನ್ಯ ಮಾಡುವ ಇಂಗಿತ ಕಂಡುಬರುವುದಿಲ್ಲ.

ಪುಟ 10 ಕ್ಕೆ



ಘೋರ ಕಾನೂನು AFSPA ರದ್ದಾಗಬೇಕು

* ಪ್ರಕಾಶ್ ಕಾರಟ್



ನಾಗಾಲ್ಯಾಂಡ್‌ನ ಮೋನ್‌ನಲ್ಲಿ ಅಸ್ಸಾಂ ರೈಫಲ್ಸ್‌ನ ಒಂದು ವಿಶೇಷ ಪಡೆಯ ಯೋಧರು ಡಿಸೆಂಬರ್ 4ರಂದು 14 ನಾಗರಿಕರನ್ನು ಹತ್ಯೆ ಮಾಡಿದ ಪ್ರಕರಣವು ಸಶಸ್ತ್ರ ಪಡೆಗಳ ವಿಶೇಷ ಅಧಿಕಾರ ಕಾನೂನು (ಎಎಫ್‌ಎಸ್‌ಪಿಎ–ಆಫ್‌ಸ್‌ಪ) ಮತ್ತೆ ಚರ್ಚೆಯ ಮುನ್ನೆಲೆಗೆ ಬರುವಂತೆ ಮಾಡಿದೆ. ಭದ್ರತಾ ಪಡೆಗಳಿಗೆ ಯಾವುದೇ ದಂಡನೆಯ ಭೀತಿಯಿಲ್ಲದೆ್ಲ ಕಾರ್ಯಾಚರಣೆಗೆ ಅವಕಾಶ ಕಲ್ಪಿಸುವ ಈ ಕಾನೂನುರಹಿತ ಕಾನೂನಿಂದಾಗಿ ಈಶಾನ್ಯ ರಾಜ್ಯಗಳಲ್ಲಿ ನಾಗರಿಕರ ಮೇಲೆ ಒಂದರ ಹಿಂದೊಂದರಂತೆ ಅತ್ಯಾಚಾರಗಳನ್ನು ನಡೆಸಲಾಗಿದೆ. ಸಶಸ್ತ್ರ ಉಗ್ರಗಾಮಿಗಳ ತಲಾಶೆಯಲ್ಲಿದ್ದರೆನ್ನಲಾದ ಭದ್ರತಾ ಪಡೆ ಸಿಬ್ಬಂದಿ ಒಂದು ವ್ಯಾನ್‌ನಲ್ಲಿ ಪ್ರಯಾಣಿಸುತ್ತಿದ್ದ ಕಲ್ಲಿದ್ದಲು ಕಾರ್ಮಿಕರಾಗಿದ್ದ ಎಂಟು ಯುವಕರ ಮೇಲೆ ಹೊಂಚು ದಾಳಿ ನಡೆಸಿದರು. ಆರು ಕಲಿದ್ದಲು ಕಾರ್ಮಿಕರ ಈ ಹತ್ಯೆಯಿಂದಾಗಿ ಪ್ರತಿಭಟನೆಗಿಳಿದ ಜನಗಳ ಮೇಲೆ ಸಶಸ್ತ್ರ ಪಡೆಗಳು ನಡೆಸಿದ ಗೋಲಿಬಾರ್‌ನಲ್ಲಿ ಇನ್ನೂ ಎಂಟು ಜನರು ಮೃತಪಟ್ಟರು.

ಮೋನ್ ದೌರ್ಜನ್ಯ ಒಂದು ಅಪರೂಪದ ಪ್ರಕರಣವಲ್ಲ. 'ಆಫ್‌ಸ್‌ಪ' ಹೆಸರಿನ ಮರೆಯಲ್ಲಿ ಆಗಾಗ ನಾಗರಿಕರ ಹತ್ಯಾಕಾಂಡಗಳು ನಡೆದಿವೆ. ಸಶಸ್ತ್ರ ಉಗ್ರಗಾಮಿಗಳ ಮೇಲೆ ತಾವು ಗುಂಡು ಹಾರಿಸಿದ್ದಾಗಿ ಭದ್ರತಾ ಪಡೆಗಳು ಪ್ರತಿ ಸಲವೂ ಹೇಳುತ್ತಾ ತಮ್ಮ ಕ್ರಮವನ್ನು ಸಮರ್ಥಿಸಿಕೊಳ್ಳುತ್ತಾ ಬಂದಿವೆ.

ಈಶಾನ್ಯ ರಾಜ್ಯಗಳಲಿ 1958ರಿಂದಲೂ ಈ ಕಾನೂನು ಜಾರಿಯಲ್ಲಿದೆ. 1984ರಲ್ಲಿ ಮಣಿಪುರದ ಹೈರಂಗೊಯ್‌ಥಾಂಗ್‌ನಲ್ಲಿ 14 ಜನರ ಹತ್ಯಾಕಾಂಡ, 1995ರ ಒಂಬತ್ತು ಜನರ ದಾರುಣ ಹತ್ಯೆಯ ಆರ್‌ಐಎಂಎಸ್ ಘಟನೆ ಮತ್ತು ಮಣಿಪುರದ ಮಾಲೊಮ್‌ನಲ್ಲಿ 2000ನೇ ಇಸವಿಯಲ್ಲಿ 10 ನಾಗರಿಕರ ಹತ್ಯೆ ನಡೆಯಿತು.

ಈ ಕಾನೂನಿನ ಸೆಕ್ಷನ್ 3ರ ಅಡಿಯಲ್ಲಿ ಯಾವುದೇ ರಾಜ್ಯ ಅಥವಾ ರಾಜ್ಯದ ನಿರ್ದಿಷ್ಟ ಭಾಗದ ಮೇಲೆ ಅದನ್ನು ಪ್ರಕ್ಷುಬ್ಧ ಪ್ರದೇಶ ಎಂದು ಘೋಷಿಸಿದ ಮೇಲೆ ಕೇಂದ್ರ ಸರ್ಕಾರ 'ಆಫ್‌ಸ್‌ಪ'ವನ್ನು ಹೇರಬಹುದಾಗಿದೆ. ಸಂಬಂಧಿತ ರಾಜ್ಯ ಸರ್ಕಾರದ ಅನುಮತಿಯಿಲ್ಲದೆಯೇ ಕೇಂದ್ರ ಸರ್ಕಾರ ಇದನ್ನು ಹೇರಲು ಅವಕಾಶವಿದೆ. ಈ ಕಾನೂನು ಉಲ್ಲಂಘಿಸುವ ಯಾರೇ ಆದರೂ ಅಥವಾ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡು ಸಾಗಿಸುವವರ ಮೇಲೆ ಗುಂಡು ಹಾರಿಸುವ ಮತ್ತು ಕೊಲ್ಲುವ ಅಪರಿಮಿತ ಅಧಿಕಾರವನ್ನು ಸಶಸ್ತ್ರ ಪಡೆಗಳಿಗೆ ನೀಡಲಾಗಿದೆ. ವಾರಂಟ್ ಇಲ್ಲದೆ ಯಾರನ್ನೇ ಆದರೂ ಬಂಧಿಸುವ ಮತ್ತು ಕಟ್ಟಡಗಳನ್ನು ಶೋಧಿಸುವ ಅಧಿಕಾರವನ್ನೂ ನೀಡಲಾಗಿದೆ.

1990ರಲ್ಲಿ ಈ ಕಾನೂನನ್ನು ಜಮ್ಮು ಮತ್ತು ಕಾಶ್ಮೀರಕ್ಕೆ ವಿಸ್ತರಿಸಲಾಗಿದ್ದು ಈಗಲೂ ಅಲ್ಲಿ ಜಾರಿಯಲ್ಲಿದೆ. ಸಾರ್ವಜನಿಕ ಸುರಕ್ಷತಾ ಕಾನೂನು ಮತ್ತಿತರ ಕರಾಳ ಕ್ರಮಗಳೊಂದಿಗೆ ಈ ಕಾಯ್ದೆಯು ಜಮ್ಮು ಮತ್ತು ಕಾಶ್ಮೀರದಲ್ಲಿ ಕಳೆದ ಮೂರು ದಶಕಗಳಲ್ಲಿ ಭದ್ರತಾ ಪಡೆಗಳಿಗೆ ದಂಡನೆಯ ಭೀತಿಯಿಲ್ಲದೆ ನಾಗರಿಕರ ಮೇಲೆ ಬರ್ಬರ ದಬ್ಬಾಳಿಕೆ ನಡೆಸುವ ಒಂದು ವ್ಯವಸ್ಥೆಯನ್ನು ನಿರ್ಮಿಸಿದೆ.

ಈ ಕಾನೂನಿನ ಅಡಿಯಲ್ಲಿ, ಅಪರಾಧ ಎಸಗಿದ ಭದ್ರತಾ ಪಡೆ ಸಿಬ್ಬಂದಿಯನ್ನು ಶಿಕ್ಷಿಸಲು ಕೇಂದ್ರ ಸರ್ಕಾರದ ಅನುಮೋದನೆ ಬೇಕು. ಕಾರ್ಯತಃ ಇದು ಅಸಾಧ್ಯ ಎಂಬುದನ್ನು ಜಮ್ಮು ಮತ್ತು ಕಾಶ್ಮೀರ ಅನುಭವ ತೋರಿಸಿಕೊಟ್ಟಿದೆ. 2018ರ ಜುಲೈ ವರೆಗೆ ಸತತವಾಗಿ ಅಲ್ಲಿ ಆಡಳಿತ ನಡೆಸಿದ ಆಯಾ ರಾಜ್ಯ ಸರ್ಕಾರಗಳು ಸಶಸ್ತ್ರ ಪಡೆಗಳ ಸಿಬ್ಬಂದಿಗೆ ಶಿಕ್ಷೆ ವಿಧಿಸಲು ಅನುಮತಿ ಕೋರುವ 50 ಪ್ರಕರಣಗಳನ್ನು ಕೇಂದ್ರಕ್ಕೆ ಕಳಿಸಿದ್ದವು. ಈ ಎಲ್ಲ ಕೋರಿಕೆಗಳನ್ನು ಕೇಂದ್ರ ಸರ್ಕಾರ ತಳ್ಳಿ ಹಾಕಿದೆ.

ಕುಖ್ಯಾತ ಪತ್ರಿಬಾಲ್ ಘಟನೆಯಲ್ಲಿ, ಐವರು ನಾಗರಿಕರ ಹತ್ಯೆಯಾಗಿತ್ತು. ಅದೊಂದು ಹುಸಿ ಎನ್‌ಕೌಂಟರ್ ಆಗಿತ್ತು. ಅವರು ವಿದೇಶಿ ಉಗ್ರಗಾಮಿಗಳು ಎಂದು ದುಷ್ಕೃತ್ಯ ನಡೆಸಿದ್ದ ಸೇನಾ ಸಿಬ್ಬಂದಿ ವಾದಿಸಿದ್ದರು. ಕೇಂದ್ರೀಯ ತನಿಖಾ ದಳ (ಸಿಬಿಐ) ಈ ಪ್ರಕರಣದ ತನಿಖೆ ನಡೆಸಿ ಈ ಅಪರಾಧಕ್ಕೆ ಹೊಣೆಯೆಂದು ಕೆಲವು ಸೈನಿಕರ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಸಿದ್ದರೂ ಆ ಪ್ರಕರಣವನ್ನು ಅಂತಿಮವಾಗಿ ಸೇನೆಯ ಕೋರ್ಟ್ ಮಾರ್ಷಲ್‌ಗೆ (ಸೇನಾ ವಿಚಾರಣೆ) ಒಪ್ಪಿಸಲಾಗಿತ್ತು. ಅಪರಾಧಿಗಳ ವಿರುದ್ಧ ಮೇಲ್ನೋಟಕ್ಕೆ ಕಾಣುವ ಯಾವುದೇ ಸಾಕ್ಷ್ಯವಿಲ್ಲ ಎಂದು ಹೇಳಿ ಎಲ್ಲರನ್ನೂ ಖುಲಾಸೆಗೊಳಿಸಲಾಗಿತ್ತು.



ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್

ಬಹುಕಾಲದ ಆಗ್ರಹ

'ಆಫ್‌ಸ್‌ಪ'ವನ್ನು ರದ್ದುಗೊಳಿಸುವಂತೆ ಸತತವಾಗಿ ಆಗ್ರಹಿಸಲಾಗುತ್ತಿದೆ. ಈ ಕಾನೂನು ರದ್ದತಿ ಬೇಡಿಕೆ ಮುಂದಿಟ್ಟುಕೊಂಡು ಇರೋಮ್ ಶರ್ಮಿಳಾ 16 ವರ್ಷಗಳಷ್ಟು ಸುದೀರ್ಘ ಕಾಲ ಉಪವಾಸ ಸತ್ಯಾಗ್ರಹ ನಡೆಸಿದ್ದರು. ಇದರ ಕಾರ್ಯನಿರ್ವಹಣೆ ಕುರಿತು ಪರಿಶೀಲಿಸಲು 2004ರಲ್ಲಿ ಯುಪಿಎ ಸರ್ಕಾರ, ನ್ಯಾಯಮೂರ್ತಿ ಜೀವನ್ ರೆಡ್ಡಿ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಿತ್ತು. ಈ ಕಾಯ್ದೆಯನ್ನು ರದ್ದುಪಡಿಸುವಂತೆ, 2005ರಲ್ಲಿ ಸಲ್ಲಿಸಿದ ವರದಿಯಲ್ಲಿ ಸಮಿತಿ ಶಿಫಾರಸು ಮಾಡಿತ್ತು. ಆದರೆ, ಕಾನೂನು ತಿದ್ದುಪಡಿ ಮಾಡುವ ಎಲ್ಲ ಪ್ರಯತ್ನಗಳು ಅಥವಾ ಕೆಲವು ನಿರ್ದಿಷ್ಟ ರಾಜ್ಯಗಳಿಂದ ಅದನ್ನು ವಾಪಸ್ ಪಡೆಯುವ ಪ್ರಯತ್ನಗಳು ಸೇನೆ ಮತ್ತು ರಕ್ಷಣಾ ಸಚಿವಾಲಯದ ವಿರೋಧದಿಂದಾಗಿ ವಿಫಲಗೊಂಡವು.

ಮಣಿಪುರದಲ್ಲಿ ಶಂಕಿತ ಮಹಿಳಾ ಉಗ್ರಗಾಮಿ ತಂಗ್‌ಜಂ ಮನೋರಮಾ ಮೇಲೆ 2004ರಲ್ಲಿ ಕೆಲವು ಭದ್ರತಾ ಪಡೆ ಸಿಬ್ಬಂದಿ ನಡೆಸಿದ ಬರ್ಬರ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ನಂತರ ಈ ಕಾನೂನು ವಾಪಸಾತಿ ಆಗ್ರಹಿಸಿ ದೊಡ್ಡ ಚಳವಳಿ ನಡೆದಿತ್ತು. ಆ ಚಳವಳಿ ಫಲವಾಗಿ ಇಂಫಾಲ್ ಮುನಿಸಿಪಾಲಿಟಿ ಪ್ರದೇಶವನ್ನು ಮಾತ್ರ 'ಆಫ್‌ಸ್‌ಪ' ವ್ಯಾಪ್ತಿಯಿಂದ ಹೊರಗಿಡಲು ಸಾಧ್ಯವಾಯಿತು. ಯುಪಿಎ ಸರ್ಕಾರದ ಎರಡನೇ ಅವಧಿಯಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಒಮರ್ ಅಬ್ದುಲ್ಲಾ ಸರ್ಕಾರ, ಎಡ ಪಕ್ಷಗಳು ಮತ್ತು ಇತರ ಪ್ರಜಾಸತ್ತಾತ್ಮಕ ಸಂಘಟನೆಗಳು ಪ್ರಕ್ಷುಬ್ಧ ಪ್ರದೇಶ ಘೋಷಣೆ ಮತ್ತು 'ಆಫ್‌ಸ್‌ಪ'ವನ್ನು, ಗಡಿ ಪ್ರದೇಶ ಹೊರತುಪಡಿಸಿ ಎಲ್ಲ ನಗರ ಹಾಗೂ ಇತರ ಪ್ರದೇಶಗಳಿಂದ ವಾಪಸ್ ಪಡೆಯುವಂತೆ ಆಗ್ರಹಿಸಿದ್ದವು. ಉಗ್ರಗಾಮಿ ಚಳವಳಿ ಮತ್ತು ಹಿಂಸಾಚಾರ ತುಂಬಾ ಕಡಿಮೆಯಾದ್ದರಿಂದ ಈ ಕ್ರಮಕೈಗೊಳ್ಳುವಂತೆ ಅವುಗಳು ವಾದಿಸಿದ್ದವು. ಅಂದಿನ ಗೃಹ ಸಚಿವರು ಕೂಡ ಈ ಅಭಿಪ್ರಾಯಕ್ಕೆ ಮನ್ನಣೆ ನೀಡಿದ್ದರೂ ಸರ್ಕಾರ ಈ ಬೇಡಿಕೆಗೆ ಮಾನ್ಯತೆ ನೀಡಲಿಲ್ಲ. ಅಂದಿನ ಭೂ ಸೇನಾ ಮುಖ್ಯಸ್ಥರು ಹಾಗೂ ರಕ್ಷಣಾ ವ್ಯವಸ್ಥೆಯ ಪ್ರತಿರೋಧ ಇದಕ್ಕೆ ಕಾರಣವಾಗಿತ್ತು.

ಸಂವಿಧಾನ ವಿರೋಧಿ

ನಾಗರಿಕರ ವಿರುದ್ಧ ಸಶಸ್ತ್ರ ಪಡೆಗಳನ್ನು ಬಳಸುವುದು ಸಂವಿಧಾನದ ಮೂಲ ತತ್ವಗಳಿಗೇ ವಿರುದ್ಧವಾದುದು. ಇಷ್ಟು ವರ್ಷಗಳಾದರೂ ಈ ಕಾನೂನು ಸಂವಿಧಾನ–ವಿರೋಧಿ ಎಂದು ಅದನ್ನು ಉನ್ನತ ನ್ಯಾಯಾಂಗ ತೆಗೆದು ಹಾಕದಿರುವುದು ತುಂಬಾ ವಿಷಾದದ ಸಂಗತಿಯಾಗಿದೆ. ಮೋದಿ ಸರ್ಕಾರವು ಒಂದು ರಾಷ್ಟ್ರೀಯ ಭದ್ರತಾ ಪ್ರಭುತ್ವವನ್ನು ಕಟ್ಟಲು ಪ್ರಜಾಪ್ರಭುತ್ವ–ವಿರೋಧಿ, ಕರಾಳ ಕಾನೂನುಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಳ್ಳುತ್ತಿದೆ. ನಾಗರಿಕರ ಮೂಲಭೂತ ಹಕ್ಕುಗಳನ್ನು ತುಳಿದು ಹಾಕುತ್ತಿದೆ. 'ಆಫ್‌ಸ್‌ಪ'ದ ಜೊತೆ ಜೊತೆಯಲ್ಲಿ ಕಾನೂನು ಬಾಹಿರ ಚಟುವಟಿಕೆ ತಡೆ ಕಾನೂನು (ಯುಎಪಿಎ), ರಾಷ್ಟ್ರೀಯ ಭದ್ರತಾ ಕಾನೂನು, ಭಾರತೀಯ ದಂಡ ಸಂಹಿತೆಯ (ಐಪಿಸಿ) ದೇಶದ್ರೋಹದ ಸೆಕ್ಷನ್ –ಇವೇ ಮೊದಲಾದವುಗಳು ಸರ್ವಾಧಿಕಾರಶಾಹಿ ಭದ್ರತಾ ಸೌಧದ ಅಂಗಗಳಾಗಿವೆ. ಪಂಜಾಬ್ ಮತ್ತು ಬಂಗಾಳದಲ್ಲಿ ಗಡಿ ಭದ್ರತಾ ಪಡೆಯ ಕಾರ್ಯವ್ಯಾಪ್ತಿಯನ್ನು ಅಂತಾರಾಷ್ಟ್ರೀಯ ಗಡಿಯಿಂದ 50 ಕಿಲೋ ಮೀಟರ್‌ವರೆಗೆ ವಿಸ್ತರಿಸಿರುವುದನ್ನು ಈ ಹಿನ್ನೆಲೆಯಲ್ಲಿಯೇ ಕಾಣಬೇಕಾಗುತ್ತದೆ. ಈ ವರೆಗೆ ಆ ವ್ಯಾಪ್ತಿ 15 ಕಿಲೋ ಮೀಟರ್ ಆಗಿತ್ತು.

ಮೋನ್ ದೌರ್ಜನ್ಯ ಒಂದು ಅಪರೂಪದ ಒಂಟಿ ಪ್ರಕರಣವಲ್ಲ. ಕಾನೂನುರಹಿತ ಕಾನೂನು 'ಆಫ್‌ಸ್‌ಪ' ಹೆಸರಿನ ಮರೆಯಲ್ಲಿ ಆಗಾಗ ನಾಗರಿಕರ ಹತ್ಯಾಕಾಂಡಗಳು ನಡೆದಿವೆ. ಸಶಸ್ತ್ರ ಉಗ್ರಗಾಮಿಗಳ ಮೇಲೆ ತಾವು ಗುಂಡು ಹಾರಿಸಿದ್ದಾಗಿ ಭದ್ರತಾ ಪಡೆಗಳು ಪ್ರತಿ ಸಲವೂ ಹೇಳುತ್ತಾ ತಮ್ಮ ಕ್ರಮವನ್ನು ಸಮರ್ಥಿಸಿಕೊಳ್ಳುತ್ತಾ ಬಂದಿವೆ. ಪ್ರಜಾಸತ್ತಾತ್ಮಕ ಹಾಗೂ ನಾಗರಿಕ ಸಮಾಜದಲ್ಲಿ ಇಂತಹ ಕಾನೂನಿಗೆ ಸ್ಥಾನವಿಲ್ಲದಿರುವುದರಿಂದ ಈ ಕಾನೂನನ್ನು ಸಂಪೂರ್ಣವಾಗಿ ತೆಗೆದು ಹಾಕುವ ಸಮಯವೀಗ ಬಂದಿದೆ.

ನಾಗಾಲ್ಯಾಂಡ್ ಮುಖ್ಯಮಂತ್ರಿ ನೇಫಿಯು ರಿಯೋ ಮತ್ತು ಮೇಘಾಲಯ ಮುಖ್ಯಮಂತ್ರಿ ಕೊನ್ರಾಡ್ ಸಂಗ್ಮಾ, ತಮ್ಮ ರಾಜ್ಯಗಳು ಮತ್ತು ಈಶಾನ್ಯ ಭಾರತದಿಂದ 'ಆಫ್‌ಸ್‌ಪ'ವನ್ನು ರದ್ದು ಮಾಡಬೇಕೆಂದು ಒತ್ತಾಯಿಸಿರುವುದು ಒಳ್ಳೆಯ ಬೆಳವಣಿಗೆಯಾಗಿದೆ. 2015ರಲ್ಲಿ ತ್ರಿಪುರಾದ ಎಡ ರಂಗ ಸರ್ಕಾರ 'ಆಫ್‌ಸ್‌ಪ'ವನ್ನು ಹಿಂದೆ ಪಡೆದಿತ್ತು. 'ಪ್ರಕ್ಷುಬ್ಧ ಪ್ರದೇಶ' ಘೋಷಣೆಯನ್ನು ಹಿಂಪಡೆಯುವ ಮೂಲಕ ಅದು ಈ ಉದ್ದೇಶವನ್ನು ಸಾಧಿಸಿತ್ತು.

ಏನಿದ್ದರೂ ಕೆಲವು ರಾಜ್ಯಗಳಿಂದ ಮಾತ್ರವೇ ಚೂರುಪಾರು ರೀತಿಯಲ್ಲಿ ಇದನ್ನು ಹಿಂದೆ ಪಡೆದರೆ ಸಾಲದು. ಪ್ರಜಾಸತ್ತಾತ್ಮಕ ಹಾಗೂ ನಾಗರಿಕ ಸಮಾಜದಲ್ಲಿ ಇಂತಹ ಕಾನೂನಿಗೆ ಸ್ಥಾನವಿಲ್ಲದಿರುವುದರಿಂದ ಈ ಕಾನೂನನ್ನು ಸಂಪೂರ್ಣವಾಗಿ ತೆಗೆದು ಹಾಕುವ ಸಮಯವೀಗ ಬಂದಿದೆ.

ಅನು: ವಿಶ್ವ



ಇರೋಮ್ ಶರ್ಮಿಳಾ



ತಂಗ್‌ಜಂ ಮನೋರಮಾ







ದುಡಿಯುವ ಜನರ ಜ್ವಲಂತ ಸಮಸ್ಯೆಗಳ ಪರಿಹಾರಕ್ಕಾಗಿ ಸಮರ ಶೀಲ ಹೋರಾಟಗಳನ್ನು ಕಟ್ಟಲು ಮತ್ತು ಪಕ್ಷವನ್ನು ಎಲ್ಲಾ ಮಜಲುಗಳಲ್ಲಿ ವಿಸ್ತರಿಸಲು ತೀರ್ಮಾನಿಸಿದ

ಮಂಡ್ಯ ಜಿಲ್ಲಾ 9ನೇ ಸಮ್ಮೇಳನ...

ಮಂಡ್ಯ ಜಿಲ್ಲೆಯ ದುಡಿಯುವ ಜನತೆ ಉದ್ಯೋಗ, ಕೂಲಿ, ವಸತಿ, ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳ ವಿರುದ್ಧ ಸಮರ ಶೀಲ ಚಳವಳಿಯನ್ನು ರೂಪಿಸಬೇಕು ಮತ್ತು ಪಕ್ಷವನ್ನು ಮುಂದಿನ ಸಮ್ಮೇಳನದ ಹೊತ್ತಿಗೆ ಪ್ರಾದೇಶಿಕವಾಗಿ, ಸಾಮಾಜಿಕವಾಗಿ ವಿಸ್ತರಿಸಿ ಸೈದ್ಧಾಂತಿಕವಾಗಿ ಗಟ್ಟಿಗೊಳಿಸಬೇಕು ಎಂಬ ಕರೆಯೊಂದಿಗೆ ಪಕ್ಷದ ಮಂಡ್ಯ ಜಿಲ್ಲಾ 9ನೇ ಸಮ್ಮೇಳನವು ಮುಕ್ತಾಯಗೊಂಡಿತು.

ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಪರಿನಿರ್ವಾಣ ದಿನವಾದ ಡಿಸೆಂಬರ್ 6 ರಂದು ಮಂಡ್ಯ ನಗರದ ಸಿಲ್ವರ್ ಜ್ಯುಬಿಲಿ ಪಾರ್ಕಿನಿಂದ ಸಾವಿರಾರು ಜನತ ಆಕರ್ಷಕ ಮೆರವಣಿಗೆಯೊಂದಿಗೆ ಸಮ್ಮೇಳನ ಆರಂಭವಾಯಿತು. ಜಿಲ್ಲೆಯ ಹಲವು ಭಾಗಗಳಿಂದ ಬಂದ ದುಡಿಯುವ ಜನತೆ ಮತ್ತು ಕಲಾ ತಂಡಗಳು ಮೆರವಣಿಗೆ ನಡೆಸಿ ನಗರಕ್ಕೆ ಕೆಂಬಾವುಟದ ಕಂಪು ಹರಡಿದವು. ಮೆರವಣಿಗೆ ಉದ್ದಕ್ಕೂ ಕ್ರಾಂತಿ ಗೀತೆಗಳು, ನೃತ್ಯ ಮತ್ತು ಎತ್ತರದ ಕೆಂಬಾವುಟಗಳ ಹಾರಾಟ ನಗರದ ಜನತೆಯನ್ನು ತಮ್ಮತ್ತ ಸೆಳೆದವು.

ಕರ್ನಾಟಕಸಂಘದಆವರಣದಲ್ಲಿಮೆರವಣಿಗೆಯು ಸಮಾವೇಶಗೊಂಡು ಬಹಿರಂಗ ಸಭೆಯಾಯಿತು. ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಪಕ್ಷದ ರಾಜ್ಯ ನಾಯಕರಾದ ಕಾಮ್ರೇಡ್ ನಿತ್ಯಾನಂದ ಸ್ವಾಮಿ, 'ದೇಶದಲ್ಲಿ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿದ್ದು ಸಾಮಾನ್ಯ ಜನರು ಸಂಕಷ್ಟ ಸ್ಥಿತಿ ಎದುರಿಸುತ್ತಿದ್ದಾರೆ. ಕೇಂದ್ರ ಸರ್ಕಾರ ಅಗತ್ಯ ವಸ್ತುಗಳ ಬೆಲೆ ಇಳಿಸಲು ಅಗತ್ಯ ಕ್ರಮ ವಹಿಸಬೇಕು' ಎಂದು ಹೇಳಿದರು.

“ಕೇಂದ್ರ, ರಾಜ್ಯ ಸರ್ಕಾರಗಳ ನೀತಿಯಿಂದ ಜನರು ರೋಸಿ ಹೋಗಿದ್ದಾರೆ. ಕಾರ್ಮಿಕ ಕಾನೂನುಗಳ ರಕ್ಷಣೆ ಮಾಡುವುದು ಪ್ರತಿಯೊಬ್ಬರ ಜವಾಬ್ದಾರಿ ಆಗಿದೆ. ರೈತರು ಬೆಳೆದ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ದೊರೆಯಬೇಕು. ಮಂಡ್ಯದ ಮೈಷುಗರ್ ಕಾರ್ಖಾನೆ ಸರ್ಕಾರಿ ಸ್ವಾಮ್ಯದಲ್ಲೇ ಆರಂಭಗೊಳ್ಳಬೇಕು' ಎಂದು ಒತ್ತಾಯಿಸಿದರು.

'ದೆಹಲಿ ಗಡಿಯಲ್ಲಿ ರೈತರು ನಡೆಸಿದ ಬೃಹತ್ ಹೋರಾಟದಿಂದಾಗಿ ಮೂರು ಕೃಷಿ ಕಾನೂನುಗಳನ್ನು ಕೇಂದ್ರ ಸರ್ಕಾರ ಹಿಂದಕ್ಕೆ ಪಡೆದಿದೆ. ರೈತರ ಹೋರಾಟದ ಮೌಲ್ಯ ಈಗ ಕೇಂದ್ರ ಸರ್ಕಾರಕ್ಕೆ ತಿಳಿದಿದೆ. ಕೇಂದ್ರ ಸರ್ಕಾರ ಉದ್ಯೋಗ ಖಾತರಿ ಯೋಜನೆಯನ್ನು ಸಮಗ್ರವಾಗಿ ಜಾರಿಗೊಳಿಸಲು ವಿಫಲವಾಗಿದೆ. ಅದಕ್ಕಾಗಿ ಹೋರಾಟ ನಡೆಸಬೇಕಾದ ಅಗತ್ಯವಿದೆ' ಎಂದರು.

ಸಭೆಯಲ್ಲಿ ಮಾತನಾಡಿದ ಮತ್ತೊಬ್ಬ ರಾಜ್ಯ ಮುಖಂಡರಾದ ಕಾಮ್ರೇಡ್ ಗೌರಮ್ಮ ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ದುಡಿಯುವ ಜನರ ಸಮಸ್ಯೆಗಳು ತೀವ್ರಗೊಂಡಿವೆ. ಅದರಲ್ಲೂ ಮಹಿಳೆಯರ ಮೇಲಿನ ದೌರ್ಜನ್ಯ ಹಲವಾರು



ಪಟ್ಟು ಹೆಚ್ಚಾಗಿದೆ. ತಮ್ಮ ಸಮಸ್ಯೆಗಳಿಂದ ಜನತೆಯ ಗಮನವನ್ನು ಬೇರೆಡೆ ಸೆಳೆಯಲು ಕೋಮುವಾದ ಹರಡಲಾಗುತ್ತಿದೆ. ಇದನ್ನು ದುಡಿಯುವ ಜನತೆ ಅರ್ಥ ಮಾಡಿಕೊಂಡು ಹೋರಾಟಕ್ಕೆ ಸಜ್ಜಾಗಬೇಕು ಎಂದು ಕರೆ ನೀಡಿದರು.

ಸಭೆಯನ್ನು ಉದ್ದೇಶಿಸಿ ರೈತ ಮುಖಂಡ ಕೃಷ್ಣೇಗೌಡ ಮಾತನಾಡಿ ಮೋದಿ ಸರ್ಕಾರ ಶ್ರೀಮಂತರ ಪರವಾದ ಸರ್ಕಾರ ದೆಹಲಿಯ ರೈತ ಹೋರಾಟದಂತೆ ಬೀದಿ ಹೋರಾಟಗಳಿಂದ ಮಾತ್ರ ಈ ಸರ್ಕಾರವನ್ನು ಮಣಿಸಿ ಬಡವರ ಪರವಾಗಿ ಒಂದಷ್ಟು ಪಡೆಯಲು ಸಾಧ್ಯ. ದುಡಿಯುವ ಜನರು ತಮ್ಮ ಪಾಲಿಗಾಗಿ ಬೀದಿ ಹೋರಾಟಗಳಿಗೆ ಸಜ್ಜಾಗಬೇಕು, ಬೀದಿ ಹೋರಾಟವನ್ನು ಸಂಸತ್ತು, ವಿಧಾನ ಸಭೆ ಪ್ರತಿಧ್ವನಿಸುವ ಹಾಗೆ ಆಗಬೇಕು ಎಂದು ತಿಳಿಸಿದರು.

ರೈತ ಮುಖಂಡ ಯಶವಂತ, ಮಹಿಳಾ ನಾಯಕಿ ದೇವಿ ಮಾತನಾಡಿದರು. ಕುಮಾರಿ ಪ್ರಾಸ್ತಾವಿಕ ಮಾತುಗಳನ್ನಾಡಿದರೆ, ಶ್ರೀನಿವಾಸ್ ಸ್ವಾಗತಿಸಿ ಚಂದ್ರಶೇಖರ ವಂದಿಸಿದರು. ಜಿಲ್ಲಾ ಕಾರ್ಯದರ್ಶಿ ಕಾಮ್ರೇಡ್ ಪುಟ್ಟಮಾದು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಕಾಮ್ರೇಡ್ ಜಿ. ರಾಮಕೃಷ್ಣ ಅವರ ಧ್ವಜಾರೋಹಣದೊಂದಿಗೆ ಆರಂಭವಾದ ಪ್ರತಿನಿಧಿ ಅಧಿವೇಶನದಲ್ಲಿ ಪಾಲ್ಗೊಂಡ ಸಂಗಾತಿಗಳು ಜಿಲ್ಲೆಯ ಜನತೆ ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಅವುಗಳ ಪರಿಹಾರಕ್ಕಾಗಿ ಸಮರ ಶೀಲ ಹೋರಾಟಗಳನ್ನು ಕಟ್ಟುವ ಕುರಿತು ಮತ್ತು ಪಕ್ಷವನ್ನು ವಿಸ್ತರಿಸುವ ಮಹತ್ವದ ಕುರಿತು ಮಾತನಾಡಿದರು.

ಸಮ್ಮೇಳನವು ಅನೇಕ ನಿರ್ಣಯಗಳನ್ನು ಅಂಗೀಕರಿಸಿತು. ಅವುಗಳಲ್ಲಿ ಮೈಷುಗರ್ ಕಾರ್ಖಾನೆಯನ್ನು ಸರ್ಕಾರಿ ಸ್ವಾಮ್ಯದಲ್ಲಿ ಕೂಡಲೇ ಆರಂಭಿಸಲು ಮತ್ತು ಮಾದರಿಯಾಗಿ ಬೆಳೆಸುವಂತೆ, ರೈತ ವಿರೋಧಿಯಾದ ರಾಜ್ಯದ ಕೃಷಿ ಕಾಯ್ದೆಗಳಾದ ಕರ್ನಾಟಕ ಭೂ ಸುಧಾರಣಾ ತಿದ್ದುಪಡಿ ಕಾಯಿದೆ 2020, ಕರ್ನಾಟಕ ಎಪಿಎಂಸಿ ತಿದ್ದುಪಡಿ ಕಾಯಿದೆ 2020 ಹಾಗೂ ಜಾನುವಾರು ಹತ್ಯೆ ನಿಷೇಧ ಕಾಯಿದೆ 2020 ನ್ನು ರದ್ದುಗೊಳಿಸಲು ರಾಜ್ಯ ಸರ್ಕಾರವನ್ನು ಒತ್ತಾಯಿಸಿ CPIM ಮಂಡ್ಯ ಜಿಲ್ಲೆ 9 ನೇ ಸಮ್ಮೇಳನ ನಿರ್ಣಯ ಕೈಗೊಂಡಿತು.

ಅಗತ್ಯ ವಸ್ತುಗಳ ಬೆಲೆಗಳನ್ನು ಇಳಿಸಿ ಬೆಲೆ ಏರಿಕೆ ನಿಯಂತ್ರಿಸುವುದರ ಮೂಲಕ ಬಡಜನರ ಬದುಕನ್ನು ರಕ್ಷಣೆ ಮಾಡಬೇಕು, ದಲಿತರ ಮೇಲಿನ ದೌರ್ಜನ್ಯಗಳನ್ನು ತಡೆಗಟ್ಟಬೇಕು SCP/TSP ಉಪಯೋಜನೆಗಳನ್ನು ಸಮರ್ಪಕವಾಗಿ ಜಾರಿಗೊಳಿಸಬೇಕೆಂದು ಸಮ್ಮೇಳನ ಒತ್ತಾಯಿಸಿ ನಿರ್ಣಯ ಕೈಗೊಂಡಿತು.

ಕಳೆದ ಒಂದು ವರ್ಷದಿಂದ ಕೇಂದ್ರ ಸರ್ಕಾರದ ದೇಶ ವಿರೋಧಿ, ರೈತ ವಿರೋಧಿ ಕಾರ್ಪೋರೇಟ್ ಪರ ಕೃಷಿ ಕಾನೂನುಗಳ ವಿರುದ್ಧ ಧೀರೋದಾತ್ತ ಹೋರಾಟ ನಡೆಸಿ ವಿಜಯ ಸಾಧಿಸಿದ ರೈತ ಆಂದೋಲನವನ್ನು ಅಭಿನಂದಿಸಿದ ಸಮ್ಮೇಳನ, ತನ್ನ ಹಟಮಾರಿ ಧೋರಣೆಯಿಂದ 700 ಕ್ಕೂ ಹೆಚ್ಚಿನ ಅನ್ನದಾತರ ಪ್ರಾಣ ತೆಗೆದ ಮೋದಿ ಸರ್ಕಾರದ ನಿಲುವನ್ನು ಖಂಡಿಸಿ ರೈತ ಹುತಾತ್ಮರಿಗೆ ಶ್ರದ್ಧಾಂಜಲಿ ಸಲ್ಲಿಸಿತು.



ಕೃಷಿ ಪಂಡಿತ ಡಾ. ಎಂ.ಎಸ್. ಸ್ವಾಮಿನಾಥನ್ ಆಯೋಗದ ಶಿಫಾರಸಿನಂತೆ ರೈತರ ಉತ್ಪನ್ನಗಳಿಗೆ C2+50% ಪ್ರಕಾರ ಕನಿಷ್ಠ ಬೆಂಬಲ ಬೆಲೆ ನಿಗದಿಗೆ ಆಗ್ರಹಿಸಿ ಹಾಗೂ ಖರೀದಿ ಖಾತ್ರಿಗೊಳಿಸಲು ಕಾನೂನು ಅಂಗೀಕರಿಸಲು ಒತ್ತಾಯಿಸಿ ನಿರ್ಣಯ ಕೈಗೊಂಡ ಸಮ್ಮೇಳನ, ವಿದ್ಯುತ್ ರಂಗದ ಖಾಸಗೀಕರಣಕ್ಕೆ ಅವಕಾಶ ನೀಡುವ ವಿದ್ಯುತ್ ಮಸೂದೆ 2020ನ್ನು ಕೈಬಿಡಲು ಒತ್ತಾಯಿಸಿತು.

ಜಲ್ ಜೀವನ್ ಮಿಷನ್ ಹೆಸರಿನಲ್ಲಿ ಕುಡಿಯುವ ನೀರಿಗೆ ಮೀಟರ್ ಅಳವಡಿಕೆ ವಿರೋಧಿಸಿ, ಬಿಸಿಯೂಟ ಯೋಜನೆಯ ಖಾಸಗೀಕರಣ ವಿರೋಧಿಸಿ, ಕಾರ್ಮಿಕ ಕಾನೂನುಗಳ ರದ್ದತಿ ವಿರೋಧಿಸಿ, ಕಾರ್ಮಿಕ ಸಂಹಿತೆಗಳನ್ನು ರದ್ದುಪಡಿಸಲು ಆಗ್ರಹಿಸಿ ಮತ್ತು ಮನ್ಮುಲ್ ಸೇರಿದಂತೆ ಜಿಲ್ಲೆಯ ಎಲ್ಲಾ ಸಹಕಾರ ಸಂಘಗಳ ಭ್ರಷ್ಟಾಚಾರವನ್ನು ಸಮಗ್ರವಾಗಿ ತನಿಖೆ ಮಾಡಿ ತಪ್ಪಿತಸ್ಥರೆಂದು ಕಂಡವರನ್ನು ಶಿಕ್ಷೆಗೆ ಒಳಪಡಿಸುವಂತೆ ಒತ್ತಾಯಿಸಿ ಸಮ್ಮೇಳನದಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಮುಂದಿನ ದಿನಗಳಲ್ಲಿ ವಸತಿ, ಉದ್ಯೋಗ ಶಿಕ್ಷಣಕ್ಕಾಗಿನ ಹೋರಾಟಗಳನ್ನು ತೀವ್ರಗೊಳಿಸಲು ತೀರ್ಮಾನಿಸಿದ ಸಮ್ಮೇಳನವು ನೂತನ ಜಿಲ್ಲಾ ಸಮಿತಿಯನ್ನು ಮತ್ತು ಕೊಪ್ಪಳದ ಗಂಗಾವತಿಯಲ್ಲಿ ನಡೆಯುವ 23 ನೇ ರಾಜ್ಯ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಆಯ್ಕೆ ಮಾಡಿತು.

ನೂತನವಾಗಿ ಆಯ್ಕೆಯಾದ ಜಿಲ್ಲಾ ಸಮಿತಿಯ ಕಾರ್ಯದರ್ಶಿಯಾಗಿ ರೈತ ಮುಖಂಡ ಕೃಷ್ಣೇಗೌಡ ಟಿ.ಎಲ್., ಜಿಲ್ಲಾ ಸಮಿತಿಯ ಸದಸ್ಯರಾಗಿ ಪುಟ್ಟಮಾದು ಎಂ., ರಾಮಕೃಷ್ಣ ಜಿ., ಯಶವಂತ ಟಿ., ಕುಮಾರಿ ಸಿ., ದೇವಿ, ಭರತ್‌ರಾಜ್ ಎನ್. ಎಲ್., ಶೋಭಾ, ಬಸವರಾಜು ಕೆ., ಕೃಷ್ಣ ಆರ್., ಲಿಂಗರಾಜ ಮೂರ್ತಿ, ಹನುಮೇಶ್ ಬಿ., ಸುರೇಂದ್ರ ಎನ್., ಸುನೀತಾ, ಸುಶೀಲಾ, ಮಂಜುಳ ಆಯ್ಕೆಯಾದರು. ರಾಜ್ಯ ಸಮ್ಮೇಳನಕ್ಕೆ ಪ್ರತಿನಿಧಿಗಳಾಗಿ ಕೃಷ್ಣೇಗೌಡ ಟಿ. ಎಲ್., ಕುಮಾರಿ ಸಿ., ದೇವಿ, ಶೋಭಾ, ಕೃಷ್ಣ ಆರ್. ಮತ್ತು ವೀಕ್ಷಕರಾಗಿ ಸುಶೀಲಾ ಆಯ್ಕೆಯಾದರು.

ರಾಜ್ಯ ನಾಯಕರಾದ ನಿತ್ಯಾನಂದ ಸ್ವಾಮಿಯವರ ಮಾತುಗಳೊಡನೆ ಸಮಾರೋಪಗೊಂಡ ಸಮ್ಮೇಳನ ಸಮ್ಮೇಳನದ ಯಶಸ್ಸಿಗೆ ಸಹಕರಿಸಿದ ಎಲ್ಲಾ ನಾಗರೀಕರಿಗೆ ಧನ್ಯವಾದ ತಿಳಿಸುವುದರೊಡನೆ ಅಂತ್ಯಗೊಂಡಿತು.





ಮಾಧ್ಯಮಗಳ ಮತ್ತು ಪತ್ರಕರ್ತರ ಮೇಲೆ ದಾಳಿಗಳು

"ಗಡಿಗಳಿಲ್ಲದ ವರದಿಗಾರರು" ಪ್ರಕಟಿಸುವ, ಕಳೆದ ಮತ್ತು ಈ ವರ್ಷ ಭಾರತದ 'ಮಾಧ್ಯಮ ಸ್ವಾತಂತ್ರ್ಯ' ರ್‍ಯಾಂಕ್ ಗಳಲ್ಲಿ 180 ದೇಶಗಳಲ್ಲಿ 142ನೇ ಸ್ಥಾನ ಗಳಿಸಿದೆ. ಆರ್.ಎಸ್.ಎಫ್ ತನ್ನ ವರದಿಯಲ್ಲಿ ಭಾರತ "ಪತ್ರಕರ್ತರಿಗೆ ಅತ್ಯಂತ ಅಪಾಯಕಾರಿಯಾದ ದೇಶಗಳಲ್ಲಿ ಒಂದು" ಎಂದು ಹೇಳಿದೆ. ಪ್ರಧಾನಿ ಮೋದಿ ಅವರು ಜಗತ್ತಿನ 37 "ಪತ್ರಿಕಾ ಸ್ವಾತಂತ್ರ್ಯದ ದಾಳಿಕೋರ"ರಲ್ಲಿ ಒಬ್ಬರು ಎಂದು ಹೆಸರಿಸಿದೆ. 2006ರಲ್ಲಿ 106 ಇದ್ದ ಈ ರ್‍ಯಾಂಕ್ ಸತತವಾಗಿ ಕುಸಿಯುತ್ತಾ ಬಂದಿತ್ತು. ವಿಶೇಷವಾಗಿ ಪತ್ರಕರ್ತರ ಮೇಲೆ ಸರಕಾರದ ದಮನ, ದೈಹಿಕ ದಾಳಿ, ಬೇಕಾಬಿಟ್ಟಿ ಇಂಟರ್ನೆಟ್ ಕಡಿತ ಮತ್ತು ಅಗಾಧವಾಗಿ ಹೆಚ್ಚಿದ ಏಕಸ್ವಾಮ್ಯ–ಇವುಗಳಿಂದಾಗಿ ಭಾರತದ 'ಮಾಧ್ಯಮ ಸ್ವಾತಂತ್ರ್ಯ' ರ್‍ಯಾಂಕ್ 142ಕ್ಕೆ ಕುಸಿದಿದೆ.

ವಸಂತರಾಜ ಎನ್.ಕೆ.

ಬಿಜೆಪಿ ಪಕ್ಷಕ್ಕೆ ಮತ್ತು ಎನ್.ಡಿ.ಎ. ರಂಗಕ್ಕೆ ಮತ್ತು ಅವುಗಳ ಸರಕಾರಗಳಿಗೆ ತಲೆಬಾಗದ ಮಾಧ್ಯಮಗಳು ಮತ್ತು ಮಾಧ್ಯಮ ಕಾರ್ಯಕರ್ತರ ಮೇಲೆ ಹಿಂದೆಂದೂ ಕಾಣದ ಭೀಕರ ದಾಳಿಗಳು ಕಳೆದ ಕೆಲವು ವರ್ಷಗಳ ಅದರಲ್ಲೂ ಮೋದಿ ಸರಕಾರದ ಎರಡನೆಯ ಅವಧಿಯ ಹೊಸ ಆತಂಕಕಾರಿ ಬೆಳವಣಿಗೆ. ಈ ದಾಳಿಗಳಲ್ಲಿ ಮಾಧ್ಯಮಗಳ ಕಚೇರಿಗಳ ಮತ್ತು ಪತ್ರಕರ್ತರ ಮೇಲೆ ದೈಹಿಕ ದಾಳಿ, ಕೊಲೆಗಳು ಸೇರಿವೆ. ಮಾಧ್ಯಮವು ಪ್ರಜಾಸತ್ತಾತ್ಮಕ ವ್ಯವಸ್ಥೆಯ ಮೂರು ಅಂಗಗಳ ಮೇಲೆ ಕಣ್ಗಾವಲು ಇಡುವ 'ನಾಲ್ಕನೇ ಅಂಗ' ಎಂಬ ಸಾಂವಿಧಾನಿಕ ಆಶಯವನ್ನು ಬುಡಮೇಲು ಮಾಡುವುದು, ಪ್ರಜಾಸತ್ತಾತ್ಮಕ ಭಿನ್ನಮತಕ್ಕೆ ಯಾವುದೇ ವೇದಿಕೆ ದೊರಕದಂತೆ ಮಾಡುವುದು ಇವುಗಳ ಹಿಂದಿರುವ ಉದ್ದೇಶವೆಂಬುದು ಸ್ಪಷ್ಟ.

ಬಿಜೆಪಿ ಪಕ್ಷದ ಮತ್ತು ಎನ್.ಡಿ.ಎ ರಂಗದ ಮತ್ತು ಅವುಗಳ ಸರಕಾರಗಳ ಒತ್ತಡಕ್ಕೆ ತಲೆಬಾಗದ, ಅವನ್ನು ನಿರ್ದಾಕ್ಷಿಣ್ಯವಾಗಿ ಟೀಕೆ ಮಾಡುವ, ಅವುಗಳಿಗೆ ಮುಜುಗರ ತರುವ ವಾಸ್ತವ ವರದಿಗಳನ್ನು ಮಾಡುವ, ಸತ್ಯವನ್ನು ಹೇಳುವ ಮಾಧ್ಯಮಗಳ ಮೇಲೆ ಐಟಿ, ಈ.ಡಿ, ಸಿಬಿಐ ಮುಂತಾದ ಕೇಂದ್ರೀಯ ಸಂಸ್ಥೆಗಳ ದುರ್ಬಳಕೆ ಮಾಡಿದಾಳಿ ಮಾಡಲಾಗುತ್ತಿದೆ. ಇದು ಹೆಚ್ಚಾಗಿ ಕಾನೂನು ಬಾಹಿರವಾಗಿ ಅಥವಾ ಕಾನೂನಿ ಬದ್ಧತೆಯ ಅಂಚಿನಲ್ಲಿರುವ ವಿಕೃತ ಅನ್ವಯದ ಮೂಲಕ ನಡೆಯುತ್ತಿದೆ. "ಮುಸ್ಲಿಮರ ಮೇಲೆ ಗುಂಪುದಾಳಿ"ಯ ಸುದ್ದಿ ಪ್ರಸಾರ ಮಾಡಿದ್ದಕ್ಕಾಗಿ ಮೀಡಿಯಾ ಒನ್‌ಟಿವಿಯ ಪ್ರಸಾರವನ್ನು ತಾತ್ಕಾಲಿಕವಾಗಿ ನಿಷೇಧಿಸಲಾಯಿತು. ದಿ ವೈರ್, ನ್ಯೂಸ್‌ಕ್ಲಿಕ್, ನ್ಯೂಸ್ ಲಾಂಡ್ರಿ ಹಾಗೂ ಹಿಂದಿಯ ಮತ್ತು ದೇಶದ ಅತಿ ಹೆಚ್ಚು ಪ್ರಸಾರದ 'ದೈನಿಕ ಭಾಸ್ಕರ್' ಗಳ ಕಚೇರಿಗಳ ಅಥವಾ ಒಡೆಯರ ಅಥವಾ ನಿರ್ದೇಶಕರ ಮನೆಗಳ ಮೇಲೆ ಈ.ಡಿ. ದಾಳಿ, ತಪಾಸಣೆಗಳನ್ನು ಮಾಡಿ ಕಿರುಕುಳ ಕೊಡಲಾಯಿತು. ಅವು ಹವಾಲಾ, ವಿದೇಶಿ ವಿನಿಮಯ ನಿಯಮಗಳ ಉಲ್ಲಂಘನೆ, ಕಪ್ಪು ಹಣದ ಚಲಾವಣೆ ಮುಂತಾದ "ಆರ್ಥಿಕ ಅಪರಾಧ"ಗಳನ್ನು ಮಾಡಿವೆ ಎಂದು ಈ ಕೇಂದ್ರೀಯ ಸಂಸ್ಥೆಗಳು ಹಾಗೂ ಸದಾ ಸರಕಾರದ ಭೋಪರಾಕು ಹೇಳುವ ಮಾಧ್ಯಮಗಳು ಯಾವುದೇ ಪುರಾವೆಇಲ್ಲದೆಅಪಪ್ರಚಾರ ಮಾಡಿದವು. ಆದರೆ ಈ ದಾಳಿಗಳು, ಆಪಾದನೆಗಳ ಹಲವು ತಿಂಗಳುಗಳ ನಂತರವೂ ಯಾವುದೇ ಕೇಸ್ ದಾಖಲಾಗಿಲ್ಲ ಎಂಬುದೇ ಇವು ದುರುದ್ದೇಶದ ದಾಳಿಗಳು ಎಂದು ಸಿದ್ಧಪಡಿಸುತ್ತವೆ. ಈ ಮಾಧ್ಯಮಗಳು ಆಳುವ ಪಕ್ಷ ಮತ್ತು ಅವುಗಳ ಭೋಪರಾಕು ಹೇಳಲು ಒಪ್ಪದ ಕೆಲವೇ ಮಾಧ್ಯಮಗಳು ಎಂಬುದು, ಇವುಗಳ 'ಬಾಯಿ ಮುಚ್ಚಿಸುವುದೇ' ಈ ದಾಳಿಗಳ ಉದ್ದೇಶ ಎಂಬುದನ್ನು ಬಯಲು ಮಾಡುತ್ತವೆ.

ಕರ್ನಾಟಕದಲ್ಲಿ ಸಹ ಆಗಿನ ಬಿಜೆಪಿ ಮುಖ್ಯಮಂತ್ರಿಯ ಪುತ್ರನ ಭ್ರಷ್ಟಾಚಾರದ ಕುರಿತು ತನಿಖಾ ವರದಿ ಮಾಡಿದ್ದ 'ಪವರ್ ಟಿವಿ' ಚಾನೆಲ್ ಕಚೇರಿ ಮೇಲೆ ಸೆಪ್ಟೆಂಬರ್ 2020ರಲ್ಲಿ ಸಿಸಿಬಿ ದಾಳಿ ಮಾಡಿ ಸರ್ವರ್‌ನ್ನು ತೆಗೆದುಕೊಂಡು ಹೋಗಿ ಅದರ ಪ್ರಸಾರ ನಿಲ್ಲಿಸಿದರು. ಚಾನೆಲ್ ಒಡೆಯರ ಪತ್ರಕರ್ತರ ಮೇಲೆ ಕೇಸುಗಳನ್ನು ದಾಖಲಿಸಿದರು. ಅದರ ಸಾಮಾಜಿಕ ಮಾಧ್ಯಮಗಳನ್ನು ನಿಷ್ಕ್ರಿಯಗೊಳಿಸುವ ಪ್ರಯತ್ನವನ್ನೂ ಮಾಡಲಾಯಿತು. ಇವೆಲ್ಲ ಕಾನೂನು ಬಾಹಿರ ಕ್ರಮಗಳಾಗಿದ್ದವು. ಹಿಂದೆ ರಾಜ್ಯದ ಸದನದಲ್ಲಿ ಬಿಜೆಪಿ ಸದಸ್ಯರ ನೀಲಿ ಚಿತ್ರದರ್ಶನದ ಪ್ರಕರಣದಿಂದ ಪಾಠ ಕಲಿತ ಬಿಜೆಪಿ ಅಧಿಕಾರಕ್ಕೆ ಬಂದಾಗ ಖಾಸಗಿ ಟಿವಿ ಚಾನೆಲ್ ಗಳಿಗೆ ಸದನದ ಕಲಾಪಗಳ ನೇರ ಪ್ರಸಾರವನ್ನು ಕಡಿತ ಮಾಡಿತು. ದೂರದರ್ಶನದ ನೇರ ಪ್ರಸಾರವನ್ನು ಮರುಪ್ರಸಾರ ಮಾಡುವಂತೆ ವಿಧಿಸಿತು.

ಸರಕಾರ ಮತ್ತು ಸ್ಥಳೀಯ ಆಡಳಿತಗಳಿಂದ (ಹೆಚ್ಚಾಗಿ ಕೇಂದ್ರ ಅಥವಾ ರಾಜ್ಯ ಸರಕಾರದ ಆಜ್ಞೆ ಮೇಲೆ) ಇಂಟರ್ನೆಟ್ ಕಡಿತದ ಬೇಕಾಬಿಟ್ಟಿ ದುರ್ಬಳಕೆ ಈ ಅವಧಿಯಲ್ಲಿ ಮಾಧ್ಯಮಗಳ ಮೇಲೆ ದಾಳಿಯ ಇನ್ನೊಂದು ಕರಾಳ ಮುಖ. ಇಂಟರ್ನೆಟ್ ಕಡಿತಗಳ ಸಂಖ್ಯೆಯಲ್ಲಿ 2020ರಲ್ಲಿ ಹಲವು ದಮನಕಾರಿ ಸರ್ವಾಧಿಕಾರಿ ದೇಶಗಳನ್ನು ಹಿಂದಿಕ್ಕಿ ಜಗತ್ತಿನಲ್ಲಿ ಭಾರತ ಮೊದಲ ಸ್ಥಾನ ಪಡೆದಿದೆ. ಇಂಟರ್ನೆಟ್ ಕಡಿತವು ಎಲ್ಲ ಮಾಧ್ಯಮಗಳನ್ನು ತೀವ್ರವಾಗಿ ಬಾಧಿಸುವುದಲ್ಲದೆ, ವೆಬ್ ಆಧಾರಿತ ಮಾಧ್ಯಮಗಳನ್ನು ಪೂರ್ಣವಾಗಿ ತಡೆಯುತ್ತದೆ. 2014ರ ವರೆಗೆ ಒಂದಂಕಿಯಲ್ಲಿದ್ದ ವಾರ್ಷಿಕ ಇಂಟರ್ನೆಟ್ ಕಡಿತಗಳ ಸಂಖ್ಯೆ 2014–17 ಅವಧಿಯಲ್ಲಿ ಎರಡಂಕಿಗೆ ಬಂದಿದ್ದು, ಒಟ್ಟು 130 ಆಗಿತ್ತು. 2018 ಜನವರಿಯಿಂದ 2021 ಮಾರ್ಚ್ ವರೆಗಿನ ಅವಧಿಯಲ್ಲಿ ವಾರ್ಷಿಕ ಮೂರಂಕಿಗೆ ಏರಿದ್ದು, ಒಟ್ಟು 380ಕ್ಕೆ ಏರಿದೆ (ಅಂದರೆ ಹಿಂದಿನ ಅವಧಿಯ 3 ಪಟ್ಟಾಗಿದೆ). ಕಡಿತದ ಅವಧಿಗಳು ಸಹ ದೀರ್ಘವಾಗಿದ್ದವು. ಉದಾಹರಣೆಗೆ 2019ರಲ್ಲಿ 106 ಕಡಿತಗಳು 4000 ಗಂಟೆಗಳ ಕಾಲ ಇದ್ದವು. ಜಮ್ಮು–ಕಾಶ್ಮೀರದ ಮೇಲೆ ಹೇರಲಾದ ಇಂಟರ್ನೆಟ್ ಕಡಿತ 213 ದಿನಗಳ ಕಾಲ (ಆಗಸ್ಟ್ 4, 2019 ರಿಂದ ಮಾರ್ಚ್ 4, 2020ವರೆಗೆ) ಸತತವಾಗಿತ್ತು. ಆ ಮೇಲೂ 2ಜಿ ನೆಟ್ ಮಾತ್ರಕೊಡಲಾಯಿತು. ಕರ್ನಾಟಕದಲ್ಲಿ ಸಹ 2019–20ರಲ್ಲಿ ಭಾರೀ ಸಿಎಎ ವಿರೋಧಿ ಪ್ರತಿಭಟನೆಗಳ ಸಂದರ್ಭದಲ್ಲಿ ಇಂಟರ್ನೆಟ್ ಕಡಿತ ಮಾಡಲಾಯಿತು ಎಂದು ವರದಿಯಾಗಿದೆ.


ಸಾರ್ವಜನಿಕ ಭದ್ರತೆ, ಸಾರ್ವಜನಿಕ ಶಾಂತಿಭಂಗ, ದ್ವೇಷ ಪ್ರಚಾರತಡೆ, ಅಪಾಯಕಾರಿ ಸುಳ್ಳು ಸುದ್ದಿ ತಡೆಗಳು ಈ ಕಡಿತಗಳಿಗೆ ಕಾರಣಗಳು ಎಂದು ಸರಕಾರಗಳು ಹೇಳುತ್ತಾ ಬಂದಿವೆ. ಆದರೆ ಪ್ರಮುಖವಾಗಿ ಸಿಎಎ–ಎನ್.ಆರ್.ಸಿ ಚಳುವಳಿ, ದೆಹಲಿ ಕೋಮು ಗಲಭೆಗಳು, ದೆಹಲಿ ಗಡಿಗಳಲ್ಲಿ ರೈತರ ಹೆದ್ದಾರಿಧರಣೆಯಲ್ಲಿ ಹಲವು ಬಾರಿ, ಇತರ ಹಲವು ಚಳುವಳಿಗಳ ಸಂದರ್ಭದಲ್ಲಿ ಇಂಟರ್‌ನೆಟ್ ಕಡಿತ ಮಾಡಲಾಯಿತು, ಅಂದರೆ ಪ್ರಜಾಸತ್ತಾತ್ಮಕ ಭಿನ್ನಮತ ಹತ್ತಿಕ್ಕಲುಇದನ್ನು ಪ್ರಧಾನವಾಗಿ ಬಳಸಲಾಯಿತು ಎಂಬುದು ವಾಸ್ತವ. ಸರಕಾರದ ದಮನಕಾರಿ ಕ್ರಮಗಳ ಸುದ್ದಿ ಹರಡದಂತೆ ಮತ್ತು ಇತರ ಗಂಭೀರ ವೈಫಲ್ಯಗಳನ್ನು ಮುಚ್ಚಿಡಲು, ಭಿನ್ನ ಮತೀಯರ ಅಭಿವ್ಯಕ್ತಿಯನ್ನು ಮತ್ತು ಸರಕಾರಕ್ಕೆ ವಿರುದ್ಧವಾದ ಅಭಿಪ್ರಾಯಗಳ ಪ್ರಚಾರವನ್ನು ತಡೆಗಟ್ಟಲು, ಇಂಟರ್ನೆಟ್ ಕಡಿತವನ್ನು ಸರಕಾರಗಳು ಈಗ ಸೆಕ್ಷನ್ 144 ರಷ್ಟು ಸಲೀಸಾಗಿ ಬಳಸುತ್ತಿವೆ ಎಂಬುದು ಸ್ಪಷ್ಟ.

ಕಳೆದ ಹತ್ತು (2010–20) ವರ್ಷಗಳಲ್ಲಿ 154 ಪತ್ರಕರ್ತರಿಗೆ ಅವರ ವೃತ್ತಿ ಸಂಬಂಧಿ ಪ್ರಕರಣಗಳಲ್ಲಿ ಶೋ ಕಾಸ್ ನೋಟೀಸ್ ಕೊಡಲಾಗಿದೆ ಅಥವಾ ಪೋಲೀಸ್ ವಿಚಾರಣೆಗೆ ಒಳಪಡಿಸಲಾಗಿದೆ, ಬಂಧಿಸಲಾಗಿದೆ. 2020 ಒಂದರಲ್ಲೇ ಇಂತಹ 67 ಪ್ರಕರಣಗಳು ಜರುಗಿವೆ. ಇವುಗಳಲ್ಲಿ 137 ಪ್ರಕರಣಗಳು ಬಿಜೆಪಿ ಸರಕಾರದ ಆಡಳಿತದ ಅವಧಿಯಲ್ಲಿ ನಡೆದಿವೆ, 73 ಬಿಜೆಪಿ ಮತ್ತು 30 ಎನ್.ಡಿ.ಎ ಕೂಟದ ಆಡಳಿತದ ರಾಜ್ಯಗಳಲ್ಲಿ ನಡೆದಿವೆ. ಇದೇ ಅವಧಿಯಲ್ಲಿ 9 ವಿದೇಶೀ ಪತ್ರಕರ್ತರ ವಿಚಾರಣೆ ನಡೆಸಿದ, ವೀಸಾ ರದ್ದು ಮಾಡಿ ವಾಪಸು ಕಳಿಸಿದ ಅಥವಾ ವೀಸಾ ನಿರಾಕರಿಸಿದ ಪ್ರಕರಣಗಳು ನಡೆದಿವೆ. ಬಿಜೆಪಿ ಸರಕಾರದ 2014–19 ಅವಧಿಯಲ್ಲಿ ಪತ್ರಕರ್ತರ ಮೇಲೆ 198 ದೈಹಿಕ ಹಲ್ಲೆಯ ಪ್ರಕರಣಗಳು ನಡೆದಿವೆ. ಇವುಗಳಲ್ಲಿ 19 ಮಹಿಳಾ ಪತ್ರಕರ್ತರ ಮೇಲೆ ನಡೆದ ಹಲ್ಲೆಗಳು ಸೇರಿವೆ ಹಾಗೂ 30 ಸಾವಿನಲ್ಲಿ ಕೊನೆಗೊಂಡಿವೆ. ಈ 30 ಕೊಲೆಗಳಲ್ಲಿ 3 ಪ್ರಕರಣಗಳಲ್ಲಿ ಮಾತ್ರ ಅಪರಾಧಿಗಳಿಗೆ ಶಿಕ್ಷೆಯಾಗಿದೆ. 2019 ಒಂದು ವರ್ಷದಲ್ಲೇ 36 ದೈಹಿಕ ಹಲ್ಲೆ ಪ್ರಕರಣಗಳು ನಡೆದಿವೆ.

ಪತ್ರಕರ್ತರ ಮೇಲೆ ದೈಹಿಕ ಹಲ್ಲೆ ಮತ್ತು ಪೋಲಿಸ್ ಪ್ರಕರಣಗಳ ಕಾರಣ ಹುಡುಕುತ್ತಾ ಹೋದರೆ ಒಂದೆಡೆ ಸರಕಾರದ ಆಳುವ ಪಕ್ಷದ ರಾಜಕಾರಣಿಗಳ ಕಾರ್ಯಕರ್ತರ ದೌರ್ಜನ್ಯ, ಗಂಭೀರ ವೈಫಲ್ಯಗಳ ಕುರಿತು ವರದಿ ಮಾಡಿದ ಅಥವಾ ಮಾಡಲು ಮಾಹಿತಿ ಸಂಗ್ರಹಿಸಿದ್ದು ಕಾರಣವೆಂದು ಕಾಣುತ್ತದೆ. ಇನ್ನೊಂದೆಡೆ ಭೂಮಿ ಮತ್ತಿತರ ಸಂಪನ್ಮೂಲಗಳ ಲೂಟಿ, ನೀರು, ಹೆಂಡ, ಗಣಿ ಮಾಫಿಯಾ ಗಳು, ಇತರ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿದ ಪ್ರಬಲ ವ್ಯಕ್ತಿಗಳು ಹಿತಾಸಕ್ತಿಗಳು ಹಾಗೂ ಅಧಿಕಾರಿ/ರಾಜಕಾರಣಿಗಳ ಜತೆಅವರ ಸಂಬಂಧಗಳನ್ನು ಬಯಲು ಮಾಡಿದ ಅಥವಾ ಆ ಹಾದಿಯಲ್ಲಿದ್ದ ಪತ್ರಕರ್ತರು ಗಂಭೀರ ಹಲ್ಲೆಗಳಿಗೆ ಒಳಗಾಗಿದ್ದಾರೆ. ಇಂತಹ ಹಲವು ಪತ್ರಕರ್ತರು ಜೀವಕ್ಕೆ ಅಪಾಯವಿಲ್ಲದಿದ್ದರೂ ಪ್ರಬಲ ಹಿತಾಸಕ್ತಿಗಳ ಒತ್ತಡದಿಂದ ಕೆಲಸ ಕಳೆದುಕೊಂಡಿದ್ದಾರೆ. ಕೊವಿಡ್ ಸಂದರ್ಭದಲ್ಲಿ ಹಲವು ಮಾಧ್ಯಮ ಕಂಪನಿಗಳು ತಮ್ಮ ಉದ್ಯೋಗಿಗಳ ಸಹಾಯಕ್ಕೆ ಧಾವಿಸದೆ ಅವರನ್ನು ವಜಾ ಮಾಡುವ ಮೂಲಕ ಲಾಭ ಉಳಿಸುವ/ಹೆಚ್ಚಿಸುವ ಅಥವಾ ನಷ್ಟ ಕಡಿಮೆ ಮಾಡಲು ಪ್ರಯತ್ನಿಸಿದ್ದಾರೆ.

ಕರ್ನಾಟಕದಲ್ಲಿ ಇಂತಹ ಹಲವು ದೈಹಿಕ ದಾಳಿಯ ಪ್ರಕರಣಗಳು ನಡೆದಿವೆ. ಸಿಎಎ/ಎನ್.ಪಿ.ಆರ್/ಎನ್.ಆರ್.ಸಿ ವಿರೋಧಿಸಿದ್ದ ಕನ್ನಡ ನೆಟ್.ಕಾಂ ಸಂಪಾದಕರಾಗಿದ್ದ ಸಿರಾಜ್ ಬಿಸರಳ್ಳಿ ಮೇಲೆ ಸಭೆಯೊಂದರಲ್ಲಿ ಅವರು ಓದಿದ ಕವನದ ಆಧಾರದ ಮೇಲೆ ಕೇಸು ದಾಖಲೆ ಮಾಡಲಾಯಿತು. ಅವರಿಗೆ ಬೈಲ್ ದೊರೆಯಿತಾದರೂ, ಅವರ ಮತ್ತು ಅವರ ಪತ್ರಿಕೆಯ ಸಾ.ಮಾ ಖಾತೆಗಳ ಟ್ರೋಲಿಂಗ್ ಮಾಡಿ ಮುಚ್ಚಿಸುವ ಪ್ರಯತ್ನ ಮಾಡಲಾಯಿತು. ಹಿಂದೆ ಕೋರ್ಟಿನಲ್ಲಿ ಮುಚ್ಚಲಾಗಿದ್ದ 25 ವರ್ಷ ಹಳೆಯ ಕೇಸನ್ನು ಮತ್ತೆ ತೆರೆದು, 'ನ್ಯಾಯಪಥ' ಪತ್ರಿಕೆಯ ಆಗಿನ ಸಂಪಾದಕರಾಗಿದ್ದ ದೊಡ್ಡಿಪಾಳ್ಯ ನರಸಿಂಹಮೂರ್ತಿ ಅವರ ಮೇಲೆ 2019 ಅಕ್ಟೋಬರ್ ನಲ್ಲಿ 'ದೇಶದ್ರೋಹ'ದ ಕೇಸು ಹಾಕಲಾಯಿತು. ತುಮಕೂರಿನಲ್ಲಿ ಫಾರ್ಮಾ ಕಾರ್ಖಾನೆಯ ಪರಿಸರ ಮಾಲಿನ್ಯದ ಕುರಿತು ವರದಿ ಮಾಡಲು ಹೋಗಿದ್ದ 'ರಾಜ್ ನ್ಯೂಸ್' ವರದಿಗಾರರ ಮೇಲೆ ಕಾರ್ಖಾನೆಯ ಸಿಬ್ಬಂದಿ ದಾಳಿ ಮಾಡಿದರು. ಮಂಗಳೂರಿನಲ್ಲಿ ಸಿಎಎ ಪ್ರತಿಭಟನೆ ವರದಿ ಮಾಡಲು ಬಂದಿದ್ದ ಕೇರಳದ 7 ಪತ್ರಕರ್ತರನ್ನು ಬಂಧಿಸಿ ಕೇರಳಕ್ಕೆ 'ಗಡಿಪಾರು' ಮಾಡಲಾಯಿತು. ಮೈಸೂರಿನಲ್ಲಿ ಒತ್ತುವರಿ ಮಾಡಿದ ಜಮೀನಿನಲ್ಲಿ ಕಟ್ಟಿದ ಗುಡಿಗಳನ್ನು ಕೆಡವಿದ ಪ್ರಕರಣದ ವಿರುದ್ಧ ಪ್ರತಿಭಟನೆಯ ವರದಿ ಮಾಡಲು ಪ್ರತಿಭಟನಾಕಾರ ನಾಯಕರೊಬ್ಬರ ಸಂದರ್ಶನರೆ ಕಾರ್ಡು ಮಾಡುತ್ತಿದ್ದ 'ಕೌಸರ್ ನ್ಯೂಸ್' ಎಂಬ ಪತ್ರಿಕೆಯ ಪತ್ರಕರ್ತ ಮಹಮ್ಮದ್ ಸಫ್ದರ್‌ಕೈಸರ್ ಮೇಲೆ ಸೆಪ್ಟೆಂಬರ್ 2021ರಲ್ಲಿ ಸಂಘ ಪರಿವಾರದ ಕಾರ್ಯಕರ್ತರು ಹಲ್ಲೆ

ಪುಟ 10 ಕ್ಕೆ



ಸಾಂಸ್ಕೃತಿಕ ಕಲಾಭಿವ್ಯಕ್ತಿಯನ್ನು ಹಿಂದುತ್ವದ ತಾತ್ವಿಕ ನೆಲೆಗಳೊಂದಿಗೆ ಬೆಸೆಯಲು ರಂಗಾಯಣ ಪ್ರಯೋಗ........ ಪುಟ 6 ರಿಂದ

ಸಂಸ್ಕೃತಿಯ ವಿಭಿನ್ನ ವ್ಯಾಖ್ಯಾನಗಳು

ಸಂಸ್ಕೃತಿಯನ್ನು ವಿಶ್ವದ ಹಲವಾರು ಚಿಂತಕರು, ದಾರ್ಶನಿಕರು ವಿಭಿನ್ನ ರೀತಿಯಲ್ಲಿ ವಿಷದೀಕರಿಸಿದ್ದಾರೆ. ಮತ–ಧರ್ಮ ಮತ್ತು ಸಂಸ್ಕೃತಿಯನ್ನು ಒಂದೇ ಭೂಮಿಕೆಯಲ್ಲಿಟ್ಟು ನೋಡುವಾಗ ಈ ವ್ಯಾಖ್ಯಾನಗಳು ಮತ್ತಷ್ಟು ವೈವಿಧ್ಯತೆಯನ್ನು ಪಡೆದುಕೊಳ್ಳುತ್ತವೆ. ಸಾಮಾನ್ಯ ಪರಿಭಾಷೆಯಲ್ಲಿ ಸಂಸ್ಕೃತಿ ಎಂದರೆ ಒಂದು ಸಮಾಜದ ಅಥವಾ ಸಮುದಾಯದ ನಡುವೆ ಬೇರೂರಿರುವ, ಪ್ರಚಲಿತವಾಗಿರುವ ಜ್ಞಾನ ಪರಂಪರೆ, ಅನುಭವ ಮತ್ತು ಅನುಭಾವದ ನೆಲೆಗಳು, ನಂಬಿಕೆಗಳು, ಮೌಲ್ಯಗಳು, ವಿಚಾರ ಧೋರಣೆ ಮತ್ತು ಶ್ರೇಣೀಕರಣ, ಧರ್ಮದ ಪರಿಕಲ್ಪನೆ, ಲೌಕಿಕ ಪ್ರಪಂಚವನ್ನು ಕುರಿತ ಗ್ರಹಿಕೆ ಮತ್ತು ಆ ಸಮಾಜದಲ್ಲಿನ ಜನಸಮುದಾಯಗಳ ನಡುವೆ ಇರುವ ಸಂವಹನದ ಮಾಧ್ಯಮಗಳು, ಹೀಗೆ ಹಲವು ಆಯಾಮಗಳಲ್ಲಿ ಕಂಡುಬರುತ್ತದೆ. ಒಂದು ಸಮಾಜ ಸಾಂಪ್ರದಾಯಿಕವಾಗಿ ಅಥವಾ ಪಾರಂಪರಿಕವಾಗಿ ರೂಢಿಸಿಕೊಂಡು ಬರುವ ವ್ಯಕ್ತಿಗತ ಮತ್ತು ಸಾಮುದಾಯಿಕ ಧೋರಣೆ ಹಾಗೂ ವಿಚಾರಲಹರಿ ಸಂಸ್ಕೃತಿಯನ್ನು ನಿರ್ಧರಿಸುವ ಪ್ರಮುಖ ನೆಲೆಯಾಗುತ್ತದೆ.

ಜನಸಾಮಾನ್ಯರ ನಡುವಿನ ಸಾಂಕೇತಿಕ ಸಂವಹನ ಪ್ರಕ್ರಿಯೆಯಲ್ಲಿ ವ್ಯಕ್ತವಾಗುವ ಅನೇಕ ಸೂಕ್ಷ್ಮ ಸಂವೇದನೆಯ ಚಿಂತನೆಗಳು ಸಂಸ್ಕೃತಿಯನ್ನು ರೂಪಿಸುವಲ್ಲಿ ಸಕ್ರಿಯವಾಗಿರುತ್ತವೆ. ಮನುಷ್ಯ ಆಧುನಿಕತೆಗೆ ತೆರೆದುಕೊಂಡಂತೆಲ್ಲಾ ಅವನೊಳಗಿನ ಈ ಸಂವೇದನೆ ಮತ್ತು ಧೋರಣೆ ಬದಲಾಗುತ್ತಾ ಹೋಗುತ್ತದೆ, ಇದರೊಟ್ಟಿಗೇ ಸಾಂಸ್ಕೃತಿಕ ನೆಲೆಗಳೂ ಹಲವು ಕವಲುಗಳಲ್ಲಿ ವಿಸ್ತರಿಸಲಾರಂಭಿಸುತ್ತವೆ. ಈ ವಿಸ್ತರಣದ ಸಂದರ್ಭದಲ್ಲೇ ಮೂಲ ಸಂಸ್ಕೃತಿಯಿಂದ ವಿಮುಖವಾಗುವ ಲಕ್ಷಣಗಳೂ ಸಮಾಜದಲ್ಲಿ ಢಾಳಾಗಿ ಕಾಣಿಸಿಕೊಳ್ಳತೊಡಗುತ್ತವೆ. ಜನಸಾಮಾನ್ಯರ ಅಭಿವ್ಯಕ್ತಿಯಲ್ಲಿ ಕಂಡು ಬರುವ ಆಧುನಿಕ ಚಿಂತನೆಗಳು ಮತ್ತು ಸಮಾಜದಲ್ಲಿ ಅಂತರ್ಗತವಾಗಿರುವ ಪಾರಂಪರಿಕ ಧೋರಣೆಗಳು ಮುಖಾಮುಖಿಯಾಗುವುದು ಇಲ್ಲಿಯೇ. ತಾವು ಪರಿಭಾವಿಸುವ ಯಾವುದೋ ಒಂದು ನಿರ್ದಿಷ್ಟ ಮತದ ತಾತ್ವಿಕ ನೆಲೆಗಳನ್ನೇ, ಬೇರೂರಿರುವ ಸಂಸ್ಕೃತಿಯೊಡನೆ ಸಮೀಕರಿಸಿ ಒಂದು ಹೊಸ ಸಾಂಸ್ಕೃತಿಕ ಪರಿಭಾಷೆಯನ್ನು ಸೃಷ್ಟಿಸುವ ಪ್ರಯತ್ನಗಳು ಇಲ್ಲಿ ಮುಖ್ಯವಾಗಿ ಕಂಡುಬರುತ್ತವೆ.

ಯಾವುದೇ ಸಮಾಜದಲ್ಲಾದರೂ ಸಾಂಸ್ಕೃತಿಕ ನೆಲೆಗಳನ್ನು ಜನಸಮುದಾಯಗಳ ಅಭಿವ್ಯಕ್ತಿಯಲ್ಲಿ ಕಾಣುವುದು ಸಹಜ. ಈ ಅಭಿವ್ಯಕ್ತಿಯ ಮಾಧ್ಯಮಗಳು ಸಂವಹನ ಮಾರ್ಗಗಳನ್ನೂ ದಾಟಿ ಚಿತ್ರಕಲೆ, ಸಾಹಿತ್ಯ, ರಂಗಭೂಮಿ,ನಾಟ್ಯ ಮತ್ತಿತರ ನೆಲಮೂಲದ ಕಲೆಗಳಲ್ಲಿ ವ್ಯಕ್ತವಾಗುತ್ತವೆ. ಜನಸಮುದಾಯಗಳ ನಿತ್ಯಜೀವನದ ಒಂದು ಭಾಗವಾಗಿಯೇ ರೂಪುಗೊಳ್ಳುವ ಈ ಕಲಾ ಪ್ರಕಾರಗಳು ಕಾಲದಿಂದ ಕಾಲಕ್ಕೆ ಬದಲಾಗುತ್ತಲೇ ಹೋದರೂ, ಮೂಲ ಜನಸಂಸ್ಕೃತಿಯ ಬೇರುಗಳನ್ನು ಕಾಪಾಡಿಕೊಂಡು ಬರುವುದನ್ನೂ ಕಾಣಬಹುದು. ಭಾರತದ ಸಂದರ್ಭದಲ್ಲಿ ರಂಗಭೂಮಿ ಮತ್ತು ನಾಟಕ ಕಲೆ, ನೃತ್ಯ ಕಲೆ ಮತ್ತು ಮೌಖಿಕ ಸಂಪ್ರದಾಯದ ಹಲವು ಆಯಾಮಗಳು ಇಲ್ಲಿನ ನೆಲ ಸಂಸ್ಕೃತಿಯಿಂದಲೇ ಉಗಮಿಸಿವೆ. ಭಾರತದಲ್ಲಿ ಜಾತಿಗಳಿರುವಷ್ಟೇ ಸಂಖ್ಯೆಯಲ್ಲಿ ಸಾಂಸ್ಕೃತಿಕ ನೆಲೆಗಳೂ ಹರವಿಕೊಂಡಿರುವುದನ್ನು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಗುರುತಿಸಬಹುದು. ಈ ವೈವಿಧ್ಯತೆಯ ನಡುವೆಯೇ ಕಾಣಬಹುದಾದ ಒಂದು ಸಮಾನ ಎಳೆ ಎಂದರೆ ಪ್ರಕೃತಿ ಮತ್ತು ಮಾನವನ ನಡುವಿನ ಸಂಬಂಧಗಳು, ವ್ಯಷ್ಟಿ ಮತ್ತು ಸಮಷ್ಟಿಯ ನಡುವಿನ ಕೊಂಡಿ ಹಾಗೂ ವ್ಯಕ್ತಿಗತ ಬದುಕಿಗೆ ಪೂರಕವಾಗುವಂತಹ ಆಚರಣೆಯ ವಿಧಾನಗಳು.

19ನೆಯ ಶತಮಾನದವರೆಗೂ ಭಾರತದ ಸಾಂಸ್ಕೃತಿಕ ನೆಲೆಗಳನ್ನು ವಿಸ್ತರಿಸುವ ಅಭಿವ್ಯಕ್ತಿ ಮಾರ್ಗಗಳು ಈ ದೇಶದ ತಳಸಮುದಾಯಗಳಿಂದಲೇ ವ್ಯಕ್ತವಾಗುತ್ತಿದ್ದುದನ್ನು ಗಮನಿಸಬಹುದು. ನಾಟಕ, ರಂಗಭೂಮಿ, ನಾಟ್ಯ ಮತ್ತು ಇತರ ಕಲಾ ಪ್ರಕಾರಗಳು ಮೂಲತಃ ಜನಸಮುದಾಯಗಳ ನಿತ್ಯ ಬದುಕಿನ ಒಂದು ಭಾಗವಾಗಿ, ನೆಲದೊಡನೆ ತಮ್ಮ ಸಂಬಂಧವನ್ನು ಇರಿಸಿಕೊಳ್ಳುತ್ತಲೇ ವಿಭಿನ್ನ ಆಯಾಮಗಳನ್ನು ಪಡೆದುಕೊಳ್ಳುತ್ತಿದ್ದವು. ಜನಪದ ಸಂಸ್ಕೃತಿಯನ್ನು ಉಳಿಸಿಕೊಳ್ಳುತ್ತಲೇ ಆಧುನಿಕ ಜಗತ್ತಿಗೆ ತೆರೆದುಕೊಳ್ಳುವ ಪ್ರಯತ್ನಗಳಲ್ಲಿ ರಂಗಭೂಮಿ ಮತ್ತು ಕಲಾ ಪ್ರಕಾರಗಳು ವಿಭಿನ್ನ ಆಯಾಮಗಳನ್ನು ಪಡೆದುಕೊಂಡವು. ತಳಸಮುದಾಯಗಳ ಕಲಾಭಿವ್ಯಕ್ತಿಯ ಮಾರ್ಗಗಳಾಗಿದ್ದ ನಾಟ್ಯ, ಸಂಗೀತ ಮತ್ತು ವಾದ್ಯ ಸಂಗೀತ ಮಾಧ್ಯಮಗಳು ಆಧುನಿಕ ಜಗತ್ತಿಗೆ ತೆರೆದು ಕೊಂಡ ಕೂಡಲೇ ಮೇಲ್ಜಾತಿಯಿಂದ ಆವರಿಸಲ್ಪಟ್ಟವು. ನಾಟಕ, ವಾದ್ಯ ಸಂಗೀತ ಹಾಗೂ ಸ್ವರ ಸಂಗೀತ ಮತ್ತು ನಾಟ್ಯ ಪರಂಪರೆಗಳು ಕ್ರಮೇಣ ಮೇಲ್ಜಾತಿಗಳ, ವೈದಿಕ ಸಮುದಾಯಗಳ ಹಿಡಿತಕ್ಕೊಳಪಟ್ಟವು.

ವೈದಿಕ ಸಮುದಾಯದ ಈ ಪ್ರಾಬಲ್ಯವೇ ಸಮಕಾಲೀನ ಸಂದರ್ಭದಲ್ಲಿ ಸಂಸ್ಕೃತಿಯನ್ನು ಹಿಂದೂ ಮತದೊಡನೆ ಸಮೀಕರಿಸುವ ಮತ್ತು ಹಿಂದೂ ಧಾರ್ಮಿಕ ಆಚರಣೆಗಳೊಡನೆ ಪೋಣಿಸುವ ಪ್ರಕ್ರಿಯೆಗೂ ನಾಂದಿ ಹಾಡಿದೆ. ತಳಸಮುದಾಯಗಳ ಅನೇಕ ದೇವಾಧಿದೇವತೆಗಳನ್ನು, ಪೂಜಾ ಕೇಂದ್ರಗಳನ್ನು, ಆರಾಧನಾ ಕೇಂದ್ರಗಳನ್ನು ಆಕ್ರಮಿಸಿಕೊಂಡಂತೆಯೇ ವೈದಿಕಶಾಹಿ ಮತ್ತು ವೈದಿಕ ಸಂಪ್ರದಾಯದ ಶಕ್ತಿಗಳು ಕೆಲವು ಆಚರಣೆಗಳಿಗೂ ಆಧುನಿಕತೆಯ ಸ್ಪರ್ಶ ನೀಡುವ ಮೂಲಕ ವೈದಿಕೀಕರಣಗೊಳಿಸಿವೆ. ತಳಸಮುದಾಯದ ದೇವರುಗಳಾದ ಅಯ್ಯಪ್ಪ, ಗಣಪತಿ, ಶಕ್ತಿ ದೇವತೆಗಳು ಕ್ರಮೇಣ ವೈದಿಕ ವಿಧಿವಿಧಾನಗಳಲ್ಲಿ, ಆಚರಣೆಗಳಲ್ಲಿ ಸಿಲುಕಿ ತಮ್ಮ ಮೂಲ ನೆಲೆಗಳನ್ನೇ ಕಳೆದುಕೊಂಡಂತಾಗಿದೆ. ಈ ಪ್ರಕ್ರಿಯೆಯೊಂದಿಗೇ ಜನಪದ ಮೂಲದ ಕಲಾಭಿವ್ಯಕ್ತಿಯ ಮಾರ್ಗಗಳ ಮೇಲೂ ತಮ್ಮ ಪಾರಮ್ಯ ಸಾಧಿಸುವಲ್ಲಿ ವೈದಿಕಶಾಹಿ ಯಶಸ್ವಿಯಾಗಿದೆ. ಸಂಸ್ಕೃತಿಯ ಬ್ರಾಹ್ಮಣೀಕರಣ ಅಥವಾ ವೈದಿಕೀಕರಣದ ಈ ಪ್ರಕ್ರಿಯೆಯಿಂದಲೇ, ತಳಸಮುದಾಯದ ಆಶಯಗಳನ್ನು ಪ್ರತಿನಿಧಿಸಬೇಕಾದ ಸಾಂಸ್ಕೃತಿಕ ನೆಲೆಗಳು ನಿರ್ದಿಷ್ಟ ಧಾರ್ಮಿಕ ಚೌಕಟ್ಟಿನೊಳಗೆ ಸಿಲುಕಿ ತಮ್ಮ ಅಂತಃ ಸತ್ವವನ್ನು ಕಳೆದುಕೊಳ್ಳುತ್ತಿವೆ.

ಸಾಂಸ್ಕೃತಿಕ ನೆಲೆಗಳ ಮೇಲಿನ ಧಾಳಿ

ಭಾರತದಲ್ಲಿ ಹಿಂದುತ್ವ ರಾಜಕಾರಣ ಬೇರೂರುತ್ತಿರುವಂತೆಯೇ ಹಿಂದೂ ಮತದತಾತ್ವಿಕ ನಿಲುಮೆಗಳನ್ನು ಎಲ್ಲ ವಲಯಗಳಲ್ಲೂ ಪಸರಿಸುವ ವ್ಯವಸ್ಥಿತ ಪ್ರಯತ್ನಗಳು ನಡೆಯುತ್ತಲೇ ಇವೆ. ಶೈಕ್ಷಣಿಕ ವಲಯದಲ್ಲಿ ಇದು ಈಗಾಗಲೇ ಆಳವಾಗಿ ಬೇರೂರಿದ್ದು ಪ್ರಾಥಮಿಕ ಶಿಕ್ಷಣದಿಂದ ಅತ್ಯುನ್ನತ ವ್ಯಾಸಂಗದವರೆಗೆ ಇದು ಸ್ಥಾಪಿತವಾಗಿಬಿಟ್ಟಿದೆ. ಸಂಸ್ಕೃತಿ ಎಂಬ ವ್ಯಾಪಕ ಚೌಕಟ್ಟಿನೊಳಗೆ ದೇವರು, ಧರ್ಮ, ಆಚರಣೆ ಮತ್ತು ವಿಧಿವಿಧಾನಗಳನ್ನು ಅಳವಡಿಸುವ ಮೂಲಕ ಹಿಂದೂ ಸಂಸ್ಕೃತಿಯ ವ್ಯಾಪ್ತಿಯಲ್ಲಿ ಈ ದೇಶದ ಜನ ಸಂಸ್ಕೃತಿಯ ನೆಲೆಗಳನ್ನೂ ಸಮ್ಮಿಳಿತಗೊಳಿಸಲಾಗುತ್ತಿದೆ. ಈ ಸಾಂಸ್ಕೃತಿಕ ಧಾಳಿಯ ಒಂದು ಆಯಾಮವನ್ನು ಬಹುರೂಪಿ ವಿವಾದದಲ್ಲಿ ಗುರುತಿಸಬಹುದು. ಒಂದು ನಿರ್ದಿಷ್ಟ ಮತ–ಧರ್ಮ–ಜಾತಿಯ ಸಾಂಸ್ಕೃತಿಕ ಟೊಂಗೆಗಳನ್ನು ಜನಸಂಸ್ಕೃತಿಯ ಬೇರುಗಳೊಂದಿಗೆ ಕಸಿ ಮಾಡುವ ಪ್ರಕ್ರಿಯೆಯಲ್ಲಿ ಮೂಲ ನೆಲ ಸಂಸ್ಕೃತಿಯನ್ನೇ ಭ್ರಷ್ಟಗೊಳಿಸುವ ಪ್ರಯತ್ನಗಳನ್ನು ಇಲ್ಲಿ ಗಮನಿಸಬೇಕಿದೆ.

"ತಾಯಿ ಬಹುರೂಪಿ ನಾಟಕೋತ್ಸವ"ದ ಹಿನ್ನೆಲೆಯಲ್ಲಿ ಭುಗಿಲೆದ್ದಿರುವ ವಿವಾದವನ್ನು ಈ ದೃಷ್ಟಿಯಿಂದ ನೋಡಿದಾಗ ರಂಗಾಯಣ ನಿರ್ದೇಶಕರಿಗಾಗಲಿ, ಹಿಂದೂ ಸಾಂಸ್ಕೃತಿಕ ಪರಿಚಾರಕರಿಗಾಗಲಿ ಯಾವುದೇ ಷಡ್ಯಂತ್ರ, ಪಿತೂರಿ ಕಾಣಲು ಸಾಧ್ಯವಿಲ್ಲ. ಪ್ರಕೃತಿಯೊಡನೆ ನೇರವಾಗಿ ಸಂವಾದಿಸುವ ಒಂದು ಪರಂಪರೆಯಲ್ಲಿ ಕಲಾಭಿವ್ಯಕ್ತಿಯ ಮಾಧ್ಯಮಗಳು ಬೆಳೆದು ಬಂದರೆ ಸಾಂಸ್ಕೃತಿಕ ಜಗತ್ತು ಶ್ರೀಮಂತವಾಗಲು ಸಾಧ್ಯ. ಇಲ್ಲಿ ಪ್ರಕೃತಿ ಎಂದರೆ ಕೇವಲ ನಮ್ಮ ಸುತ್ತಲಿನ ನಿಸರ್ಗ ಮಾತ್ರವೇಅಲ್ಲ, ಈ ನಿಸರ್ಗವನ್ನು ಅವಲಂಬಿಸಿಯೇ ತಮ್ಮ ಬದುಕು ಕಟ್ಟಿಕೊಳ್ಳುವ ತಳಸಮುದಾಯಗಳೂ ಇರುತ್ತವೆ. ಈ ತಳಸಮುದಾಯಗಳೊಂದಿಗೆ ಗುರುತಿಸಿಕೊಳ್ಳಲಾಗದ ಯಾವುದೇ ಕಲಾಭಿವ್ಯಕ್ತಿ ಆಧುನಿಕತೆಯ ಭರಾಟೆಯಲ್ಲಿ ಕಳೆದುಹೋಗುತ್ತದೆ.

ಯಾವುದೇ ನಿರ್ದಿಷ್ಟ ಮತದ ಧಾರ್ಮಿಕ ನಂಬಿಕೆಗಳು ಸಾಂಸ್ಕೃತಿಕ ನೆಲೆಗಳನ್ನು ಆಕ್ರಮಿಸಲು ಯತ್ನಿಸುವಾಗ ಈ ಕಳೆದು ಹೋಗುವ ಪ್ರಕ್ರಿಯೆ ಮತ್ತಷ್ಟು ಗಟ್ಟಿಯಾಗಿ ಭ್ರಷ್ಟ ಸ್ವರೂಪಗಳನ್ನು ಪಡೆದುಕೊಂಡು ಬಿಡುತ್ತವೆ. ಬಹುರೂಪಿ ಅಥವಾ ರಂಗಾಯಣ ಇದಕ್ಕೆ ಸಾಕ್ಷಿಯಾಗುವುದು ಬೇಡ. ●

ರೈತ ಚಳುವಳಿ ಇತಿಹಾಸ ನಿರ್ಮಿಸಿದೆ

ದೇಶದ ರೈತ ಚಳುವಳಿ ಇತಿಹಾಸ ನಿರ್ಮಿಸಿದೆ. ಭಾರತ ಸರ್ಕಾರ ರೈತರ ಎಲ್ಲಾ ಬೇಡಿಕೆಗಳನ್ನು ಒಪ್ಪಿಕೊಂಡು ಪತ್ರವನ್ನು ನೀಡಿದ ನಂತರ ಸಂಯುಕ್ತ ಕಿಸಾನ್ ಮೋರ್ಚಾ ಈ ಜಂಟಿ ಹೋರಾಟ ಯಶಸ್ವಿಯಾಗಿದೆ ಎಂದು ಘೋಷಿಸಿತು. ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಕೇಂದ್ರ ಕಾರ್ಯಕಾರಿ ಸಮಿತಿಯು ಈ ಅಭೂತ ಪೂರ್ವ ಹೋರಾಟದಲ್ಲಿ ಪಾಲ್ಗೊಂಡ ಎಲ್ಲ ರೈತರು, ಕೃಷಿ ಕೂಲಿಕಾರರು, ಕಾರ್ಮಿಕರು ಮತ್ತು ಎಲ್ಲ ನಾಗರಿಕರನ್ನು ಅಭಿನಂದಿಸಿದೆ.

ಲಖೀಪುರ್ ಖೇರಿಯ ರೈತರೂ ಸೇರಿದಂತೆ ಹೋರಾಟದಲ್ಲಿ ಪಾಲ್ಗೊಂಡು ಮಡಿದ 715 ಮಂದಿ ರೈತರಿಗೆ ಕೃಷಿ ಕೂಲಿಕಾರರ ಸಂಘವು ಕ್ರಾಂತಿಕಾರಿ ವಂದನೆಗಳನ್ನು ಸಲ್ಲಿಸುತ್ತದೆ. ಅಖಿಲ ಭಾರತ ಕೃಷಿ ಕೂಲಿಕಾರರ ಸಂಘವು ರೈತ ಹೋರಾಟದ ಈ ಚಾರಿತ್ರಿಕ ಗೆಲುವನ್ನು ಸ್ಥಳೀಯ ಘಟಕದಿಂದ ರಾಜ್ಯ ಘಟಕದ ವರೆಗೂ ಎಲ್ಲಾ ಹಂತಗಳಲ್ಲಿ ಡಿಸೆಂಬರ್ 11 ರಂದು ವಿಜಯೋತ್ಸವವಾಗಿ ಆಚರಿಸಬೇಕೆಂದು ಕರೆ ನೀಡಿದೆ. ಅಖಿಲ ಭಾರತ ಕೃಷಿ ಕೂಲಿಕಾರರ ಸಂಘವು ಈ ಐತಿಹಾಸಿಕ ಹೋರಾಟದ ಭಾಗವೇ ಆಗಿತ್ತು. ಈ ಗೆಲುವು ಜನರ ಗೆಲುವು ಆಗಿದ್ದು ಈ ಗೆಲುವನ್ನು ಜನರ ನಡುವೆಯೇ ಆಚರಿಸಬೇಕು. ಆ ಮೂಲಕ ಕೃಷಿ ಕೂಲಿಕಾರರ ಹಾಗೂ ಗ್ರಾಮೀಣ ಬಡವರ ಮುಂದಿನ ಹೋರಾಟವನ್ನು ಈ ಹೋರಾಟದ ಸ್ಫೂರ್ತಿಯೊಂದಿಗೆ ಮುಂದುವರೆಸಲು ಸಾಧ್ಯವಾಗಬೇಕು ಎಂದು ಹೇಳಿದೆ.

ಮಾಧ್ಯಮಗಳ ಮತ್ತು ಪತ್ರಕರ್ತರ ಮೇಲೆ ದಾಳಿಗಳು.. ಪುಟ 9 ರಿಂದ

ನಡೆಸಿದರು. ಇವು ಕೆಲವು ಉದಾಹರಣೆಗಳಷ್ಟೇ.

"ಗಡಿಗಳಿಲ್ಲದ ವರದಿಗಾರರು" (ರಿಪೋರ್ಟರ್ಸ್ ಸಾನ್ಸ್ ಫ್ರಾಂಟಿಯರ್–ಆರ್.ಎಸ್.ಎಫ್) ಎಂಬ ಫ್ರಾನ್ಸ್ ನಲ್ಲಿ ಮುಖ್ಯನೆಲೆ ಹೊಂದಿರುವ ಅಂತರಾಷ್ಟ್ರೀಯ ಪತ್ರಕಾರಿತೆಯ ಲಾಭರಹಿತ ಸಂಸ್ಥೆ, ಜಗತ್ತಿನ ಎಲ್ಲ ದೇಶಗಳ ಮಾಧ್ಯಮ ಸ್ವಾತಂತ್ರ್ಯದ ಕುರಿತು ಮಾಹಿತಿ ಸಂಗ್ರಹಿಸಿ ಪರೀಶೀಲಿಸಿ ಹಲವು ವರ್ಷಗಳಿಂದ ಪ್ರಕಟಿಸುತ್ತಿದೆ. ಕಳೆದ ಮತ್ತು ಈ ವರ್ಷ ಭಾರತದ 'ಮಾಧ್ಯಮ ಸ್ವಾತಂತ್ರ್ಯ' ರ್‍ಯಾಂಕ್ ಗಳಲ್ಲಿ 180 ದೇಶಗಳಲ್ಲಿ 142ನೇ ಸ್ಥಾನ ಗಳಿಸಿದೆ. ಆರ್.ಎಸ್.ಎಫ್ ತನ್ನ ವರದಿಯಲ್ಲಿ ಭಾರತ "ಪತ್ರಕರ್ತರಿಗೆ ಅತ್ಯಂತ ಅಪಾಯ ಕಾರಿಯಾದ ದೇಶಗಳಲ್ಲಿ ಒಂದು" ಎಂದು ಹೇಳಿದೆ. ಪ್ರಧಾನಿ ಮೋದಿ ಅವರು ಜಗತ್ತಿನ 37 "ಪತ್ರಿಕಾ ಸ್ವಾತಂತ್ರ್ಯದ ದಾಳಿಕೋರ"ರಲ್ಲಿ ಒಬ್ಬರು ಎಂದು ಹೆಸರಿಸಿದೆ. ಇದನ್ನು ಜಗತ್ತಿನಾದ್ಯಂತ ಮಾಧ್ಯಮಗಳಲ್ಲಿ ವ್ಯಾಪಕವಾಗಿ ವರದಿಯಾಗಿದ್ದು ಸರಕಾರಕ್ಕೆ ಇರಿಸು ಮುರುಸಾಗಿದೆ. ಆದರೆ ಈಗಾಗಲೇ ಆಳುವ ಪಕ್ಷ ಮತ್ತು ಸರಕಾರಗಳ ನೇರ ದಾಳಿ ಅಥವಾ ದಾಳಿಗಳಿಗೆ ಪರೋಕ್ಷ ಕುಮ್ಮಕ್ಕುಗಳನ್ನು ಗಮನಿಸಿದರೆ, ಇದು ಆಶ್ಚರ್ಯಕರವೇನಲ್ಲ ಮತ್ತು ಸರಿಯಾಗಿಯೇ ಇದೆ. ಮಾತ್ರವಲ್ಲ, 2006ರಲ್ಲಿ 106 ಇದ್ದ ಈ ರ್‍ಯಾಂಕ್ ಸತತವಾಗಿ ಕುಸಿಯುತ್ತಾ ಬಂದಿತ್ತು. ವಿಶೇಷವಾಗಿ ಪತ್ರಕರ್ತರ ಮೇಲೆ ಸರಕಾರದ ದಮನ, ದೈಹಿಕ ದಾಳಿ, ಬೇಕಾಬಿಟ್ಟಿ ಇಂಟರ್ನೆಟ್ ಕಡಿತ ಮತ್ತು ಅಗಾಧವಾಗಿ ಹೆಚ್ಚಿದ ಏಕಸ್ವಾಮ್ಯ– ಇವುಗಳಿಂದಾಗಿ ಭಾರತದ 'ಮಾಧ್ಯಮ ಸ್ವಾತಂತ್ರ್ಯ' ರ್‍ಯಾಂಕ್ 142ಕ್ಕೆ ಕುಸಿದಿದೆ. ಇದು ಜಾಗತಿಕವಾಗಿ ವ್ಯಾಪಕವಾಗಿ ವರದಿಯಾಗಿ ಸುದ್ದಿಯಾಯಿತು. ಪಾಕಿಸ್ತಾನ, ಬ್ರೆಜಿಲ್, ರಶ್ಯದಂತಹ ದೇಶಗಳಿಗಿಂತ 'ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ' ಭಾರತ ಕೆಲವೇ ರ್‍ಯಾಂಕುಗಳಿಂದ ಮುಂದಿರುವುದು ಸರಕಾರಕ್ಕೆ ವಿಶೇಷ ಮುಜುಗರ ತಂದಿದೆ. ವಾಸ್ತವ ಅಥವಾ ದೇಶೀಯ ಅಭಿಪ್ರಾಯಕ್ಕಿಂತ, ಅಂತರಾಷ್ಟ್ರೀಯ ಪ್ರತಿಷ್ಠೆ ಕುರಿತು ಹೆಚ್ಚು ಸಂವೇದನಾಶೀಲವಾಗಿರುವ ಸರಕಾರ ಕೂಡಲೇ ಇದಕ್ಕೆ ಒಂದು ಸಮಿತಿ ನೇಮಿಸಿತು. 15 ಸದಸ್ಯರ ಈ ಸಮಿತಿಯಲ್ಲಿ ಕೇವಲ 3 ಪತ್ರಕರ್ತರಿದ್ದರು. ಈ ಸಮಿತಿ ದೇಶದಲ್ಲಿ 'ಮಾಧ್ಯಮ ಸ್ವಾತಂತ್ರ್ಯದ ಪರಿಸ್ಥಿತಿಯನ್ನು ಪರಿಶೀಲಿಸಿ' ಒಂದು ವರದಿ ಸಲ್ಲಿಸಿ ಈ ರ್‍ಯಾಂಕಿಂಗ್ 'ಪಾಶ್ಚಿಮಾತ್ಯ ಪೂರ್ವಗ್ರಹ'ದ ಫಲ ಎಂದಿದೆ. ಈ ಸಮಿತಿಯ ಸದಸ್ಯರಲ್ಲಿ ಒಬ್ಬರಾಗಿದ್ದ ಪಿ ಸಾಯಿನಾಥ್ ಈ ವರದಿಗೆ ಭಿನ್ನಮತ ಟಿಪ್ಪಣಿ ಸಲ್ಲಿಸಿದ್ದು ಅದನ್ನು ಪ್ರಶ್ನಿಸಿದ್ದಾರೆ. ಭಾರತದ 'ಮಾಧ್ಯಮ ಸ್ವಾತಂತ್ರ್ಯ'ದ ಪರಿಸ್ಥಿತಿ ವಾಸ್ತವವಾಗಿ ಆರ್.ಎಸ್.ಎಫ್. ಹೇಳಿದ್ದಕ್ಕಿಂತಲೂ ಕೆಟ್ಟದಿದೆ ಎಂದು ಮಾಹಿತಿಗಳ ಮೂಲಕ ವಾದಿಸಿದ್ದಾರೆ. ●



ಅಪರೂಪದ ಇತಿಹಾಸಕಾರ್ತಿ ರೊಮಿಲಾ ಥಾಪರ್ ಅವರಿಗೆ ನವೆಮಭರ್ 30ಕ್ಕೆ 90 ತುಂಬಿದೆ. ಥಾಪರ್, ತಮ್ಮ ಎಲ್ಲಾ ಸಾಧನೆಗಳ ಜೊತೆಯಲ್ಲಿ, ಸ್ಥೈರ್ಯಶಾಲಿ, ರಾಜಿಯಿಲ್ಲದ, ಸ್ವತಂತ್ರ ಮಹಿಳೆಯಾಗಿದ್ದು, ಪಿತೃಪ್ರ.ಭುತ್ವದ ಜಗತ್ತಿಗೆ ಸವಾಲು ಹಾಕಿದರು, ಉಗ್ರಗಾಮಿಗಳಿಂದ ತನ್ನ ಪಾಂಡಿತ್ಯದ ಮೇಲಿನ ದಾಳಿಯನ್ನು ಎದುರಿಸಿದರು, ಇವಾವವೂ ಪಟ್ಟುಬಿಡದೆ ಪ್ರಶ್ನೆಗಳನ್ನು ಕೇಳುವ. ಇತಿಹಾಸಕಾರರಾಗಿ ಪ್ರಾಮಾಣಿಕ ಕೆಲಸವನ್ನು ಮಾಡುವಲ್ಲಿ ಅವರ ಸಮರ್ಪಣೆಗೆ ಅಡ್ಡಿಯಾಗಲಿಲ್ಲ. ಭಾರತದ ಪ್ರಾಚೀನ ಚರಿತ್ರೆಯ ಕುರಿತಂತೆ ಅವರ ಅಧ್ಯಯನ ತುಂಬಾ ಮೌಲಿಕವಾದದ್ದು.



ರೊಮಿಲಾ ಥಾಪರ್: ನಮ್ಮ ನಡುವಿನ ಅಪರೂಪದ ಇತಿಹಾಸಕಾರ್ತಿ

ಸಿ.ಆರ್. ಶಾನಭಾಗ

ಪ್ರಾಚೀನ ಭಾರತದ ಇತಿಹಾಸದಲ್ಲಿ ವಿಶ್ವದ ಅಗ್ರಗಣ್ಯ ವಿದ್ವಾಂಸರು ಎಂದು ಪರಿಗಣಿಸಲ್ಪಟ್ಟ ರೋಮಿಲಾ ಥಾಪರ್ ಈ ವರ್ಷ ನವೆಂಬರ್ 30 ರಂದು, ತಮ್ಮ ಸಾರ್ಥಕ ಜೀವನದ ತೊಂಬತ್ತು ವರ್ಷಗಳನ್ನು ಪೂರ್ಣಗೊಳಿಸಿದರು. ಅವರು ತಮ್ಮ ಜೀವನದ 60 ವರ್ಷಗಳನ್ನು ಬೋಧನೆಯನ್ನು ಕಳೆದಿದ್ದಾರೆ. ಅವರು ಕುರುಕ್ಷೇತ್ರ ವಿಶ್ವವಿದ್ಯಾನಿಲಯದಲ್ಲಿ (1961–62) ಪ್ರಾಚೀನ ಭಾರತೀಯ ಇತಿಹಾಸದಲ್ಲಿ ರೀಡರ್ ಆಗಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದರು, ನಂತರ ದೆಹಲಿ ವಿಶ್ವವಿದ್ಯಾಲಯದಲ್ಲಿ 1970 ರವರೆಗೆ ಅದೇ ಸ್ಥಾನದಲ್ಲಿ ಕೆಲಸ ಮಾಡಿದರು. ಮುಂದೆ ಅವರು ಆಗಷ್ಟೆ ಆರಂಭವಾದ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಪ್ರಾಚೀನ ಭಾರತೀಯ ಇತಿಹಾಸದ ಪ್ರಾಧ್ಯಾಪಕರಾಗಿ ಸೇರಿದರು. ಇಲ್ಲಿ ಪ್ರೊ. ಥಾಪರ್ ಅವರು ಸ್ನಾತಕೋತ್ತರ ಹಂತದಲ್ಲಿ ಇತಿಹಾಸಕ್ಕಾಗಿ ಪಠ್ಯಕ್ರಮವನ್ನು ರಚಿಸಿದರು, ಇದು ಚರ್ಚೆಗಳು ಮತ್ತು ವಾಗ್ವಾದಗಳನ್ನು ಒಳಗೊಂಡಿದೆ, ಎಲ್ಲಾ ವಿಚಾರಗಳಿಗೆ ಮುಕ್ತವಾಗಿದೆ ಮತ್ತು ಬೌದ್ಧಿಕವಾಗಿ ರೋಮಾಂಚಕವಾಗಿದೆ. ಥಾಪರ್ ಮತ್ತು ಅವರ ಕೆಲವು ಆರಂಭಿಕ ಸಹೋದ್ಯೋಗಿಗಳು ಜೆ.ಎನ್.ಯು ಇತಿಹಾಸ ಅಧ್ಯಯನ ಕೇಂದ್ರವು ಕಂಡ ಖ್ಯಾತಿಗೆ ಏಕೈಕ ಕಾರಣವಾಗಿದ್ದಾರೆ.

ಕಾರವಾನ್: ಹೆರಿಟೇಜ್ ಎಕ್ಸ್‌ಪ್ಲೋರೇಶನ್ ಇನಿಶಿಯೇಟಿವ್‌ನೊಂದಿಗೆ ಸಂವಾದದಲ್ಲಿ ಪ್ರೊ. ಥಾಪರ್ ಹೀಗೆ ಹೇಳುತ್ತಾರೆ

"ಜ್ಞಾನದ ಪ್ರತಿಯೊಂದು ಶಾಖೆಯಲ್ಲೂ, ನೀವು ಪ್ರಶ್ನೆಗಳನ್ನು ಕೇಳಬೇಕು ಎಂಬುದನ್ನು ಅರಿತುಕೊಳ್ಳುವುದು ಅತ್ಯಗತ್ಯ. ನೀವು ಅಸ್ತಿತ್ವದಲ್ಲಿರುವ ಜ್ಞಾನವನ್ನು ಪ್ರಶ್ನಿಸಬೇಕು ಮತ್ತು ಅಸ್ತಿತ್ವದಲ್ಲಿರುವ ಜ್ಞಾನವನ್ನು ನೀವು ಪ್ರಶ್ನಿಸದ ಹೊರತು, ನೀವು ಮುಂದೆ ಹೋಗಲು ಸಾಧ್ಯವಿಲ್ಲ".

ಥಾಪರ್ ಮತ್ತು ಅವರ ಸಹೋದ್ಯೋಗಿಗಳು ಸಾರ್ವಜನಿಕ ಚರ್ಚೆ ಮತ್ತು ಪ್ರಶ್ನಿಸುವ ಆರೋಗ್ಯಕರ ಸಂಪ್ರದಾಯವನ್ನು ಹೊಂದಲು ಒಂದು ಮಾರ್ಗವನ್ನು ಕಲ್ಪಿಸಿದರು. ಅವರನ್ನು ಕೇವಲ ಇತಿಹಾಸಕಾರ ಎಂದು ಗುರುತು ಮಾಡುವುದು ನ್ಯೂನೋಕ್ತಿಯಾಗುತ್ತದೆ. ಅವರು ಲೋಕಚಿಂತಕ, ಕಾರ್ಯಕರ್ತೆ, ಸ್ತ್ರೀವಾದಿ ಮತ್ತು ಇತಿಹಾಸಕಾರರ ಕರಕುಶಲತೆಯ ಸಮರ್ಪಿತ ಅಭ್ಯಾಸಕಾರರಾಗಿದ್ದಾರೆ.

ಪ್ರೊ. ಥಾಪರ್ ಅವರು ಇತಿಹಾಸಕಾರರ ಕಲೆಯ ಪ್ರವೀಣರಾಗುವ ಮೊದಲು ಶಿಮ್ಲಾದ ಪಂಜಾಬ್ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಸಾಹಿತ್ಯದ ವಿದ್ಯಾರ್ಥಿನಿಯಾಗಿದ್ದರು. ಚಿಕ್ಕ ಹುಡುಗಿಯಾಗಿದ್ದಾಗ, ಆಕೆಯ ತಂದೆ ದಯಾ ರಾಮ್ ಥಾಪರ್ ತನ್ನ ಮದುವೆಗೆ ವರದಕ್ಷಿಣೆ ಅಥವಾ ಪದವಿಗಾಗಿ ಹಣದ ನಡುವೆ ಆಯ್ಕೆ ಮಾಡಲು ಅವಕಾಶ ನೀಡಿದ್ದರು; ಉನ್ನತ ಶಿಕ್ಷಣವನ್ನು ಮುಂದುವರಿಸಲು ನಿರ್ಧರಿಸಿದ ರೋಮಿಲಾ ಹಿಂತಿರುಗಿ ನೋಡಲಿಲ್ಲ. ಅವರು ಲಂಡನ್ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಓರಿಯಂಟಲ್ ಮತ್ತು ಆಫ್ರಿಕನ್ ಸ್ಟಡೀಸ್‌ಗೆ ಸೇರಿಕೊಂಡರು. ಮತ್ತು 1958 ರಲ್ಲಿ ಡಾ. ಎ.ಎಲ್. ಬಾಶಮ್ ಅವರ ಅಡಿಯಲ್ಲಿ ಇತಿಹಾಸದಲ್ಲಿ ಡಾಕ್ಟರೇಟ್ ಅನ್ನು ಗಳಿಸಿದರು, ಇದು 1961 ರಲ್ಲಿ 'ಅಶೋಕ ಮತ್ತು ಮೌರ್ಯರ ಅವನತಿ" ಪುಸ್ತಕವಾಗಿ ಹೊರಬಂದಿತು. ಅವರು ತನ್ನ ಪಿಎಚ್‌ಡಿ ಮುಗಿಸಿದ ನಂತರ. 1958 ರಲ್ಲಿ, ಅಲ್ಲೇ ತಾತ್ಕಾಲಿಕ ಶಿಕ್ಷಕ ಸ್ಥಾನದಲ್ಲಿ ಉಳಿಯಲು ಅವರಿಗೆ ಅವಕಾಶ ನೀಡಲಾಯಿತು, ನಂತರ 1961 ರಲ್ಲಿ ಭಾರತಕ್ಕೆ ಮರಳಿದರು.

ಚಕ್ರವರ್ತಿಯಾಗಿ ಅಶೋಕನ ಕುರಿತಾದ ಅವರ ಕೆಲಸವು 50 ರ ದಶಕದ ಎಲ್ಲಾ ಅಸ್ತಿತ್ವದಲ್ಲಿರುವ ಅಭಿಪ್ರಾಯಗಳಿಗೆ ಸವಾಲು ಹಾಕಿತು ಮತ್ತು ಅಶೋಕನ ಕುರಿತು ಭವಿಷ್ಯದ ಕೃತಿಗಳ ಸಂಕಥನವನ್ನು ರೂಪಿಸಿತು. ವಿಶಾಲ ಮೌರ್ಯ ಸಾಮ್ರಾಜ್ಯವನ್ನು ಆನುವಂಶಿಕವಾಗಿ ಪಡೆದ ಮತ್ತು ಸಮರ್ಥವಾಗಿ ಅಭಿವೃದ್ಧಿ ಪಡಿಸಿದ ಒಬ್ಬ ರಾಜನೀತಿಜ್ಞನಾಗಿ ಮತ್ತು ಸಾಮಾಜಿಕ ನೀತಿಗಳಿಗೆ ಕಾಳಜಿ ತೋರುವ ಮೂಲಕ ಸಮಾಜವನ್ನು ಬದಲಾಯಿಸುವಲ್ಲಿ ಬಲವಾದ ನಂಬಿಕೆಯನ್ನು ಹೊಂದಿರುವ ವ್ಯಕ್ತಿಯಾಗಿ ಅಶೋಕನನ್ನು ಮರು ಮೌಲ್ಯಮಾಪನ ಮಾಡಲು ಅವರು ಪ್ರಯತ್ನಿಸಿದರು.

ಥಾಪರ್ ಅವರು ಕಾರ್ನೆಲ್ ವಿಶ್ವವಿದ್ಯಾಲಯ, ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯ ಮತ್ತು ಪ್ಯಾರಿಸ್‌ನ ಕಾಲೇಜ್ ಡಿ ಫ್ರಾನ್ಸ್‌ನಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿದ್ದಾರೆ. ಅವರು 1983 ರಲ್ಲಿ ಇಂಡಿಯನ್ ಹಿಸ್ಟರಿ ಕಾಂಗ್ರೆಸ್‌ನ ಜನರಲ್ ಅಧ್ಯಕ್ಷರಾಗಿ ಮತ್ತು 1999 ರಲ್ಲಿ ಬ್ರಿಟಿಷ್ ಅಕಾಡೆಮಿಯ ಫೆಲೋ ಆಗಿ ಆಯ್ಕೆಯಾದರು. ಅವರಿಗೆ 1976 ರಲ್ಲಿ ಜವಾಹರಲಾಲ್ ನೆಹರು ಫೆಲೋಶಿಪ್ ನೀಡಲಾಯಿತು. ಥಾಪರ್ ಅವರು ಆಕ್ಸ್‌ಫರ್ಡ್‌ನ ಲೇಡಿ ಮಾರ್ಗರೇಟ್ ಹಾಲ್‌ನಲ್ಲಿ ಮತ್ತು ಲಂಡನ್ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಓರಿಯಂಟಲ್ ಮತ್ತು ಆಫ್ರಿಕನ್ ಸ್ಟಡೀಸ್ (ಖಔಂಖ) ನಲ್ಲಿ ಗೌರವಾನ್ವಿತ ಫೆಲೋ ಆಗಿದ್ದಾರೆ. ಅವರು ಚಿಕಾಗೋ ವಿಶ್ವವಿದ್ಯಾನಿಲಯ, ಪ್ಯಾರಿಸ್‌ನಲ್ಲಿರುವ ಇನ್‌ಸ್ಟಿಟ್ಯೂಟ್ ನ್ಯಾಷನಲ್ ಡೆಸ್ ಲ್ಯಾಂಗ್ವೇಸ್ ಮತ್ತು ಸಿವಿಲೈಸೇಶನ್ಸ್ ಓರಿಯೆಂಟಲ್ಸ್, ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ, ಎಡಿನ್‌ಬರ್ಗ್ ವಿಶ್ವವಿದ್ಯಾಲಯ (2004), ಕಲ್ಕತ್ತಾ ವಿಶ್ವವಿದ್ಯಾಲಯ (2002) ಮತ್ತು ಇತ್ತೀಚೆಗೆ (2009 ರಲ್ಲಿ) ಹೈದರಾಬಾದ್ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪಡೆದಿದ್ದಾರೆ. ಅವರು 2009 ರಲ್ಲಿ ಅಮೇರಿಕನ್ ಅಕಾಡೆಮಿ ಆಫ್ ಆರ್ಟ್ಸ್ ಅಂಡ್ ಸೈನ್ಸಸ್‌ನ ವಿದೇಶಿ ಗೌರವ ಸದಸ್ಯರಾಗಿ ಆಯ್ಕೆಯಾದರು. ಅವರು 2017 ರಲ್ಲಿ ಆಕ್ಸ್‌ಫರ್ಡ್‌ನ ಸೇಂಟ್ ಆಂಟನಿ ಕಾಲೇಜಿನ ಗೌರವ ಫೆಲೋ ಆಗಿ ಆಯ್ಕೆಯಾದರು.

2004 ರಲ್ಲಿ, ಯುಎಸ್ ಲೈಬ್ರರಿ ಆಫ್ ಕಾಂಗ್ರೆಸ್ ಅವರನ್ನು ದಕ್ಷಿಣದ ದೇಶಗಳು ಮತ್ತು ಸಂಸ್ಕೃತಿಗಳಲ್ಲಿ ಕ್ಲೂಗ್ ಪೀಠದ ಮೊದಲ ಚೇರ್ ಸ್ಥಾನ ನೀಡಿ ಗೌರವಿಸಿದೆ. ಅವರು 2008 ರ ಮಾನವೀಯತೆಯ ಅಧ್ಯಯನಕ್ಕಾಗಿ ಕ್ಲುಗೆ ಪ್ರಶಸ್ತಿಗೆ ಪೀಟರ್ ಬ್ರೌನ್ ಅವರೊಂದಿಗೆ ಸಹ–ವಿಜೇತರಾಗಿದ್ದರು, ಇದು 10 ಲಕ್ಷ ಡಾಲರುಗಳ ಬಹುಮಾನ ಹೊಂದಿತ್ತು.

ಈ ವರ್ಷಗಳಲ್ಲಿ ಶೈಕ್ಷಣಿಕವಾಗಿ, ಅವರು ತಮ್ಮ ಸಂಶೋಧನಾ ಆಸಕ್ತಿಗಳನ್ನು ಸಾಮ್ರಾಜ್ಯಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಸಮಾಜಗಳು ಮತ್ತು ಸಂಸ್ಕೃತಿಗಳ ರಚನೆ ಮತ್ತುಅವುಗಳ ನಡುವಿನ ಸಂವಹನಗಳಿಂದ, ಇತಿಹಾಸಶಾಸ್ತ್ರ: ಇತಿಹಾಸವನ್ನು ಹೇಗೆ ಬರೆಯಲಾಗಿದೆ ಮತ್ತು ಗ್ರಹಿಸಲಾಗುತ್ತಿದೆ, ಮತ್ತು ಇತ್ತೀಚೆಗೆ ಭಾರತದಲ್ಲಿನ ಭಿನ್ನಾಭಿಪ್ರಾಯದ ಇತಿಹಾಸದ ಜೊತೆಗೆ ಸಮಕಾಲೀನ ಗತಕಾಲ ಮತ್ತು ವರ್ತಮಾನಕಾಲದ ಸಂಬಂಧಗಳ ಬಗ್ಗೆ ತಮ್ಮ ಸಂವಾದಗಳನ್ನು ವಿಸ್ತರಿಸಿದ್ದಾರೆ.

ಥಾಪರ್, ತಮ್ಮ ಎಲ್ಲಾ ಸಾಧನೆಗಳ ಜೊತೆಯಲ್ಲಿ, ಸ್ಥೈರ್ಯಶಾಲಿ, ರಾಜಿಯಿಲ್ಲದ, ಸ್ವತಂತ್ರ ಮಹಿಳೆಯಾಗಿದ್ದು, ಪಿತೃಪ್ರ.ಭುತ್ವದ ಜಗತ್ತಿಗೆ ಸವಾಲು ಹಾಕಿದರು, ಉಗ್ರಗಾಮಿಗಳಿಂದ ತನ್ನ ಪಾಂಡಿತ್ಯದ ಮೇಲಿನ ದಾಳಿಯನ್ನು ಎದುರಿಸಿದರು, ಇವಾವವೂ ಪಟ್ಟುಬಿಡದೆ ಪ್ರಶ್ನೆಗಳನ್ನು ಕೇಳುವ. ಇತಿಹಾಸಕಾರರಾಗಿ ಪ್ರಾಮಾಣಿಕ ಕೆಲಸವನ್ನು ಮಾಡುವಲ್ಲಿ ಅವರ ಸಮರ್ಪಣೆಗೆ ಅಡ್ಡಿಯಾಗಲಿಲ್ಲ.


ಭಾರತದ ಪ್ರಾಚೀನ ಚರಿತ್ರೆಯ ಕುರಿತಂತೆ ಅವರ ಅಧ್ಯಯನ ತುಂಬಾ ಮೌಲಿಕವಾದದ್ದು. ಭಾರತದ ಪ್ರಾಚೀನ ಚರಿತ್ರೆಯ ಕುರಿತಂತೆ ಅವರ ಈ ಕೆಳಗಿನ ಪುಸ್ತಕಗಳು ಜಗತ್ ಪ್ರಸಿದ್ಧವಾಗಿವೆ

* A History of India: Volume 1, 1966;
* Ancient India, Medieval India, 1966, 1968 **NCERT** Textbooks
* From Lineage to State: Social Formations of the Mid-First Millennium B.C. in the Ganges Valley, 1985;
* Interpreting Early India, 1992
Early India: From Origins to AD 1300, 2002
* Somanatha: The Many Voices of History, 2005
* The Aryan: Recasting Constructs, Three Essays, 2008;
* The Past before Us: Historical Traditions of Early North India, 2013;
* The Past As Present: Forging Contemporary Identities Through History, 2014;

'ಪ್ರಾಚೀನ ಭಾರತದ ಇತಿಹಾಸ' ಮತ್ತು 'ಕೋಮುವಾದ ಹಾಗೂ ಭಾರತೀಯ ಇತಿಹಾಸದ ಲೇಖನ' (ಎರಡೂ ನವಕರ್ನಾಟಕ ಪ್ರಕಟಣೆಗಳು) ಕನ್ನಡದಲ್ಲಿ ಅನುವಾದಿತವಾದ ರೊಮಿಲಾ ಥಾಪರ್ ಅವರ ಎರಡು ಪುಸ್ತಕಗಳು. ಇವಲ್ಲದೆ "ಜೆ,ಎನ್.ಯು ಅಂಗಳದಲ್ಲಿ ರಾಷ್ಟ್ರೀಯವಾದದ ಕ್ಲಾಸುಗಳು" (ಕ್ರಿಯಾ ಮಾಧ್ಯಮ ಪ್ರಕಟಣೆ) ಎಂಬ ಪುಸ್ತಕದಲ್ಲಿ ಅವರ "ರಾಷ್ಟ್ರೀಯವಾದಿಗಳು ಎಂದುಕೊಳ್ಳುವ ಸಿದ್ಧಾಂತಗಳು ಕಂಡ ಗತಕಾಲ" ಎಂಬ ಪ್ರಬಂಧವಿದೆ. "ಕಳೆದ ಒಂದು ಸಾವಿರ ವರ್ಷಗಳಲ್ಲಿ ಮುಸ್ಲಿಮರು ಹಿಂದೂಗಳನ್ನು ಅಡಿಯಾಳಾಗಿರಿಸಿಕೊಂಡು ಬಲಿಪಶು ಮಾಡಿದ್ದಾರೆ" ಎಂಬ ಪ್ರಚಾರದ ಕುರಿತು ಅವರು ಮಾರ್ಮಿಕವಾಗಿ ಹೀಗೆನ್ನುತ್ತಾರೆ:

"ಕಳೆದ ಒಂದು ಸಾವಿರ ವರ್ಷಗಳಲ್ಲಿ ಮುಸ್ಲಿಮರು ಹಿಂದೂಗಳನ್ನು ಅಡಿಯಾಳಾಗಿರಿಸಿಕೊಂಡು ಬಲಿಪಶು ಮಾಡಿದ್ದಾರೆ, ಆದರೆ ಈಗ ಸ್ವತಂತ್ರರಾಗಿದ್ದಾರೆ ಎಂಬುದು ಸಾಮಾನ್ಯವಾಗಿ ಪ್ರಚಲಿತವಾದ ವಾದವಾಗಿದೆ. ಆದರೆ ಇತಿಹಾಸ ಇದನ್ನು ನಮಗೆ ತಿಳಿಸಿಕೊಡುವುದಿಲ್ಲ. ಕಳೆದ ಒಂದು ಸಾವಿರ ವರ್ಷಗಳಲ್ಲಿ ಉಪಖಂಡದಲ್ಲಿ ಹಿಂದೂಗಳ ಸ್ಥಾನಮಾನವನ್ನು ಪರೀಕ್ಷಿಸಿದಾಗ ಆಸಕ್ತಿಕರವಾದ ಪ್ರಸಂಗಗಳು, ವಿಚಾರಗಳು ಮತ್ತು ವ್ಯಕ್ತಿತ್ವಗಳು ಅನಾವರಣಗೊಳ್ಳುತ್ತವೆ. ಸಂಸ್ಕೃತವನ್ನು ಕಲಿಯುವುದು ಆ ಕಾಲದಲ್ಲಿ ಒಂದು ಪ್ರತಿಷ್ಠಿತ ಸಂಗತಿಯಾಗಿತ್ತು. ಮೊದಲ ಸಹಸ್ರಮಾನದ ಕೊನೆಯ ಹೊತ್ತಿಗೆ ಉಪಖಂಡಗಳ ಅನೇಕ ಕೇಂದ್ರಗಳಲ್ಲಿ ಸಂಸ್ಕೃತ ಕಲಿಕೆಯು ನಿರಂತರವಾಗಿತ್ತು ಮತ್ತು ಅದಕ್ಕೆ ಮಹಾರಾಜ, ಸುಲ್ತಾನ, ಮೊಗಲರು, ಭೂ ಮಾಲೀಕರು ಪೋಷಕರಾಗಿದ್ದರು. ಸಂಸ್ಕೃತ ಮತ್ತು ಪರ್ಶಿಯನ್ ಭಾಷೆಗಳನ್ನು ಪೋಷಿಸುವುದು ಸುಸಂಸ್ಕೃತರ ಲಕ್ಷಣ ಎಂದು ಈ ಗುಂಪುಗಳಲ್ಲಿ ಪರಿಗಣಿತವಾಗಿತ್ತು.

ಗಣಿತ ಮತ್ತು ಖಗೋಳಶಾಸ್ತ್ರದ ಕುರಿತಾಗಿ ಹಲವಾರು ಪುಸ್ತಕಗಳು ಪ್ರಕಟಗೊಂಡವು ಅನೇಕ ಹಿಂದೂ ಖಗೋಳಶಸ್ತ್ರಜ್ಞರು, ಗಣಿತಜ್ಞರುಗಳ ಕುರಿತು ಅರೇಬಿಕ್ ಪಠ್ಯಗಳಲ್ಲಿ ಮೆಚ್ಚುಗೆ ಸೂಚಿಸಿದ್ದರು, ಚರ್ಚಿಸಿದ್ದರು, ಉದ್ಧರಿಸಿದ್ದರು. ಎರಡೂ ಕಡೆಗಳ ಈ ಗಣಿತಜ್ಞರಿಗೆ ಸಂಸ್ಕೃತ ಮತ್ತು ಅರೇಬಿಕ್ ಪರಿಚಯವಿತ್ತೆ? ಇಲ್ಲದಿದ್ದರೆ ಅವರ ಕುರಿತು ಈ ಚರ್ಚೆಗಳು ಎಲ್ಲಿಂದ ಮೂಡಿಬಂದವು?





ಈ ಸಾವಿರ ವರ್ಷಗಳಲ್ಲಿನ ಬೆಳವಣಿಗೆಗಳಿಂದ ಬಹಳ ಮಟ್ಟಿಗೆ ಹಿಂದೂ ಧರ್ಮ ಈಗಿನ ರೂಪ ಮತ್ತು ಸ್ವರೂಪಗಳನ್ನು ಪಡೆದಿದೆ. ಉತ್ತರ ಭಾರತದಲ್ಲಿ ಭಕ್ತಿಪಂಥ ಚಳುವಳಿ ವ್ಯಾಪಿಸಿಕೊಂಡಿತ್ತು.

ಇವೆಲ್ಲ ದಾಳಿಗೊಳಗಾದವರು ಬಲಿಪಶುಗಳಾದವರು ಸೃಷ್ಟಿಸಿದ ಸಾಂಸ್ಕೃತಿಕ ರೂಪಗಳಂತೆ ಕಾಣುವುದಿಲ್ಲ. ಇವು ಶ್ರೀಮಂತವಾದ ಬಹುಮುಖಿ ನಾಗರೀಕತೆಯ ಪರಂಪರೆಯ ಅಭಿವ್ಯಕ್ತಿಗಳಾಗಿದ್ದವು. ಇದನ್ನು ಐತಿಹಾಸಿಕ ಸನ್ನಿವೇಶದಲ್ಲಿಟ್ಟು ಅದರ ಭಾಗವಾಗಿಯೆ ವ್ಯಾಖ್ಯಾನಿಸಬೇಕು ಮತ್ತು ವಿವರಿಸಬೇಕು, ವಿನಹ ಅವುಗಳಲ್ಲಿ ಹಿಂದೂಗಳು ಮತ್ತು ಮುಸ್ಲಿಮರ ನಡುವಿನ ಸಂಘರ್ಷಗಳನ್ನೇ ಹುಡುಕುತ್ತಾ ಸಮಯ ವ್ಯರ್ಥ ಮಾಡಬೇಕಾಗಿಲ್ಲ.

ಇತಿಹಾಸಕಾರನಿಗೆ ಆಧುನಿಕ–ಪೂರ್ವ ಭಾರತದ ಧರ್ಮದ ಅಧ್ಯಯನವು ಅತ್ಯಂತ ಸವಾಲಿನದಾಗಿದೆ. ಖಚಿತವಾಗಿ ಹೇಳಬೇಕೆಂದರೆ, ಕೆಲವರು ನಮ್ಮನ್ನು ನಂಬಿಸಲೆತ್ನಿಸುವಂತೆ, ಅದು ಎರಡು ಏಕರೂಪಿ ಧರ್ಮಗಳ ನಡುವಿನ ಸಂಘರ್ಷವಾಗಿರಲಿಲ್ಲ. ಸಾಂಪ್ರದಾಯಿಕದಿಂದ ಅಸಾಂಪ್ರದಾಯಿಕವರೆಗಿನ ವಿಭಿನ್ನ ಪಂಥಗಳ ಓರಣವೆಂದು ಧರ್ಮವನ್ನು ಪರಿಗಣಿಸುವುದು ಹೆಚ್ಚು ವಿವೇಕಯುತವಾಗಿದೆ. ಈ ಪಂಥಗಳ ನಡುವೆ ತಮ್ಮದೇ ಆದ ಸಂಬಂಧಗಳಿದ್ದವು. ಕೆಲವು ಸ್ನೇಹಪೂರ್ವಕವಾಗಿದ್ದವು, ಕೆಲವು ಆಗಿರಲಿಲ್ಲ.":

ಸಂಪತ್ತಿನ ಅಸಮಾನತೆಯಲ್ಲಿ ವಸಾಹತುಶಾಹೀ ಆಳ್ವಿಕೆಯನ್ನೂ ಹಿಂದೆ ಹಾಕಿರುವ 'ನ್ಯೂಇಂಡಿಯಾ' ಆಳ್ವಿಕೆ!

"ಭಾರತದಲ್ಲಿ ಆದಾಯ ಅಸಮಾನತೆ 1858–1947ರ ಅವಧಿಯಲ್ಲಿ, ಅಂದರೆ ಬ್ರಿಟಿಶ್ ವಸಾಹತುಶಾಹೀ ಆಳ್ವಿಕೆಯ ಅಡಿಯಲ್ಲಿಬಹಳ ಹೆಚ್ಚಿತ್ತು, ಮೇಲಿನ 10% ಜನಸಂಖ್ಯೆ 50% ಆದಾಯವನ್ನು ಹೊಂದಿತ್ತು. ಸ್ವಾತಂತ್ರ್ಯದ ನಂತರ ಪಂಚವಾರ್ಷಿಕ ಯೋಜನೆಗಳಿಂದಾಗಿ ಇದು 35–40% ಕ್ಕೆ ಇಳಿಯಿತು. 1980ರ ಮಧ್ಯಭಾಗದಲ್ಲಿ ನವ–ಉದಾರವಾದಿ ಧೋರಣೆಗಳು ಜಾರಿಯಾಗಲಾರಂಬಿಸದಾಗ ಇದು ಮತ್ತೆ ಏರುತ್ತ ಹೋಗಿ, ದೇಶ ಜಗತ್ತಿನಲ್ಲೇ ಒಂದು ಅತಿಹೆಚ್ಚು ಸಂಪತ್ತಿನ ಅಸಮಾನತೆಯಿರುವ ದೇಶವಾಗುತ್ತಿದೆ" ಎಂದು 'ವರ್ಲ್ಡ್ ಇನಿಕ್ವಾಲಿಟಿ ಲ್ಯಾಬ್ ಇತ್ತೀಚೆಗೆ ಪ್ರಕಟಿಸಿರುವ "ವಿಶ್ವ ಅಸಮಾನತೆ ವರದಿ 2022" ಗಮನಿಸಿದೆ.

ಅಂದರೆ, ಈಗ ಯೋಜನಾ ಆಯೋಗವನ್ನು ಮತ್ತು ಪಂಚವಾರ್ಷಿಕ ಯೋಜನೆಗಳನ್ನು ಕೈಬಿಟ್ಟ ಅಚ್ಛೇದಿನ್‌ಗಳ ನಂತರ 'ನ್ಯೂಇಂಡಿಯಾ'ದಲ್ಲಿ ಈ ಅಸಮಾನತೆ ಬ್ರಿಟಿಶ್ ವಸಾಹತುಶಾಹೀ ಆಳ್ವಿಕೆಯಲ್ಲಿದ್ದುದಕ್ಕಿಂತಲೂ ಹೆಚ್ಚಾಗಿದೆ.

ಭಾರತದ ಮೇಲ್ತುದಿಯ 1ಶೇ. ಶ್ರೀಮಂತ ಜನ ದೇಶದ ಒಟ್ಟು ಆದಾಯದ 20ಶೇ.ವನ್ನು ಬಾಚಿಕೊಂಡಿದ್ದಾರೆ. ತಳಮಟ್ಟದ 50ಶೇ.ದಷ್ಟು ಬಡಜನರ ಬಳಿ ಸುಮಾರಾಗಿ ಏನೂ ಇಲ್ಲ.

ಭಾರತ ಒಂದು ಸಣ್ಣ ಸಮೃದ್ಧ ಶ್ರೀಮಂತ ವರ್ಗವನ್ನು ಹೊಂದಿರುವ ಬಡ ಮತ್ತು ಬಹಳ ಅಸಮಾನತೆಯ ದೇಶವಾಗಿ ಕಾಣುತ್ತಿದೆ ಎಂದು ಈ ವರದಿ ಹೇಳುತ್ತದೆ.

ಈ ವರದಿಯಲ್ಲಿ ಭಾರತಕ್ಕೆ ಸಂಬಂಧಪಟ್ಟ ಕೆಲವು ಅಂಕಿ–ಅಂಶಗಳು ಹೀಗಿವೆ:

* ಭಾರತೀಯ ವಯಸ್ಕ ಜನಸಂಖ್ಯೆಯ ಸರಾಸರಿ ರಾಷ್ಟ್ರೀಯ ಆದಾಯ ರೂ.2,04,200. ಇದರಲ್ಲಿ ತಳಮಟ್ಟದ 50%ದ ಸರಾಸರಿ ಆದಾಯ ಕೇವಲ ರೂ.53,610 ಮತ್ತು ಮೇಲಿನ 10% ಜನರ ಸರಾಸರಿ ಆದಾಯ ರೂ.11,66,520 ಅಂದರೆ ಸುಮಾರು 20 ಪಟ್ಟು!
* ಮೇಲಿನ 10% ಮಂದಿ ರಾಷ್ಟ್ರೀಯ ಆದಾಯದ 57ಶೇ. ಹೊಂದಿದ್ದರೆ, ತಳಮಟ್ಟದ 50% ಜನಸಂಖ್ಯೆಯ ಪಾಲು 13%ಕ್ಕೆ ಇಳಿದಿದೆ. ಅತಿ ಶ್ರೀಮಂತ 1% ಮಂದಿಯ ಪಾಲು 22%
* ಮೇಲಿನ 10% ಮಂದಿ ದೇಶದ ಸಂಪತ್ತಿನ 65%ವನ್ನು ಬಾಚಿಕೊಂಡಿದ್ದಾರೆ. ಅದರಲ್ಲೂ ಮೇಲಿನ 1% ಅತಿಶ್ರೀಮಂತರೇ 33% ಸಂಪತ್ತು ಹೊಂದಿದ್ದಾರೆ. ಮಧ್ಯಮ ವರ್ಗದವರ ಪಾಲು ಕೂಡ ಕೇವಲ 29.3%. ಇವರ ಸರಾಸರಿ ಸಂಪತ್ತು ರೂ.7.24 ಲಕ್ಷವಾದರೆ, ಮೇಲಿನ 10% ಮಂದಿಯ ಸರಾಸರಿ ಸಂಪತ್ತು ರೂ.63.54ಲಕ್ಷ, ಅಂದರೆ 9ಪಟ್ಟು ಹೆಚ್ಚು.
* ಸರಾಸರಿ ಕೌಟುಂಬಿಕ ಸಂಪತ್ತು ರೂ.9,83,010. ಇದರಲ್ಲಿ ಕೆಳಗಿನ 50% ಕುಟುಂಬಗಳ ಸರಾಸರಿ ಸಂಪತ್ತು ಕೇವಲ ರೂ. 66,280, ಅಂದರೆ ಒಟ್ಟು ಜನಸಂಖ್ಯೆಯ ಸರಾಸರಿಯ 7% ಕ್ಕಿಂತಲೂ ಕಡಿಮೆ.



ವ್ಯಂಗ್ಯಚಿತ್ರಕೃಪೆ: ಕೀರ್ತಿಶ್, ಬಿಬಿಸಿ ನ್ಯೂಸ್ ಹಿಂದಿ

ಜನ ತಮಗೆ ಇಷ್ಟವಾದದ್ದು ತಿನ್ನುತ್ತಾರೆ–ಮೊಟ್ಟೆ, ಮಾಂಸ ತಿಂದರೆ ನಿಮಗೇನು ಸಮಸ್ಯೆ: ಗುಜರಾತ್ ಹೈಕೋರ್ಟ್ ಪ್ರಶ್ನೆ

ಜನರು ಏನನ್ನು ತಿನ್ನಬೇಕು, ತಿನ್ನಬಾರದು ಎಂಬುದು ಅವರವರ ಇಷ್ಟಕ್ಕೆ ಬಿಟ್ಟದ್ದು. ತಮಗೆ ಇಷ್ಟಬಂದದ್ದನ್ನು ತಿನ್ನಲು ಜನರಿಗೆ ಅಡ್ಡಿಪಡಿಸಬೇಡಿ ಎಂದು ಗುಜರಾತ್ ಹೈಕೋರ್ಟ್ ಅಹಮದಾಬಾದ್ ನಗರ ಪಾಲಿಕೆ (ಎಎಂಸಿ)ಯನ್ನು ತೀವ್ರ ತರಾಟೆಗೆ ತೆಗೆದುಕೊಂಡಿದೆ.

ನಗರದಲ್ಲಿ ಮಾಂಸಾಹಾರ ಮಾರಾಟಕ್ಕೆ ಎಎಂಸಿ ಪಾಲಿಕೆಯ ಕೌನ್ಸಿಲರ್ ಗಳು ಆಕ್ಷೇಪ ವ್ಯಕ್ತಪಡಿಸಿ ಬೀದಿಬದಿ ವ್ಯಾಪಾರಿಗಳ ಗಾಡಿಗಳನ್ನು ವಶಪಡಿಸಿಕೊಂಡಿರುವ ಸಂಬಂಧ 25 ಮಂದಿ ಬೀದಿಬದಿ ವ್ಯಾಪಾರಿಗಳು ಗುಜರಾತ್ ಹೈಕೋರ್ಟ್‌ನಲ್ಲಿ ಸಲ್ಲಿಸಿದ್ದ ಮನವಿಯನ್ನು ನ್ಯಾಯಮೂರ್ತಿ ಬಿರೇನ್ ವೈಷ್ಣವ್ ಆಲಿಸುತ್ತಿದ್ದರು.

ಅಧಿಕಾರದಲ್ಲಿರುವ ಪಕ್ಷವು ಜನರನ್ನು ನಿಯಂತ್ರಿಸುತ್ತದೆ. ಮೊಟ್ಟೆಗಳನ್ನು ತಿನ್ನಲು ಬಯಸುವುದಿಲ್ಲ. ಹಾಗಾಗಿ ನಾವು ಅವುಗಳನ್ನು ನಿಲ್ಲಿಸಲು ಬಯಸುತ್ತೇವೆ ಎನ್ನುತ್ತದೆ. ಆಗ ನೀವು ಅವುಗಳನ್ನು ಎತ್ತಿಕೊಂಡು ಹೋಗುತ್ತೀರಾ? ನೀವು ಏಕೆ ಅದನ್ನು ಮಾಡುತ್ತಿದ್ದೀರಿ? ನಿಮ್ಮ ಕಾರ್ಪೊರೇಷನ್ ಆಯುಕ್ತರನ್ನು ಇಲ್ಲಿಗೆ ಬರುವಂತೆ ಹೇಳಿ, ಜನರನ್ನು ಮನಬಂದಂತೆ ನಡೆಸಿಕೊಳ್ಳಬಾರದು ಎಂದು ತಾಕೀತು ಮಾಡಿದರು.

ಸಕ್ಕರೆ ಕಾಯಿಲೆ ಬರುವುದು ಎಂಬ ಕಾರಣಕ್ಕೆ ನಾಳೆ ಕಬ್ಬಿನ ರಸವನ್ನು ಸೇವಿಸಬಾರದು ಎಂದು ಹೇಳುತ್ತೀರಿ! ಕಾಫಿ ಆರೋಗ್ಯಕ್ಕೆ ಹಾನಿಕರ ಎಂದರೆ ಅದನ್ನು ನಿಷೇಧಿಸುತ್ತೀರಾ ಎಂದು ಪ್ರಶ್ನಿಸಿದರು. ಫುಟ್ ಪಾತ್ ಅತಿಕ್ರಮಣವಾಗಿದ್ದರೆ ಅದನ್ನು ತೆರವುಗೊಳಿಸಿ, ಆದರೆ ಜಪ್ತಿ ಮಾಡಬೇಡಿ, ಎಂದು ನ್ಯಾಯಮೂರ್ತಿ ವೈಷ್ಣವ್ ಪ್ರಶ್ನಿಸಿದರು.

ಮಾರಾಟಗಾರರ ಸರಕು ಮತ್ತು ಸಾಮಗ್ರಿಗಳನ್ನು ಅವರಿಗೆ ಮರಳಿಸಬೇಕೆಂಬ ಅರ್ಜಿದಾರರ ಪ್ರಕರಣಗಳನ್ನು ತ್ವರಿತವಾಗಿ ಪರಿಗಣಿಸುವಂತೆ ಪಾಲಿಕೆಗೆ ನ್ಯಾಯಾಲಯ ನಿರ್ದೇಶಿಸಿ ಅರ್ಜಿಯನ್ನು ವಿಲೇವಾರಿ ಮಾಡಿತು. ಇದೇ ವೇಳೆ, ಯಾರದೋ ಅಹಂಕಾರವನ್ನು ತಣಿಸಲು ಇಂತಹ ಕ್ರಮ ಕೈಗೊಳ್ಳಬಾರದು ಎಂದು ನ್ಯಾಯಮೂರ್ತಿಗಳು ಪಾಲಿಕೆಯನ್ನು ಈ ವೇಳೆ ಎಚ್ಚರಿಸಿದರು ಎಂದು ವರದಿಯಾಗಿದೆ.



ಅವರೀಗ ಈ ಕೈಗಾಡಿಯನ್ನು ಚುನಾವಣೆ ನಡೆಯುವ ಗೋವಾಕ್ಕೆ ತಳ್ಳುತ್ತಾರೆಯೇ?

ವ್ಯಂಗ್ಯಚಿತ್ರ ಕೃಪೆ: ಇ.ಪಿ.ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

'ಬೇಟಿ ಬಚಾವೊ ಬೇಟಿ ಪಡಾವೊ' ಯೋಜನೆಯ 78.91%ರಷ್ಟು ಹಣ ಮಾಧ್ಯಮ ಪ್ರಚಾರಕ್ಕೆ ಖರ್ಚು

ಕೇಂದ್ರ ಸರ್ಕಾರದ 'ಬೇಟಿ ಬಚಾವೊ ಬೇಟಿ ಪಡಾವೊ' ಯೋಜನೆಯಡಿ 2016 ರಿಂದ 2019ರ ಅವಧಿಯಲ್ಲಿ ವೆಚ್ಚವಾದ ರೂ.446.72 ಕೋಟಿ ರೂ.ಗಳಲ್ಲಿ ಮೊತ್ತದಲ್ಲಿ ಶೇಕಡ 78.91ರಷ್ಟು ಮೊತ್ತ ಮಾಧ್ಯಮ ಪ್ರಚಾರಕ್ಕೆ ಖರ್ಚಾಗಿದೆ ಎನ್ನುವ ಅಂಕಿ–ಅಂಶ ಸಂಸದೀಯ ಸಮಿತಿಯ ವರದಿಯಿಂದ ತಿಳಿದುಬಂದಿದೆ. ಈ ಅಭಿಯಾನದ ಬಗ್ಗೆ ಮಾಧ್ಯಮ ಪ್ರಚಾರ ಅಗತ್ಯವಾದರೂ ಯೋಜನೆಯ ಉದ್ದೇಶಗಳ ಈಡೇರಿಕೆಗೆ ಹಣ ಖರ್ಚು ಮಾಡುವಲ್ಲಿ ಸಮತೋಲನ ಸಾಧಿಸಬೇಕಿತ್ತು ಎಂದು ಈ ವರದಿ ಅಭಿಪ್ರಾಯ ಪಟ್ಟಿದೆ.

ಬಿಜೆಪಿ ಸಂಸದೆ ಹೀನಾ ವಿಜಯಕುಮಾರ್ ಗಾವಿಟ್ ನೇತೃತ್ವದ ಮಹಿಳಾ ಸಬಲೀಕರಣ ಸಮಿತಿಯ ಈ ವರದಿಯನ್ನು ಸಂಸತ್ತಿನಲ್ಲಿ ಮಂಡಿಸಲಾಗಿದೆ.

ಹಿಂದುಳಿದ ಪ್ರದೇಶಗಳಲ್ಲಿ ಲಿಂಗಾನುಪಾತ ಹೆಚ್ಚಳ ಮತ್ತು ಹೆಣ್ಣುಮಕ್ಕಳ ಶಿಕ್ಷಣವನ್ನು ಖಾತರಿಪಡಿಸುವುದು ಯೋಜನೆಯ ಮುಖ್ಯ ಉದ್ದೇಶ. ಈ ಹಿನ್ನೆಲೆಯಲ್ಲಿ ಸರ್ಕಾರ ಬೇಟಿ ಬಚಾವೊ ಬೇಟಿ ಪಡಾವೊ ಯೋಜನೆಯಡಿ ಜಾಹೀರಾತಿಗೆ ಮಾಡುವ ವೆಚ್ಚವನ್ನು ಪುನರ್ ಪರಿಶೀಲಿಸಿ, ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ವಲಯವಾರು ಹಸ್ತಕ್ಷೇಪಕ್ಕೆ ಯೋಜಿತ ವೆಚ್ಚ ಹಂಚಿಕೆ ಮಾಡಬೇಕು ಎಂದು ಸಮಿತಿ ಶಿಫಾರಸ್ಸು ಮಾಡಿದೆ.

ಕೋವಿಡ್ ಕಾರಣದಿಂದ ಹಣಕಾಸು ಮುಗ್ಗಟ್ಟು ಇದ್ದ 2020–21ನ್ನು ಹೊರತುಪಡಿಸಿ ಯೋಜನೆ 2014–15ರಲ್ಲಿ ಆರಂಭವಾದಾಗಿನಿಂದ 2019–20ರವರೆಗೆ ಬೇಟಿ ಬಚಾವೊ ಬೇಟಿ ಪಡಾವೊ ಯೋಜನೆಗೆ ಒಟ್ಟು 848 ಕೋಟಿ ಬಿಡುಗಡೆಯಾಗಿದ್ದು, ಈ ಪೈಕಿ ರಾಜ್ಯಗಳಿಗೆ 622.48 ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಿದೆ. ರಾಜ್ಯಗಳು ಯೋಜನೆಯ ಒಟ್ಟು ಶೇಕಡ 25.13ರಷ್ಟು ಮೊತ್ತವನ್ನು ಮಾತ್ರ ಯೋಜನೆಯ ಮೂಲ ಉದ್ದೇಶಗಳಿಗೆ ವೆಚ್ಚ ಮಾಡಿವೆ ಎಂದು ತಿಳಿದು ಬಂದಿದೆ.

ಖಾಸಗೀಕರಣದ ವಿರುದ್ಧ ಆಕ್ರೋಶ: ಡಿ.16–17 ರಂದು ಬ್ಯಾಂಕ್ ಮುಷ್ಕರ

ಸಾರ್ವಜನಿಕ ವಲಯದ ಬ್ಯಾಂಕ್‌ಗಳ ಖಾಸಗೀಕರಣವನ್ನು ವಿರೋಧಿಸಿ ಬ್ಯಾಂಕ್ ಸಂಘಗಳ ಐಕ್ಯ ವೇದಿಕೆ(ಯುಎಫ್‌ಬಿಯು) ಡಿಸೆಂಬರ್ 16 ಹಾಗೂ 17ರಂದು ರಾಷ್ಟ್ರವ್ಯಾಪಿ ಬ್ಯಾಂಕ್ ಮುಷ್ಕರಕ್ಕೆ ಕರೆ ನೀಡಿದೆ.ಇದಕ್ಕೆ ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಸ್ವತಂತ್ರ ವಲಯವಾರು ಅಖಿಲ ಭಾರತ ಒಕ್ಕೂಟಗಳು ಮತ್ತು ಸಂಘಗಳ ಜಂಟಿ ವೇದಿಕೆಯು ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ. .

ಪ್ರಸಕ್ತ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಕೇಂದ್ರ ಸರ್ಕಾರ ಬ್ಯಾಂಕಿಂಗ್ ಕಾನೂನುಗಳು(ತಿದ್ದುಪಡಿಗಳು) ಮಸೂದೆ–2021 ಮಂಡಿಸುವ ನಿರೀಕ್ಷೆಯಿದೆ. ಸಾರ್ವಜನಿಕ ವಲಯದ ಎರಡು ಬ್ಯಾಂಕುಗಳನ್ನು ಖಾಸಗೀಕರಣಗೊಳಿಸುವುದು ಈ ಮಸೂದೆಯ ಮುಖ್ಯ ಉದ್ದೇಶವಾಗಿದೆ. ಸರ್ಕಾರದ ಈ ಖಾಸಗೀಕರಣ ನೀತಿಯನ್ನು ವಿರೋಧಿಸಿ ಚಳವಳಿ ನಡೆಸಲು ಬ್ಯಾಂಕ್ ನೌಕರರು ನಿರ್ಧರಿಸಿದ್ದಾರೆ ಎಂದು ಭಾರತೀಯ ಬ್ಯಾಂಕ್ ಉದ್ಯೋಗಿಗಳ ಒಕ್ಕೂಟದ (ಬಿಇಎಫ್‌ಐ) ದೆಬಾಶಿಷ್ ಬ್ಯಾನರ್ಜಿ ತಿಳಿಸಿದ್ದಾರೆ.

ಈ ವರ್ಷ ಫೆಬ್ರವರಿಯಲ್ಲಿ 2021–22ನೇ ಸಾಲಿನ ಬಜೆಟ್ ಅಧಿವೇಶನದ ಸಂದರ್ಭದಲ್ಲಿ ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್ ಸಾರ್ವಜನಿಕ ವಲಯದ ಎರಡು ಬ್ಯಾಂಕ್‌ಗಳ ಖಾಸಗೀಕರಣದ ಬಗ್ಗೆ ಪ್ರಸ್ತಾಪಿಸಿದ್ದರು. ಇದರ ಗುರಿ 1.75ಲಕ್ಷ ಕೋಟಿ ರೂಪಾಯಿ ಆದಾಯ ಗಳಿಸುವುದು.. ಯುಎಫ್‌ಬಿಯು ಈ ಮಸೂದೆಯ ವಿರುದ್ಧ ಡಿಸೆಂಬರ್ 3 ದಿಂದಲೇ ಹೋರಾಟ ಪ್ರಾರಂಭಿಸಿದೆ. ಇದರ ಭಾಗವಾಗಿಯೇ ಡಿಸೆಂಬರ್ 16 ಹಾಗೂ 17ರಂದು ಎರಡು ದಿನಗಳ ರಾಷ್ಟ್ರವ್ಯಾಪಿ ಬ್ಯಾಂಕ್ ಮುಷ್ಕರ ನಡೆಯಲಿದೆ' ಎಂದು ಬ್ಯಾಂಕ್ ಸಂಘಟನೆಗಳ ಮುಖಂಡರು ಹೇಳಿದ್ದಾರೆ.


"ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರದಲ್ಲಿ, ಬ್ಯಾಂಕುಗಳ ಬೃಹತ್ ಸಾರ್ವಜನಿಕ ಉಳಿತಾಯದ ವಹಿವಾಟು ಮಾಡುತ್ತದೆ. ದೇಶದ ವಿಶಾಲವಾದ ಆರ್ಥಿಕ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳುವ ಕಾರ್ಯವನ್ನು ಬ್ಯಾಂಕುಗಳು ಮಾಡುತ್ತದೆ. ಸಾಮಾಜಿಕ ದೃಷ್ಟಿಕೋನದಿಂದ ನಾವು ನೋಡುವುದಾದರೆ ನಮಗೆ ಸಾರ್ವಜನಿಕ ವಲಯದ ಬ್ಯಾಂಕಿಂಗ್ ವ್ಯವಸ್ಥೆಯು ಅತ್ಯಂತ ಸೂಕ್ತವಾದು, ಹಾಗೆಯೇ ಅನಿವಾರ್ಯ ಅಗತ್ಯವೂ ಕೂಡಾ ಹೌದು," ದೇಶದ ಒಟ್ಟು ಠೇವಣಿಗಳಲ್ಲಿ ಶೇಕಡ 70 ರಷ್ಟು ಸಾರ್ವಜನಿಕ ವಲಯದ ಬ್ಯಾಂಕ್‌ಗಳಲ್ಲಿದ್ದು, ಅವುಗಳನ್ನು ಖಾಸಗಿ ಬಂಡವಾಳಕ್ಕೆ ಹಸ್ತಾಂತರಿಸುವುದರಿಂದ ಈ ಬ್ಯಾಂಕ್‌ಗಳಲ್ಲಿ ಠೇವಣಿ ಇಟ್ಟಿರುವ ಸಾಮಾನ್ಯ ಜನರ ಹಣ ಅಪಾಯಕ್ಕೆ ಸಿಲುಕಿಸುತ್ತದೆ ಎಂದು ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ (ಎಐಬಿಇಎ) ಪ್ರಧಾನ ಕಾರ್ಯದರ್ಶಿ ಸಿ ಎಚ್ ವೆಂಕಟಾಚಲಂ ತಿಳಿಸಿದ್ದಾರೆ.

"ನಾವು ಕಳೆದ 25 ವರ್ಷಗಳಿಂದ ಬ್ಯಾಂಕುಗಳ ಖಾಸಗೀಕರಣವನ್ನು ವಿರೋಧ ಮಾಡುತ್ತಾ ಬಂದಿದ್ದೇವೆ. ಬ್ಯಾಂಕಿಂಗ್ ವಲಯವನ್ನು ಕುಗ್ಗಿಸುವ ಸುಧಾರಣೆಗಳನ್ನು ನಾವು ನಿರಂತರವಾಗಿ ವಿರೋಧ ಮಾಡುತ್ತಾ ಬಂದಿದ್ದೇವೆ,"ಎಲ್ಲಾ ಬ್ಯಾಂಕುಗಳನ್ನು ಖಾಸಗೀಕರಣ ಮಾಡುವ ಸರ್ಕಾರದ ನಡೆಯನ್ನು ವಿರೋಧ ಮಾಡುತ್ತೇವೆ ಎಂದು ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಒಕ್ಕೂಟ(ಎಐಬಿಒಸಿ)ದ ನಾಯಕ ಸಂಜಯ್ ದಾಸ್ ತಿಳಿಸಿದ್ದಾರೆ.

ಬ್ಯಾಂಕ್ ಉದ್ಯೋಗಿಗಳು ಈ ಮಸೂದೆಯನ್ನು ವಿರೋಧಿಸಲು ಮುಖ್ಯ ಕಾರಣ ಇದು "ಜನತೆಯ ಹಣ ಜನತೆಯ ಕಲ್ಯಾಣಕ್ಕೆ" ಎಂಬ ಧ್ಯೇಯವನ್ನು ಕೈಬಿಟ್ಟು "ಜನತೆಯ ಹಣ ಖಾಸಗೀ ಪ್ರಯೋಜನಕ್ಕಾಗಿ" ಎಂದು ಬದಲಿಸುತ್ತದೆ, ಜನಗಳ ಉಳಿತಾಯವನ್ನು ಖಾಸಗಿ ಕಾರ್ಪೊರೇಟ್‌ಗಳು, ದೊಡ್ಡ ಬಂಡವಳಿಗರ ಲೂಟಿಗೆ ತೆರೆದು ಕೊಡುತ್ತದೆ ಎಂದು ಬ್ಯಾಂಕ್ ಸಂಘಟನೆಗಳು ಆತಂಕ ವ್ಯಕ್ತಪಡಿಸಿವೆ.

ಬ್ಯಾಂಕ್ ನೌಕರರ ಈ ಮುಷ್ಕರ ಸರಕಾರದ ವಿನಾಶಕಾರೀ ಖಾಸಗೀಕರಣ ಧೋರಣೆಯ ವಿರುದ್ದ ಪ್ರತಿರೋಧವನ್ನು ಜನತೆಯ ಜತೆಗೂಡಿ ನಡೆಸುವ ಉದ್ದೇಶವನ್ನೂ ಹೊಂದಿದೆ. ಜತೆಗೆ ಜನಗಳು ಬೆವರು ಸುರಿಸಿ ಗಳಿಸುವ ಆದಾಯಗಳಲ್ಲಿ ಕಷ್ಟಪಟ್ಟು ಮಾಡಿರುವ ಉಳಿತಾಯಗಳನ್ನು ಈ ಸರಕಾರ ಖಾಸಗಿ ಕಾರ್ಪೊರೇಟ್‌ಗಳಿಗೆ ವಹಿಸಿ ಕೊಡಲು ವಿವಿಧ ರೀತಿಗಳಲ್ಲಿ ಶತಪ್ರಯತ್ನ ಮಾಡುತ್ತಿದೆ ಎಂದು ಜನತೆಯನ್ನು ಎಚ್ಚರಿಸಲಿಕ್ಕಾಗಿ ಕೂಡ ಎಂದು ಬ್ಯಾಂಕ್ ಸಂಘಟನೆಗಳು ಹೇಳಿವೆ.

ಉದ್ಯೋಗ ಖಾತ್ರಿ ಯೋಜನೆಯ ಕತ್ತು ಹಿಸುಕುವ ಕೆಲಸ



ಪ್ರಜ್ಞಾಪೂರ್ವಕವಾಗಿ ಉದ್ಯೋಗ ಖಾತ್ರಿ ಯೋಜನೆಗೆ ಕಡಿಮೆ ಹಂಚಿಕೆಮಾಡುವ ಕ್ರಮವನ್ನು ಮೋದಿ ಸರ್ಕಾರವು ಅದರ ಪರಾಕಾಷ್ಠೆಗೆ ಕೊಂಡೊಯ್ದಿದೆ. ಈ ಯೋಜನೆಗೆ ಮೋದಿ ಆರಂಭದಿಂದಲೇ ವಿರೋಧವಾಗಿದ್ದರು. ಯೋಜನೆಯನ್ನು ಕಟುವಾಗಿ ಟೀಕಿಸಿದ್ದರು ಮತ್ತು ಅದನ್ನು ಹಿಂದಿನ ಸರ್ಕಾರಗಳ ಅಗಾಧ ವೈಫಲ್ಯಗಳ ಸ್ಮಾರಕವೆಂದು ಜರೆದಿದ್ದರು. ಆದರೂ, ಈ ಯೋಜನೆಯನ್ನು ಸಂಪೂರ್ಣವಾಗಿ ರದ್ದುಗೊಳಿಸುವ ಧೈರ್ಯವೂ ಅವರಿಗಿರಲಿಲ್ಲ. ಆದ್ದರಿಂದ, ಕಡಿಮೆ ಹಂಚಿಕೆ ಮಾಡುವ ಮೂಲಕ ಈ ಯೋಜನೆಯ ಕತ್ತು ಹಿಸುಕುವ ಕೆಲಸವನ್ನು ಮಾಡಿದರು.ಉದ್ಯೋಗ ಖಾತ್ರಿ ಯೋಜನೆಯ ಮೇಲೆ ಮಾಡುವ ಸರ್ಕಾರದ ಒಂದೊಂದು ರೂಪಾಯಿಯ ವೆಚ್ಚವೂ ಇತರ ಯಾವುದೇ ವೆಚ್ಚಕ್ಕಿಂತಲೂ ಉತ್ತಮ. ಆದರೇನು ಮಾಡೋಣ! ಇದನ್ನು ಮನಗಾಣಲಾಗದಷ್ಟು ಕುರುಡಾಗಿದೆ ಸರ್ಕಾರ.

ಪ್ರೊ.ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ. ನಾಗರಾಜ್

ಯುಪಿಎ–1 ಸರ್ಕಾರವನ್ನು ಹೊರಗಿನಿಂದ ಬೆಂಬಲಿಸುತ್ತಿದ್ದ ಎಡ ಪಕ್ಷಗಳ ಒತ್ತಾಯದ ಮೇರೆಗೆ, ನವ–ಉದಾರವಾದಿ ಲಾಬಿಯ ವಿರೋಧವನ್ನು ಲೆಕ್ಕಿಸದೆ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು (ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ) ಜಾರಿಗೊಳಿಸಲಾಯಿತು. ಈ ಯೋಜನೆಯು ಆರಂಭದಿಂದಲೂ ನಿರ್ಬಂಧಗಳಿಂದ ಕೂಡಿತ್ತು: ಒಂದು ವರ್ಷದಲ್ಲಿ ಗರಿಷ್ಠ 100 ದಿನಗಳವರೆಗೆ ಉದ್ಯೋಗ ಒದಗಿಸುವ ಭರವಸೆ, ಮತ್ತು ಅದೂ ಕೂಡ ಕುಟುಂಬದ ಒಬ್ಬ ಸದಸ್ಯಗೆ ಮಾತ್ರ. ಇಂತಹ ನಿರ್ಬಂಧಗಳಿದ್ದರೂ ಸಹ, ಅದು ಆರ್ಥಿಕ ಹಕ್ಕನ್ನು ಮಾನ್ಯ ಮಾಡಿತ್ತು: ಒಬ್ಬ ನಿರುದ್ಯೋಗಿ ವ್ಯಕ್ತಿಯು ತನಗೆ ಉದ್ಯೋಗ ಬೇಕೆಂದು ಬೇಡಿಕೆ ಮಂಡಿಸಿದ ಹದಿನೈದು ದಿನಗಳೊಳಗೆ ಸರ್ಕಾರವು ಆ ವ್ಯಕ್ತಿಗೆ ಉದ್ಯೋಗ ಒದಗಿಸಬೇಕು. ತಪ್ಪಿದರೆ, ಆ ವ್ಯಕ್ತಿಗೆ ಕನಿಷ್ಠ ಕೂಲಿಯ ಅರ್ಧದಷ್ಟು ಹಣವನ್ನು ಪರಿಹಾರವಾಗಿ ಕೊಡಬೇಕಾಗುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಇದೊಂದು ಬೇಡಿಕೆ–ಚಾಲಿತ ಯೋಜನೆಯಾಗಿತ್ತು. ಅಂದರೆ, ಉದ್ಯೋಗ ಬಯಸಿದವರಿಗೆ, ಕೆಲವು ಮಿತಿಗಳಿಗೆ ಒಳಪಟ್ಟು ಅದನ್ನು ಒದಗಿಸಬೇಕಾಗಿತ್ತು.

ಯುಪಿಎ–2 ಸರ್ಕಾರದ ಅವಧಿಯಲ್ಲಿಯೇ ಈ ಯೋಜನೆಯ ಅಧೋಗತಿ ಪ್ರಾರಂಭವಾಗಿತ್ತು. ಈ ಯೋಜನೆಗೆ ಒದಗಿಸುವ ಬಜೆಟ್ ಹಂಚಿಕೆಯನ್ನು ಅನೇಕ ವರ್ಷಗಳ ಕಾಲ ಸುಮಾರು 60,000 ಕೋಟಿ ರೂ.ಗಳ ಮಟ್ಟ ದಾಟದಂತೆ ನೋಡಿಕೊಳ್ಳಲಾಗಿತ್ತು. ಅಂದರೆ, ಬಜೆಟ್ ಹಂಚಿಕೆ ಮಾಡುವಾಗ ಬೆಲೆ ಏರಿಕೆಯ ಪರಿಣಾಮ, ಕೆಲಸ ಕೇಳುವವರ ಸಂಖ್ಯೆ ಹೆಚ್ಚಿದರೆ ಅದಕ್ಕೆ ತಕ್ಕಂತೆ ಹೆಚ್ಚು ಹಣ ಒದಗಿಸುವ ಅವಶ್ಯಕತೆ ಮತ್ತು ತೀವ್ರಗೊಳ್ಳುತ್ತಿರುವ ಕೃಷಿ ಬಿಕ್ಕಟ್ಟಿನಂಥಹ ಅಂಶಗಳನ್ನು ಪರಿಗಣಿಸಿರಲಿಲ್ಲ. ಅಂದರೆ, ಈ ಯೋಜನೆಯು ಉಸಿರುಗಟ್ಟಿಸುವ ಉದ್ದೇಶದಿಂದ ಸರ್ಕಾರವು ಕೈ ಬಿಗಿ ಹಿಡಿಯುತ್ತಿತ್ತು. ಈ ಜಿಪುಣತನದ ಬಗ್ಗೆ ಸಂಸತ್ತಿನಲ್ಲಿ ಪ್ರಸ್ತಾಪಿಸಿದಾಗ, ಇದೊಂದು ಬೇಡಿಕೆ–ಚಾಲಿತ ಯೋಜನೆಯಾಗಿರುವುದರಿಂದ, ಬಜೆಟ್ ಹಂಚಿಕೆಯ ಬಗ್ಗೆ ಅನುಮಾನಪಡುವ ಅವಶ್ಯಕತೆ ಇಲ್ಲ; ಉದ್ಯೋಗದ ಬೇಡಿಕೆಗೆ ಅನುಗುಣವಾಗಿ ಬಜೆಟ್ ಹಂಚಿಕೆಯನ್ನು ಪರಿಷ್ಕರಿಸಲಾಗುವುದು ಮತ್ತು ಹೆಚ್ಚು ಹೆಚ್ಚು ಜನರು ಉದ್ಯೋಗ ಕೇಳುವುದು ಕಂಡುಬಂದರೆ ಬಜೆಟ್ ಹಂಚಿಕೆಯನ್ನು ಹೆಚ್ಚಿಸಲಾಗುವುದು ಎಂಬುದಾಗಿ ಸರ್ಕಾರವು ಸಮಜಾಯಿಷಿ ಕೊಡುತ್ತಿತ್ತು.

ಅಡ್ಡ ಗೋಡೆಯ ಮೇಲಿಟ್ಟ ದೀಪದ ರೀತಿಯ ಉತ್ತರದ ಸಮಸ್ಯೆಯೆಂದರೆ, ಉದ್ಯೋಗದ ಬೇಡಿಕೆ ಹೆಚ್ಚಿದ್ದರಿಂದಾಗಿ ಒಂದು ವೇಳೆ ಬಜೆಟ್ ಹಂಚಿಕೆಯನ್ನು ಹೆಚ್ಚಿಸಿದರೂ ಸಹ, ಕೂಲಿಯ ಹಣ ಕೆಲಸ ಮಾಡಿದವರನ್ನು ತಲುಪಲು ಬಹಳ ಸಮಯ ಹಿಡಿಯುತ್ತದೆ. ಅಂದರೆ, ಬಹಳ ದಿನಗಳ ವರೆಗೆ ಕೂಲಿ ಹಣ ಬಾಕಿ ಉಳಿಯುತ್ತದೆ ಮತ್ತು ಈ ನಡುವೆ, ಕೆಲಸ ಮಾಡಿದವರು ತೊಂದರೆಗೆ ಒಳಗಾಗುತ್ತಾರೆ. ಹೀಗಾಗಿ, ಜನರು ಈ ಯೋಜನೆಯಡಿಯಲ್ಲಿ ಉದ್ಯೋಗ ಕೇಳುವುದನ್ನು ನಿಲ್ಲಿಸುತ್ತಾರೆ. ಆದ್ದರಿಂದ, ಬಜೆಟ್ ವರ್ಷದ ಆರಂಭದಲ್ಲಿ ಮಾಡುವ ಮೊದಲ ಹಂಚಿಕೆಗೂ ಉದ್ಯೋಗ ಲಭ್ಯತೆಗೂ ಸಂಬಂಧವಿಲ್ಲ; ಹಂಚಿಕೆಯನ್ನು ನಂತರದಲ್ಲೂ ಹೆಚ್ಚಿಸಬಹುದು ಎಂದು ಹೇಳಿದರೂ ಸಹ, ಉದ್ಯೋಗ ಖಾತ್ರಿ ಯೋಜನೆಗೆ ಬಜೆಟ್ ವರ್ಷದ ಆರಂಭದಲ್ಲಿ ಕಡಿಮೆ ಹಣ ಹಂಚಿದಾಗ ಉದ್ಯೋಗ ಬೇಡಿಕೆಯ ಮೇಲೆ ಅದರ ಪರಿಣಾಮ ಬಿದ್ದೇ ಬೀಳುತ್ತದೆ. ಕೂಲಿ ಪಾವತಿಸದಿರುವ ಮೂಲಕ ಉದ್ಯೋಗ ಬೇಡಿಕೆಯನ್ನು ಉಸಿರುಗಟ್ಟಿಸಲಾಗಿರುತ್ತದೆ. ಪರಿಣಾಮವಾಗಿ, ನಂತರದ ದಿನಗಳಲ್ಲಿ ಉದ್ಯೋಗ ಬೇಡಿಕೆ ಇಳಿಯುತ್ತದೆ. ಈ ಇಳಿಕೆಯ ಸಂಗತಿಯನ್ನು ಪೂರ್ವಾನ್ವಯವಾಗಿ ಬಳಸಿಕೊಂಡು ಯೋಜನೆಗೆ ಕಡಿಮೆ ಆರಂಭಿಕ ಬಜೆಟ್ ಹಂಚಿಕೆಯನ್ನು ಸಮರ್ಥಿಸಿಕೊಳ್ಳಲಾಗುತ್ತದೆ ಮತ್ತು ತದನಂತರದ ವರ್ಷವೂ ಹಂಚಿಕೆಯನ್ನು ಕಡಿಮೆ ಮಟ್ಟದಲ್ಲೇ ಇಡಲು ಈ ವಿತಂಡ ವಾದವನ್ನೇ ಬಳಸಿಕೊಳ್ಳಲಾಗುತ್ತದೆ.

ಈ ವಿಷಮ ಪರಿಸ್ಥಿತಿಯು, ಬೇರೊಂದು ಸನ್ನಿವೇಶದಲ್ಲಿ ಯಾವುದನ್ನು "ನಿರುತ್ಸಾಹಿತ ಕಾರ್ಮಿಕ ಪರಿಣಾಮ" ಎಂದು ಕರೆಯುತ್ತಾರೋ ಅದೇ ಆಗುತ್ತದೆಯಲ್ಲದೆ ಬೇರೇನೂ ಅಲ್ಲ. ಒಂದು ತೀವ್ರ ನಿರುದ್ಯೋಗ ಪರಿಸ್ಥಿತಿಯ ಅವಧಿಯಲ್ಲಿ, ಮುಂದುವರಿದ ಬಂಡವಾಳಶಾಹಿ ದೇಶಗಳಲ್ಲಿರುವಂತೆ, ಅನೇಕ ನಿರುದ್ಯೋಗಿಗಳು, ಕೆಲಸ ಸಿಗುವ ಭರವಸೆಯಿಲ್ಲ ಎಂದು ಭಾವಿಸಿ ಕೆಲಸ ಹುಡುಕದೆ, ಕಾರ್ಮಿಕ–ಪಡೆಯಿಂದ ಹೊರಗುಳಿಯುತ್ತಾರೆ. ಅದೇ ರೀತಿಯಲ್ಲಿ, ಗ್ರಾಮೀಣ ಭಾರತದಲ್ಲಿ ಕೂಲಿ ಪಾವತಿಯ ವಿಳಂಬವು ಅನೇಕ ನಿರುದ್ಯೋಗಿ ಕೆಲಸಗಾರರನ್ನು ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ ಹುಡುಕದಂತೆ ನಿರುತ್ಸಾಹಗೊಳಿಸುತ್ತದೆ. ಹೀಗಾಗಿ, ಉದ್ಯೋಗ ಖಾತ್ರಿ ಯೋಜನೆಗಾಗಿ ಒದಗಿಸುವ ಕಡಿಮೆ ಆರಂಭಿಕ ಬಜೆಟ್ ಹಂಚಿಕೆಯು "ನಿರುತ್ಸಾಹಿತ ಕಾರ್ಮಿಕ–ಪರಿಣಾಮ"ವನ್ನು ಬೀರುತ್ತದೆ.

ಪ್ರಜ್ಞಾಪೂರ್ವಕವಾಗಿ ಉದ್ಯೋಗ ಖಾತ್ರಿ ಯೋಜನೆಗೆ ಕಡಿಮೆ ಹಂಚಿಕೆಮಾಡುವ ಕ್ರಮವನ್ನು ಮೋದಿ ಸರ್ಕಾರವು ಅದರ ಪರಾಕಾಷ್ಠೆಗೆ ಕೊಂಡೊಯ್ದಿದೆ. ಈ ಯೋಜನೆಗೆ ಮೋದಿ ಆರಂಭದಿಂದಲೇ ವಿರೋಧವಾಗಿದ್ದರು. ಯೋಜನೆಯನ್ನು ಕಟುವಾಗಿ ಟೀಕಿಸಿದ್ದರು ಮತ್ತು ಅದನ್ನು ಹಿಂದಿನ ಸರ್ಕಾರಗಳ ಅಗಾಧ ವೈಫಲ್ಯಗಳ ಸ್ಮಾರಕವೆಂದು ಜರೆದಿದ್ದರು. ಆದರೂ, ಈ ಯೋಜನೆಯನ್ನು ಸಂಪೂರ್ಣವಾಗಿ ರದ್ದುಗೊಳಿಸುವ ಧೈರ್ಯವೂ ಅವರಿಗಿರಲಿಲ್ಲ. ಆದ್ದರಿಂದ, ಕಡಿಮೆ ಹಂಚಿಕೆ ಮಾಡುವ ಮೂಲಕ ಈ ಯೋಜನೆಯ ಕತ್ತು ಹಿಸುಕುವ ಕೆಲಸವನ್ನು ಮಾಡಿದರು. 2019–20ರಲ್ಲಿ ಈ ಯೋಜನೆಯ ನಿವ್ವಳ ವೆಚ್ಚವು 71,687 ಕೋಟಿ ರೂ. ಆಗಿತ್ತು. ಆದಾಗ್ಯೂ, 2020–21ರ ಬಜೆಟ್‌ನಲ್ಲಿ ಈ ಬಾಬ್ತು ಹಂಚಿಕೆಯನ್ನು 61,500 ಕೋಟಿ ರೂ.ಗಳಿಗೆ ಇಳಿಸಲಾಯಿತು. ಆದರೆ, ಕೊರೊನಾ ಲಾಕ್‌ಡೌನ್‌ನಿಂದಾಗಿ ಇದ್ದಕ್ಕಿದ್ದಂತೆ ಕೆಲಸ ಕಳೆದುಕೊಂಡ, ಆದಾಯ ಕಳೆದುಕೊಂಡ ಲಕ್ಷ ಲಕ್ಷ ವಲಸೆ ಕಾರ್ಮಿಕರು ನಗರಗಳಿಂದ ತಮ್ಮ ತಮ್ಮ ಹಳ್ಳಿಗಳಿಗೆ ವಾಪಸಾದರು. ಅವರು ತಮ್ಮ ಹಳ್ಳಿಗೆ ಹಿಂದಿರುಗಿದಾಗ ಅವರನ್ನು ಜೀವಂತ ಉಳಿಸಿದ ಏಕೈಕ ಅಂಶವೆಂದರೆ ಉದ್ಯೋಗ ಖಾತ್ರಿ ಯೋಜನೆಯೇ. ಲಕ್ಷಗಟ್ಟಲೆ ವಲಸೆ ಕೆಲಸಗಾರರು ಹಳ್ಳಿಗಳಿಗೆ ಮರಳಿದ ಕಾರಣದಿಂದಾಗಿ ಯೋಜನೆಯಡಿ ಕೆಲಸದ ಬೇಡಿಕೆಯ ಹಠಾತ್ ಹೆಚ್ಚಳವಾಗಿದ್ದು, ಬಜೆಟ್ ಹಂಚಿಕೆಯನ್ನು 1, 11,500 ಕೋಟಿ ರೂ.ಗಳಿಗೆ ಹೆಚ್ಚಿಸುವಂತೆ ಸರ್ಕಾರವನ್ನು ಒತ್ತಾಯಿಸಲಾಯಿತು.

ಆದರೆ, ಮುಂದಿನ ವರ್ಷ, ಅಂದರೆ 2021–22ರಲ್ಲಿ, ಬಜೆಟ್ ಹಂಚಿಕೆಯನ್ನು ಮತ್ತೆ 73,000 ಕೋಟಿ ರೂ.ಗಳಿಗೆ ಇಳಿಸಲಾಯಿತು. ಇದು ಹಿಂದಿನ ವರ್ಷಕ್ಕಿಂತ 38,500 ಕೋಟಿ ರೂ.ಗಳಷ್ಟು ಕಡಿಮೆಯಾಗಿದೆ. ಒಂದು ವೇಳೆ ಅರ್ಥವ್ಯವಸ್ಥೆಯು ಚೇತರಿಸಿಕೊಂಡಿದ್ದಿದ್ದರೆ ಮತ್ತು ಲಾಕ್‌ಡೌನ್ ಮೊದಲಿನಷ್ಟೇ ಪ್ರಮಾಣದಲ್ಲಿ ಉದ್ಯೋಗಗಳು ಲಭ್ಯವಿದ್ದಿದ್ದರೆ, ಈ ಕಡಿತವನ್ನು ಸ್ವಲ್ಪವಾದರೂ ಸಮರ್ಥಿಸಿಕೊಳ್ಳಬಹುದಿತ್ತು. ಆದರೆ, ಉತ್ಪತ್ತಿಯು(ಜಿಡಿಪಿ) ಮೊದಲಿನ ಮಟ್ಟಕ್ಕೆ ಚೇತರಿಸಿಕೊಂಡಿಲ್ಲ ಎಂಬುದು ಎಲ್ಲರಿಗೂ ತಿಳಿದದ್ದೇ. ಉದ್ಯೋಗಾವಕಾಶಗಳೂ ಸಹ ಇನ್ನೂ ಲಾಕ್‌ಡೌನ್–ಪೂರ್ವ ಮಟ್ಟಕ್ಕಿಂತಲೂ ಕೆಳಗಿವೆ. ಏಕೆಂದರೆ, ಹೆಚ್ಚು ಕೆಲಸಗಳನ್ನು ಒದಗಿಸುವ ಕಿರು ಉತ್ಪಾದನಾ ವಲಯವು ಸೊರಗುತ್ತಲೇ ಇದೆ. ಆದ್ದರಿಂದ, ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸದ ಬೇಡಿಕೆಯು ಹೆಚ್ಚೆಂದರೆ ಕಳೆದ ವರ್ಷಕ್ಕಿಂತ ಸ್ವಲ್ಪ ಕಡಿಮೆಯಾಗಬಹುದು. ಈ ಹಿನ್ನೆಲೆಯಲ್ಲಿ, ಹಿಂದಿನ ವರ್ಷಕ್ಕೆ ಹೋಲಿಸಿದರೆ, ಉದ್ಯೋಗ ಖಾತ್ರಿ ಯೋಜನೆಗಾಗಿ ಬಜೆಟ್ ಹಂಚಿಕೆಯನ್ನು 38,500 ಕೋಟಿ ರೂ.ಗಳಷ್ಟು ಕಡಿತಗೊಳಿಸುವುದು ಮತ್ತು ಈ ಹಂಚಿಕೆಯನ್ನು 2019–20 ರ ನೈಜ ವೆಚ್ಚದ ಮಟ್ಟದಲ್ಲಿ ನಿಗದಿಪಡಿಸುವುದು ಯೋಜನೆಯ ಕತ್ತು ಹಿಸುಕುವ ಕೆಲಸವಾಗುತ್ತದೆ.

10,000 ಕೋಟಿ ರೂ.ಗಳಷ್ಟು ಹಣವನ್ನು ಈ ಯೋಜನೆಗೆ ಹೆಚ್ಚುವರಿಯಾಗಿ ಒದಗಿಸುವುದಾಗಿ ನವೆಂಬರ್ 25ರಂದು ಸರ್ಕಾರವು ಘೋಷಿಸಿದೆ, ನಿಜ. ಆದರೆ, ಇದು ರಾವಣನ ಹೊಟ್ಟೆಗೆ ಅರೆ ಕಾಸಿನ ಮಜ್ಜಿಗೆ ಎನ್ನುವಂತೆ ಈ ಯೋಜನೆಗೆ ಏನೇನೂ ಸಾಲದು. ಕೂಲಿಯ ಬಾಕಿ ಈಗಾಗಲೇ ಬೆಟ್ಟದಷ್ಟು ಏರಿದೆ. ಇಡೀ ವರ್ಷದ ಬಜೆಟ್ ಹಂಚಿಕೆಯ ಹಣ ಏಳು ತಿಂಗಳುಗಳು ಮುಗಿಯುವ ಮೊದಲೇ ಸಂಪೂರ್ಣವಾಗಿ ಬಳಕೆಯಾಗಿದೆ. ಈ ಆಮೆಯ ವೇಗದ ಪ್ರಸ್ತುತ ಅನುಷ್ಠಾನದಲ್ಲಿಯೂ ಸಹ, ಅಂದರೆ, "ನಿರುತ್ಸಾಹಿತ ಕಾರ್ಮಿಕ–ಪರಿಣಾಮ"ವನ್ನು ಗಣನೆಗೆ ತೆಗೆದುಕೊಳ್ಳದೆ ಕಡಿಮೆ ಆರಂಭಿಕ ಬಜೆಟ್ ಹಂಚಿಕೆಯಿಂದಾಗಿ ಉದ್ಭವಿಸಿದ ಪರಿಸ್ಥಿತಿ ಮತ್ತು ಅನುಷ್ಠಾನದ ವೇಗವನ್ನು ಹೆಚ್ಚಿಸಬೇಕಾದ ಪ್ರಮೇಯವಿರುವುದರಿಂದ, ಈ ಯೋಜನೆಗೆ ಕನಿಷ್ಠ 30,000 ಕೋಟಿ ರೂ.ಗಳಷ್ಟು ಅಧಿಕ ಮೊತ್ತದ ಅಗತ್ಯವಿದೆ. ಆದರೆ, ಸರ್ಕಾರವು ಕೇವಲ 10,000 ಕೋಟಿ ರೂ.ಗಳನ್ನು ಮಾತ್ರ ಒದಗಿಸಿದೆ. ವಾಸ್ತವವಾಗಿ, ನವೆಂಬರ್ 25 ರಂದು ಈ ಯೋಜನೆಯ ಹಣಕಾಸು ಲೆಕ್ಕಪತ್ರಗಳು 9,888 ಕೋಟಿ ರೂ.ಗಳ ನಕಾರಾತ್ಮಕ ಶಿಲ್ಕು ತೋರಿಸುತ್ತವೆ (ದಿ ಹಿಂದೂ, ನವೆಂಬರ್ 26). ಹಾಗಾಗಿ, ಈ ಹೆಚ್ಚುವರಿ ಹಂಚಿಕೆಯು ಒಂದು ವೇಳೆ ಈ ಕೊರತೆಯ ಶಿಲ್ಕನ್ನು ಸರಿದೂಗಿಸುತ್ತದೆ ಎಂದುಕೊಂಡರೂ ಸಹ, ಪ್ರಸಕ್ತ ಹಣಕಾಸು ವರ್ಷದಲ್ಲಿ ಉಳಿದಿರುವ ಇನ್ನೂ ನಾಲ್ಕು ತಿಂಗಳು ಕಾಲ ಮಾಡುವುದೇನು?

ಸರ್ಕಾರದ ಈ ಜುಗ್ಗತನವನ್ನು ವಿವರಿಸಲಾಗದು ಮತ್ತು ಅದು ಒಂದು ಅವಿವೇಕದ ಕ್ರಮವೂ ಹೌದು. ವಿವರಿಸಲಾಗದು ಏಕೆಂದರೆ, ಸರ್ಕಾರವು ಈ ಯೋಜನೆಗಾಗಿ ಒಂದು ವೇಳೆ 100 ರೂ.ಗಳನ್ನು ಖರ್ಚು ಮಾಡಿದರೆ, ಆಗ, ಕೂಲಿಯ ಮತ್ತು ಸಾಮಗ್ರಿಗಳ ವೆಚ್ಚವನ್ನು ಶಾಸನಬದ್ಧ 60:40 ಅನುಪಾತದಲ್ಲಿ ವಿಭಜಿಸಲಾಗಿದೆ ಮತ್ತು ಕೆಲಸಗಾರರು ತಮ್ಮ ಕೂಲಿಯ ಶೇಕಡಾ 40 ರಷ್ಟನ್ನು ಆಹಾರ ಧಾನ್ಯಗಳಿಗೆ ಖರ್ಚು ಮಾಡುತ್ತಾರೆ ಎಂದು ಊಹಿಸಿಕೊಂಡರೆ, 24 ರೂ.ಗಳನ್ನು ಆಹಾರ ಧಾನ್ಯಗಳಿಗೆ ಖರ್ಚು ಮಾಡಲಾಗುತ್ತದೆ. ಆಹಾರ ಧಾನ್ಯಗಳ ದಾಸ್ತಾನು ಸರ್ಕಾರದೊಂದಿಗೆ ಈಗಾಗಲೇ ಲಭ್ಯವಿರುವುದರಿಂದ, ಯೋಜನೆಗೆ ಖರ್ಚು ಮಾಡಿದ 100 ರೂ.ಗಳಲ್ಲಿ ಸರ್ಕಾರಕ್ಕೆ ತಕ್ಷಣವೇ 24 ರೂ.ಗಳು (ಕಾಲು ಭಾಗ) ಹಿಂತಿರುಗುತ್ತವೆ. ಈ ಹೆಚ್ಚುವರಿ ವೆಚ್ಚಕ್ಕಾಗಿ ಇಡೀ ಹಣವನ್ನು ಒಂದು ವೇಳೆ ವಿತ್ತೀಯ ಕೊರತೆಯ ಮೂಲಕ ಒದಗಿಸಿಕೊಂಡಿದ್ದರೂ ಸಹ, ಅದರಲ್ಲಿ ಈ ರೀತಿಯ ಮೊದಲ ಸುತ್ತಿನ ಕಾಲು ಭಾಗ ವೆಚ್ಚಗಳ ನಂತರ ಉಳಿಯುವ ವಾಸ್ತವ ವಿತ್ತೀಯ ಕೊರತೆಯು ಮುಕ್ಕಾಲು ಭಾಗ ಮಾತ್ರ.

ಭಾರತ ಆಹಾರ ನಿಗಮದ(ಎಫ್‌ಸಿಐ) ವ್ಯವಹಾರ–ವಹಿವಾಟುಗಳು ಈಗ ಸರ್ಕಾರದ ಬಜೆಟ್‌ನಲ್ಲಿ ಪ್ರಸ್ತಾಪವಾಗುವುದಿಲ್ಲ, ನಿಜ. (ಈ ಮೊದಲು ಪ್ರಸ್ತಾಪವಾಗುತ್ತಿದ್ದವು). ಆದರೆ, ಸರ್ಕಾರ ಮಾಡಿದ ಖರ್ಚಿನ ಕಾಲು ಭಾಗವು ತಕ್ಷಣವೇ ಆಹಾರ ನಿಗಮಕ್ಕೆ ಆದಾಯವಾಗಿ ಬರುತ್ತದೆ ಎಂಬ ಮೂಲಭೂತ ಅಂಶವನ್ನು ಮರೆಯುವಂತಿಲ್ಲ. ಅಂತೆಯೇ, ಈ ಆರಂಭಿಕ ವೆಚ್ಚವು ವಿವಿಧ ಸುತ್ತಿನ ವೆಚ್ಚಗಳನ್ನು ಸೃಷ್ಟಿಸುತ್ತದೆ. ಉದ್ಯೋಗ ಯೋಜನೆಯ ಕೆಲಸ ಕಾರ್ಯಗಳಲ್ಲಿ ಬಳಸುವ ಸಾಮಗ್ರಿಗಳ ತಯಾರಕರು ತಮಗೆ ಸಿಗುವ ಆದಾಯದ ಒಂದು ಭಾಗವನ್ನು ಖರ್ಚು ಮಾಡುತ್ತಾರೆ. ಈ ತಯಾರಕರುಗಳು ಕೊಳ್ಳುವ ವಸ್ತುಗಳ ಉತ್ಪಾದಕರು ತಮ್ಮ ಆದಾಯದ ಒಂದು ಭಾಗವನ್ನು ಖರ್ಚು ಮಾಡುತ್ತಾರೆ. ಹೀಗೆ, ಒಂದೊಂದು ಸ್ತರದಲ್ಲೂ ಆಗುವ ಖರ್ಚುಗಳು ಆಹಾರ ಧಾನ್ಯಗಳಿಗೆ ಹಂತ ಹಂತವಾಗಿ ಬೇಡಿಕೆಯನ್ನು ಸೃಷ್ಟಿಸುತ್ತಾ ಹೋಗುತ್ತವೆ ಮತ್ತು ಆಹಾರ ನಿಗಮದ

ಪುಟ 14 ನೋಡಿ



ಉದ್ಯೋಗ ಖಾತ್ರಿ ಯೋಜನೆಯ ಕತ್ತು ಹಿಸುಕುವ ಕೆಲಸ

ಪುಟ 13 ರಿಂದ

ದಾಸ್ತಾನುಗಳನ್ನು ಇಳಿಸುತ್ತವೆ. ದಾಸ್ತಾನುಗಳ ಇಳಿಕೆಯ ಪರಿಣಾಮವಾಗಿ, ಧಾನ್ಯ ಸಂಗ್ರಹಣಾ ವೆಚ್ಚಗಳು ಮತ್ತು ಅವುಗಳನ್ನು ಕೊಳ್ಳಲು ಮಾಡುವ ಸಾಲದ ಮೇಲಿನ ಬಡ್ಡಿಯ ವೆಚ್ಚಗಳು ತಗ್ಗುತ್ತವೆ.

ಹೀಗಾಗಿ, ಸರ್ಕಾರವು ಒಂದು ವೇಳೆ ವಿತ್ತೀಯ ಕೊರತೆಯನ್ನು ಹೆಚ್ಚಿಸಿಕೊಳ್ಳುವ ಮೂಲಕ ಹಣ ಹೊಂದಿಸಿಕೊಂಡು ಅದನ್ನು ಯೋಜನೆಗಾಗಿ ಖರ್ಚು ಮಾಡಿದರೂ ಸಹ, ಪರಿಣಾಮಗಳು ಪ್ರತಿಕೂಲವಾಗುವುದಿಲ್ಲ. ಖರ್ಚು ಮಾಡಿದ ಹಣದಲ್ಲಿ ಹೆಚ್ಚಿನ ಭಾಗವು ಎಫ್‌ಸಿಐ ಮೂಲಕ ಸರ್ಕಾರಕ್ಕೇ ಹಿಂತಿರುಗುತ್ತದೆ. ಮತ್ತು, ಸರ್ಕಾರದ ಬಜೆಟ್ ಮತ್ತು ಅದರೊಂದಿಗೆ ಎಫ್‌ಸಿಐನ ಖರ್ಚು-ವೆಚ್ಚಗಳನ್ನು ಒಟ್ಟುಗೂಡಿಸಿ ನೋಡಿದಾಗ, ವಾಸ್ತವಿಕ ವಿತ್ತೀಯ ಕೊರತೆಯು, ತೋರಿಕೆಯ ವಿತ್ತೀಯ ಕೊರತೆಗಿಂತ (ಸರ್ಕಾರದ ಬಜೆಟ್ ಒಂದನ್ನೇ ಪರಿಗಣಿಸಿದಾಗ) ತುಂಬಾ ಕಡಿಮೆ ಇರುತ್ತದೆ. ವಾಸ್ತವವಾಗಿ, ಯೋಜನೆಯ ಮೇಲೆ ಸರ್ಕಾರವು ಮಾಡುವ ವೆಚ್ಚವನ್ನು ನೇರವಾಗಿ ಅಥವಾ ಪರೋಕ್ಷವಾಗಿ ಆದಾಯ ಗಳಿಸುವ ಎಲ್ಲರೂ ತಮ್ಮ ತಮ್ಮ ಆದಾಯವನ್ನು ಸಂಪೂರ್ಣವಾಗಿ ಬಳಕೆ ಮಾಡುತ್ತಾರೆ ಎಂದು ನಾವು ಭಾವಿಸಿದರೆ, ಆಗ, ಸರ್ಕಾರವು ಮಾಡಿದ ಪೂರ್ಣ ವೆಚ್ಚವು ಎಫ್‌ಸಿಐಗೆ ಮರಳುತ್ತದೆ. ಅಂದರೆ, ನಿಜವಾದ ವಿತ್ತೀಯ ಕೊರತೆಯು ಶೂನ್ಯವಾಗಿರುತ್ತದೆ. ಜಾಗತೀಕರಣಗೊಂಡ ಹಣಕಾಸು ಬಂಡವಾಳ ಮತ್ತು ಅದರ ಹಿತ-ರಕ್ಷಣೆ ಮಾಡುವ ಐಎಂಎಫ್, ಬಜೆಟ್‌ನಲ್ಲಿರುವುದು ಮಾತ್ರ ವಿತ್ತೀಯ ಕೊರತೆ ಎಂದು ಪರಿಗಣಿಸುವಂತೆ ಒತ್ತಾಯಿಸಬಹುದು. ಕೇವಲ ಸೈದ್ಧಾಂತಿಕ ಕಾರಣಗಳಿಗಾಗಿ ಅವರು ಹಾಗೆ ಮಾಡುತ್ತಾರೆ. ಆದರೆ, ಎಫ್‌ಸಿಐ ಸ್ವತಃ ಸರ್ಕಾರದ ಭಾಗವಾಗಿರುವುದರಿಂದ, ಅವರು ಊದುವ ಶಂಖಕ್ಕೆ ನಾವು ಮರುಳಾಗಬಾರದು.

ಸರ್ಕಾರದ ಜುಗ್ಗುತನವು ಒಂದು ಅವಿವೇಕದ ಸಂಗತಿಯಾಗಿದೆ. ಏಕೆಂದರೆ, ಸರ್ಕಾರವು ಈ ಯೋಜನೆಯ ಮೇಲೆ ಮಾಡಿದ ಖರ್ಚಿನಲ್ಲಿ ಶಾಸನಬದ್ಧವಾಗಿ ಶೇಖಡಾ 60ರಷ್ಟು ಹಣವನ್ನು ಯೋಜನೆಗೆ ಬೇಕಾಗುವ ಸಾಮಗ್ರಿಗಳನ್ನು ಕೊಳ್ಳಲು ಬಳಸಬೇಕಾಗುತ್ತದೆ. ಈ ಸಾಮಗ್ರಿಗಳ ತಯಾರಕರು ತಮಗೆ ಸಿಗುವ ಆದಾಯದ ಒಂದು ಭಾಗವನ್ನು ಆಹಾರೇತರ ವಸ್ತುಗಳನ್ನು ಕೊಳ್ಳಲು ಬಳಸುತ್ತಾರೆ. ಆ ಬಳಕೆಯ ವಸ್ತುಗಳ ಉತ್ಪಾದಕರು ತಮ್ಮ ಆದಾಯದ ಒಂದು ಭಾಗವನ್ನು ಆಹಾರೇತರ ವಸ್ತುಗಳನ್ನು ಕೊಳ್ಳಲು ಬಳಸುತ್ತಾರೆ. ಕೆಲಸಗಾರರೂ ಸಹ ತಮ್ಮ ಆದಾಯದ ಸ್ವಲ್ಪ ಭಾಗವನ್ನು ಆಹಾರೇತರ ವಸ್ತುಗಳನ್ನು ಕೊಳ್ಳಲು ಬಳಸುತ್ತಾರೆ. ಹೀಗೆ, ಒಟ್ಟಾರೆಯಾಗಿ ಆಹಾರೇತರ ವಸ್ತುಗಳ ಮೇಲಿನ ಬೇಡಿಕೆಯು ಹೆಚ್ಚುತ್ತಾ ಹೋಗುತ್ತದೆ. ಅಲ್ಲದೆ, ಈ ವಸ್ತುಗಳು ಸಾಮಾನ್ಯವಾಗಿ ಸಣ್ಣ ಪ್ರಮಾಣದ ಕೈಗಾರಿಕೆಗಳಲ್ಲಿ ಮತ್ತು ಅನೌಪಚಾರಿಕ ವಲಯದಲ್ಲಿ ತಯಾರಾಗುತ್ತವೆ. ಈ ವಸ್ತುಗಳನ್ನು ತಯಾರಿಸುವ ಉದ್ಯೋಗ-ತೀವ್ರ (ಹೆಚ್ಚು ಕೆಲಸಗಳನ್ನು ಒದಗಿಸುವ) ವಲಯವು ಹೆಚ್ಚಿನ ಸಂಖ್ಯೆಯ ಕೆಲಸಗಾರರಿಗೆ ಉದ್ಯೋಗ ದೊರಕಿಸುತ್ತದೆ.

ಈ ಎಲ್ಲ ಅಂಶಗಳು ಏನನ್ನು ಸೂಚಿಸುತ್ತವೆ ಎಂದರೆ, ಸರ್ಕಾರವು ತನ್ನ ವೆಚ್ಚಗಳಿಗೆ ಹಣವನ್ನು ಯಾವ ರೀತಿಯಲ್ಲಿ ಒದಗಿಸಿಕೊಂಡಿದೆ ಎಂಬುದ ಮುಖ್ಯವಲ್ಲ. ಮುಖ್ಯವೆಂದರೆ, ಸರ್ಕಾರವು ಉದ್ಯೋಗ ಖಾತ್ರಿ ಯೋಜನೆಯ ಮೇಲೆ ಮಾಡುವ ಒಂದೊಂದು ರೂಪಾಯಿಯ ವೆಚ್ಚವೂ ಇತರ ಯಾವುದೇ ವೆಚ್ಚಕ್ಕಿಂತಲೂ ಉತ್ತಮ. ಆದರೇನು ಮಾಡೋಣ! ಇದನ್ನು ಮನಗಾಣಲಾಗದಷ್ಟು ಕುರುಡಾಗಿದೆ ಸರ್ಕಾರ.

ಸಾರ್ವತ್ರಿಕ ಮುಷ್ಕರ: ಫೆಬ್ರವರಿ 23-24, 2022 ರಂದು

ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಸ್ವತಂತ್ರ ವಲಯವಾರು ಅಖಿಲ ಭಾರತ ಒಕ್ಕೂಟಗಳು ಮತ್ತು ಸಂಘಗಳ ಜಂಟಿ ವೇದಿಕೆಯು ಡಿಸೆಂಬರ್ 3, 2021 ರಂದು ದೆಹಲಿಯಲ್ಲಿ ಸಭೆ ಸೇರಿ ದೇಶಾದ್ಯಂತ 2 ದಿನಗಳ ಸಾರ್ವತ್ರಿಕ ಮುಷ್ಕರದ ದಿನಾಂಕಗಳನ್ನು ಅಂತಿಮಗೊಳಿಸಿತು. ಕೇಂದ್ರದ ಬಿಜೆಪಿ ಸರ್ಕಾರದ ಜನವಿರೋಧಿ, ಕಾರ್ಮಿಕ ವಿರೋಧಿ ಮತ್ತು ರಾಷ್ಟ್ರವಿರೋಧಿ ವಿಧ್ವಂಸಕ ಧೋರಣೆಗಳ ವಿರುದ್ಧ 11 ನವೆಂಬರ್ 2021 ರಂದು ನವದೆಹಲಿಯಲ್ಲಿ ನಡೆದ ಕಾರ್ಮಿಕರ ರಾಷ್ಟ್ರೀಯ ಸಮಾವೇಶವು ಘೋಷಿಸಿದ ಸಂಸತ್ತಿನ ಬಜೆಟ್ ಅಧಿವೇಶನದ ವೇಳೆಯಲ್ಲಿ 2 ದಿನಗಳ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರ 23-24 ಫೆಬ್ರವರಿ 2022 ರಂದು ನಡೆಯಲಿದೆ.

ಈ ಸಭೆಯಲ್ಲಿ ಸಂಯುಕ್ತ ಕಿಸಾನ್ ಮೋರ್ಚಾ (ಎಸ್.ಕೆ.ಎಂ.) ನಾಯಕತ್ವದೊಂದಿಗೆ ಸಂಯೋಜಿಸಿ ಪೂರ್ವಸಿದ್ಧತಾ ಸಾರ್ವಜನಿಕ ಸಭೆಗಳನ್ನು ನಡೆಸಲು ನಿರ್ಧರಿಸಲಾಯಿತು, ವಿಶೇಷವಾಗಿ, 2022 ರ ಆರಂಭದಲ್ಲಿ ಚುನಾವಣೆಗೆ ಹೋಗುವ ರಾಜ್ಯಗಳಲ್ಲಿ, ಎಸ್.ಕೆ.ಎಂ.ನ "ಮಿಷನ್ ಉತ್ತರಪ್ರದೇಶ" ಮತ್ತು "ಮಿಷನ್ ಉತ್ತರಾಖಂಡ್" ಕರೆಯನ್ನು ಬಲಪಡಿಸಲು ಸಂಯೋಜನಾ ಸಭೆಗಳನ್ನು ನಡೆಸಲಾಗುವುದು. ಕೃಷಿ ಕಾಯ್ದೆಗಳನ್ನು ರದ್ದುಗೊಳಿಸಿದ ನಂತರ ಎಸ್.ಕೆ.ಎಂ.ನಿರ್ಧರಿಸಿರುವ ಕಾರ್ಯಕ್ರಮಗಳು ಮತ್ತು ಹೋರಾಟಗಳಿಗೆ ತನ್ನ ನಿರಂತರ ಸಕ್ರಿಯ ಬೆಂಬಲವನ್ನು ಜಂಟಿ ವೇದಿಕೆಯು ಪುನರುಚ್ಚರಿಸಿತು.

ಜಂಟಿ ವೇದಿಕೆಯ ರಾಜ್ಯ ಘಟಕಗಳು ವಿವಿಧ ಸ್ವರೂಪಗಳಲ್ಲಿ ಜಂಟಿಯಾಗಿ ತೀವ್ರ ಪ್ರಚಾರವನ್ನು ನಡೆಸುತ್ತವೆ - ಉದಾಹರಣೆಗೆ ರಾಜ್ಯ ಸಮಾವೇಶಗಳು, ಮಾನವ ಸರಪಳಿಗಳು, ಪಂಜಿನ ಮೆರವಣಿಗೆಗಳು, ಸಹಿ ಅಭಿಯಾನಗಳು, ವಲಯ ಮತ್ತು ಪ್ರದೇಶ ಆಧಾರಿತ ಜಂಟಿ ಪ್ರಚಾರಾಂದೋಲನ ಇತ್ಯಾದಿಗಳ ಮೂಲಕ ಸರ್ಕಾರದ ಕಾರ್ಮಿಕ ವಿರೋಧಿ, ರೈತ ವಿರೋಧಿ, ಜನವಿರೋಧಿ, ಕಾರ್ಪೊರೇಟ್ ಪರ ಮತ್ತು ರಾಷ್ಟ್ರ ವಿರೋಧಿ ವಿಧ್ವಂಸಕ ಧೋರಣೆಗಳ ಪರಿಣಾಮಗಳನ್ನು ಬಯಲಿಗೆಳೆಯುತ್ತವೆ.

ಈ ಧೋರಣೆಗಳು ಸಮಸ್ತ ಜನತೆಯ ಜೀವನ ಮತ್ತು ಜೀವನೋಪಾಯಗಳನ್ನು ಮತ್ತು ದೇಶದ ಆರ್ಥಿಕತೆಯನ್ನು ದುರಂತದ ಅಂಚಿಗೆ ತಂದು ನಿಲ್ಲಿಸಿವೆ ಎಂದಿರುವ ಜಂಟಿ ವೇದಿಕೆಯ ಘಟಕಗಳ ಮುತುವರ್ಜಿಯಿಂದ ಈ ಪ್ರಶ್ನೆಗಳ ಮೇಲೆ ಈಗಾಗಲೇ ಅನೇಕ ಹೋರಾಟಗಳು ಮತ್ತು ಆಂದೋಲನಗಳು ಅನೇಕ ಕ್ಷೇತ್ರಗಳಲ್ಲಿ ನಡೆಯುತ್ತಿವೆ. ಬ್ಯಾಂಕ್ ಸಂಘಗಳ ಐಕ್ಯ ವೇದಿಕೆ(ಯುಎಫ್‌ಬಿಯು)ಯ ಡಿಸೆಂಬರ್ 16-17 ರ ಬ್ಯಾಂಕ್‌ಗಳಲ್ಲಿ ಎರಡು ದಿನಗಳ ದೇಶವ್ಯಾಪಿ ಮುಷ್ಕರದ ನಿರ್ಧಾರವನ್ನು ಮತ್ತು 1 ನೇ ಫೆಬ್ರವರಿ 2022 ರಂದು ವಿದ್ಯುತ್ ನೌಕರರ ಜಂಟಿ ವೇದಿಕೆಯ ಮುಷ್ಕರದ ನಿರ್ಧಾರವನ್ನು ಜಂಟಿ ವೇದಿಕೆಯು ಸ್ವಾಗತಿಸಿದೆ ಮತ್ತು ಬೆಂಬಲಿಸಿದೆ. ಇವೆರಡೂ ಖಾಸಗೀಕರಣದ ಕ್ರಮದ ವಿರುದ್ಧ ಮತ್ತು ಆ ದಿಕ್ಕಿನಲ್ಲಿ ಶಾಸಕೀಯ ನಡೆಗಳನ್ನು ವಿರೋಧಿಸುವ ಕಾರ್ಯಾಚರಣೆಗಳು ಎಂದು ಜಂಟಿ ವೇದಿಕೆ ವರ್ಣಿಸಿದೆ.

ಈ ಐಕ್ಯ ಹೋರಾಟವು ಜನರ ಹಕ್ಕುಗಳು ಮತ್ತು ಜೀವನ/ಜೀವನೋಪಾಯಗಳನ್ನು ಉಳಿಸಲು ಮಾತ್ರವಲ್ಲದೆ ದೇಶದ ಅರ್ಥವ್ಯವಸ್ಥೆಯನ್ನು ಮತ್ತು ಇಡೀ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಮತ್ತು ಒಟ್ಟಾರೆಯಾಗಿ ಸಮಾಜವನ್ನು ಆಡಳಿತದಲ್ಲಿರುವ ನಿರಂಕುಶ ಶಕ್ತಿಗಳು ಖಾಸಗಿ ದೇಶೀಯ ಮತ್ತು ವಿದೇಶಿ ಕಾರ್ಪೊರೇಟ್‌ಗಳ ಸಕ್ರಿಯ ಬೆಂಬಲದೊಂದಿಗೆ ಸೃಷ್ಟಿಸಿರುವ ವಿಪತ್ತು ಮತ್ತು ವಿನಾಶದಿಂದ ಉಳಿಸಲಿಕ್ಕಾಗಿ, ಮತ್ತು ವಿನಾಶಕಾರಿ ಧೋರಣೆಗಳ ಆಳ್ವಿಕೆಯನ್ನು ಮತ್ತು ಆಡಳಿತದಲ್ಲಿನ ಅವುಗಳ ರಾಜಕೀಯ ನಿರ್ವಾಹಕರನ್ನು ನಿರ್ಣಾಯಕವಾಗಿ ಸೋಲಿಸಲಿಕ್ಕಾಗಿ ಎಂದಿರುವ ಜಂಟಿ ವೇದಿಕೆ, "ದುರಹಂಕಾರಿ ಮೋದಿ ಸರ್ಕಾರವನ್ನು 3 ಕೃಷಿ ಕಾನೂನುಗಳನ್ನು ರದ್ದುಗೊಳಿಸಲು ಬಲವಂತಪಡಿಸುವ ಮೂಲಕ ರೈತ ಚಳವಳಿ ಐತಿಹಾಸಿಕ ವಿಜಯವನ್ನು ಪಡೆದುಕೊಂಡಿದೆ. ಈಗ ಎಲ್ಲ ದುಡಿಯುವ ಜನ ವಿಭಾಗಗಳು ಜೀವನ ಮತ್ತು ಜೀವನೋಪಾಯ, ಉದ್ಯೋಗ, ಬಡತನ ಮತ್ತು ಹಸಿವಿನ ಆತಂಕಕಾರಿ ತೀವ್ರತೆ, ಪ್ರಜಾಪ್ರಭುತ್ವದ ಮೇಲಿನ ಮತ್ತು ಜನರ ಐಕ್ಯತೆಯ ಮೇಲಿನ ದಾಳಿಗಳ ಪ್ರಕ್ರಿಯೆಯನ್ನು ನಿಲ್ಲಿಸಲು, ಆಮೂಲಕ ನಮ್ಮ ಪ್ರೀತಿಯ ದೇಶವನ್ನು ವಿನಾಶದಿಂದ ಉಳಿಸಲು ತಮ್ಮ ಐಕ್ಯ ಮಧ್ಯಪ್ರವೇಶವನ್ನು ಮತ್ತಷ್ಟು ಹೆಚ್ಚಿಸಬೇಕು" ಎಂದು ಕರೆ ನೀಡಿದೆ.

"ದೇಶದ ಎಲ್ಲ ರಾಜಕೀಯ ಪಕ್ಷಗಳು 'ಎಲ್ಲಾ ನಾಗರಿಕರಿಗೆ ಕೆಲಸದ ಹಕ್ಕು, ಜೀವನ ವೇತನ, ಗುಣಮಟ್ಟದ ಉಚಿತ ಆರೋಗ್ಯ ಪಾಲನೆ ಮತ್ತು ಶಿಕ್ಷಣ-ಸೌಕರ್ಯ ಮತ್ತು ಎಲ್ಲಾ ನ್ಯಾಯಬದ್ಧ ಸಾಂವಿಧಾನಿಕ ಹಕ್ಕುಗಳ ರಕ್ಷಣೆ' ಯನ್ನು ಒಂದು ದೃಢ ಬದ್ಧತೆಯಾಗಿ 2022 ರಲ್ಲಿ ಬರುವ ವಿಧಾನಸಭಾ ಚುನಾವಣೆಗಳು ಮತ್ತು 2024ರಲ್ಲಿ ನಡೆಯಬೇಕಾಗಿರುವ ಚುನಾವಣೆಗಳ ತಮ್ಮ ರಾಜಕೀಯ ಪ್ರಣಾಳಿಕೆಗಳಲ್ಲಿ ಅಳವಡಿಸಬೇಕು ಮತ್ತು ಅವರು ಅಧಿಕಾರಕ್ಕೆ ಬಂದರೆ ತಮ್ಮ ಆಶ್ವಾಸನೆಗಳನ್ನು ಈಡೇರಿಸುವುದಾಗಿ ಮತ್ತು ಕಾರ್ಮಿಕರು, ರೈತರು ಮತ್ತು ದೇಶದ ಎಲ್ಲಾ ಜನರ ಬೇಡಿಕೆಗಳನ್ನು ಬೆಂಬಲಿಸುವುದಾಗಿ ಸಾರ್ವಜನಿಕವಾಗಿ ಪ್ರಮಾಣವಚನ ಸ್ವೀಕರಿಸಬೇಕು ಎಂದು ನಾವು ಒತ್ತಾಯಿಸಬೇಕಾಗಿದೆ..

"ಇತ್ತೀಚಿಗೆ 3 ಕೃಷಿ ಕಾನೂನುಗಳನ್ನು ರದ್ದುಗೊಳಿಸಿರುವುದು ಮತ್ತು ಪೆಟ್ರೋಲ್/ಡೀಸೆಲ್ ಮೇಲಿನ ಕೇಂದ್ರ ತೆರಿಗೆಗಳಲ್ಲಿ ಅಲ್ಪ ಪ್ರಮಾಣದ ಕಡಿತವು ರೈತರ ದೀರ್ಘಾವಧಿಯ ಐಕ್ಯ ದೃಢ ಹೋರಾಟಗಳ ಜೊತೆಗೆ ದುಡಿಯುವ ಜನರು ಮತ್ತು ಜನರ ದೇಶವ್ಯಾಪಿ ಸೌಹಾರ್ದ ಕಾರ್ಯಾಚರಣೆಗಳು ಹಾಗೂ ಹೆಚ್ಚುತ್ತಿರುವ ಜನಾಕ್ರೋಶ ಮತ್ತು ಅಸಂತೋಷವನ್ನು ಕಂಡು ಕೈಗೊಂಡಿರುವ ಕ್ರಮಗಳು. ಇದು ಇತ್ತೀಚಿನ ಉಪಚುನಾವಣೆಯಲ್ಲಿ ಕೇಂದ್ರದಲ್ಲಿ ಆಡಳಿತ ಪಕ್ಷವು ಎದುರಿಸಿದ ಸೋಲಿನ ಪ್ರತಿಫಲನ ಮತ್ತು ಪ್ರತಿಕ್ರಿಯೆಯಾಗಿದೆ. ಆದ್ದರಿಂದ, ಜನವಿರೋಧಿ ನೀತಿಗಳು ಮತ್ತು ಆಳ್ವಿಕೆಯನ್ನು ಎದುರಿಸುವ ಮತ್ತು ಸೋಲಿಸುವ ದೃಢನಿರ್ಧಾರದ ಐಕ್ಯ ಹೋರಾಟವನ್ನು ತೀವ್ರಗೊಳಿಸುವುದು ನಮ್ಮ ಮುಂದಿರುವ ಮಾರ್ಗವಾಗಿದೆ" ಎನ್ನುತ್ತ ಮುಂಬರುವ ಎರಡು ದಿನಗಳ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರ ಆ ಸಂಕಲ್ಪವನ್ನು ಪ್ರದರ್ಶಿಸಲಿ" ಎಂದು ಜಂಟಿ ವೇದಿಕೆ ಹಾರೈಸಿದೆ.

ವಿಶೇಷವಾಗಿ ಈ ಕೆಳಗಿನ ಹಕ್ಕೊತ್ತಾಯಗಳನ್ನು ಜಂಟಿ ವೇದಿಕೆ ಪುನರುಚ್ಚರಿಸಿದೆ:

- ಕಾರ್ಮಿಕ ಸಂಹಿತೆಗಳನ್ನು ರದ್ದುಗೊಳಿಸಬೇಕು; ಅಗತ್ಯ ರಕ್ಷಣಾ ಸೇವೆಗಳ ಕಾಯ್ದೆಯನ್ನು ರದ್ದುಗೊಳಿಸಬೇಕು;
- ಕೃಷಿ ಕಾನೂನುಗಳನ್ನು ರದ್ದುಪಡಿಸಿದ ನಂತರ ಸಂಯುಕ್ತ ಕಿಸಾನ್ ಮೋರ್ಚಾ ಮುಂದಿಟ್ಟಿರುವ 6 ಬೇಡಿಕೆಗಳನ್ನು ಸ್ವೀಕರಿಸಬೇಕು;
- ಯಾವುದೇ ರೂಪದಲ್ಲಿ ಖಾಸಗೀಕರಣ ಬೇಡ ಮತ್ತು ಎ???.ಎಂ.ಪಿ.(ನಗದೀಕರಣ ಯೋಜನೆ) ರದ್ದಾಗಬೇಕು.
- ಆದಾಯ ತೆರಿಗೆ ವ್ಯಾಪ್ತಿಯ ಹೊರಗಿರುವ ಕುಟುಂಬಗಳಿಗೆ ತಿಂಗಳಿಗೆ ರೂ 7500 ಆದಾಯ ಮತ್ತು ಆಹಾರ ಬೆಂಬಲ;
- ಮನರೇಗ ಕ್ಕೆ ಹಣ ನೀಡಿಕೆಯಲ್ಲಿ ಹೆಚ್ಚಳ ಮತ್ತು ನಗರ ಪ್ರದೇಶಗಳಿಗೆ ಉದ್ಯೋಗ ಖಾತರಿ ಯೋಜನೆಯ ವಿಸ್ತರಣೆ ಮಾಡಬೇಕು;
- ಎಲ್ಲಾ ಅನೌಪಚಾರಿಕ ವಲಯದ ಕಾರ್ಮಿಕರಿಗೆ ಸಾರ್ವತ್ರಿಕ ಸಾಮಾಜಿಕ ಭದ್ರತೆ;
- ಅಂಗನವಾಡಿ, ಆಶಾ, ಮಧ್ಯಾಹ್ನದ ಊಟ ಮತ್ತು ಇತರ ಯೋಜನಾ ಕಾರ್ಯಕರ್ತರಿಗೆ ಶಾಸನಬದ್ಧ ಕನಿಷ್ಠ ವೇತನ ಮತ್ತು ಸಾಮಾಜಿಕ ಭದ್ರತೆ;
- ಸಾಂಕ್ರಾಮಿಕದ ಮಧ್ಯೆ ಜನರಿಗೆ ಸೇವೆ ಸಲ್ಲಿಸುತ್ತಿರುವ ಮುಂಚೂಣಿಯ ಕಾರ್ಯಕರ್ತರಿಗೆ ಸರಿಯಾದ ರಕ್ಷಣೆ ಮತ್ತು ವಿಮಾ ಸೌಲಭ್ಯಗಳು;
- ರಾಷ್ಟ್ರೀಯ ಅರ್ಥವ್ಯವಸ್ಥೆಯನ್ನು ಪುನರುಜ್ಜೀವನ ಮತ್ತು ಪುನರ್ ವ್ಯವಸ್ಥೆಗೊಳಿಸಲಿಕ್ಕಾಗಿ ಸಂಪತ್ತು ತೆರಿಗೆ ಇತ್ಯಾದಿಗಳ ಮೂಲಕ ಶ್ರೀಮಂತರಿಗೆ ತೆರಿಗೆ ವಿಧಿಸಿ ಕೃಷಿ, ಶಿಕ್ಷಣ, ಆರೋಗ್ಯ ಮತ್ತು ಇತರ ಮಹತ್ವದ ಸಾರ್ವಜನಿಕ ಉಪಯುಕ್ತತೆಗಳಲ್ಲಿ ಸಾರ್ವಜನಿಕ ಹೂಡಿಕೆಯ ಹೆಚ್ಚಳ;
- ಪೆಟ್ರೋಲಿಯಂ ಉತ್ಪನ್ನದ ಮೇಲಿನ ಕೇಂದ್ರ ಅಬಕಾರಿ ಸುಂಕದಲ್ಲಿ ಗಣನೀಯ ಕಡಿತ ಮತ್ತು ಬೆಲೆ ಏರಿಕೆಯನ್ನು ತಡೆಯಲು ಮೂರ್ತ ಸರಿಪಡಿಕೆ ಕ್ರಮ;
- ಗುತ್ತಿಗೆ ಕಾರ್ಮಿಕರು, ಸ್ಕೀಮ್ ಕಾರ್ಮಿಕರನ್ನು ಖಾಯಂಗೊಳಿಸಬೇಕು ಮತ್ತು ಎಲ್ಲರಿಗೂ ಸಮಾನ ಕೆಲಸಕ್ಕೆ ಸಮಾನ ವೇತನ ದೊರಕಬೇಕು;
- ರಾಷ್ಟ್ರೀಯ ಪಿಂಚಣಿ ಯೋಜನೆ(ಎನ್.ಪಿ.ಎಸ್.) ರದ್ದತಿ ಮತ್ತು ಹಳೆಯ ಪಿಂಚಣಿ ವ್ಯವಸ್ಥೆಯ ಮರುಸ್ಥಾಪನೆಯಾಗಬೇಕು; ನೌಕರರ ಪಿಂಚಣಿ ಯೋಜನೆಯಡಿ ಕನಿಷ್ಠ ಪಿಂಚಣಿಯಲ್ಲಿ ಗಣನೀಯ ಹೆಚ್ಚಳವಾಗಬೇಕು.

ಈ ಆಗ್ರಹಗಳು ಮತ್ತು ಈಗಾಗಲೇ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ಒಕ್ಕೂಟಗಳು/ಸಂಘಗಳ ಜಂಟಿ ವೇದಿಕೆ ರೂಪೀಕರಿಸಿರುವ ಇತರ ಬೇಡಿಕೆಗಳ ಮೇಲೆ ಐಕ್ಯ ಹೋರಾಟವನ್ನು ತೀಕ್ಷ್ಣಗೊಳಿಸಲು, ಹಾಗೂ ಜನರನ್ನು ಉಳಿಸಲು ಮತ್ತು ದೇಶವನ್ನು ಉಳಿಸಲು ಸಂಸತ್ತಿನ ಬಜೆಟ್ ಅಧಿವೇಶನದ ವೇಳೆ 23-24 ಫೆಬ್ರವರಿ 2022 ರ 2-ದಿನಗಳ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಸಿದ್ಧತೆ ಆರಂಭಿಸಬೇಕು ಎಂದು ಜಂಟಿ ವೇದಿಕೆಯಲ್ಲಿರುವ ಐಎನ್‌ಟಿಯು.ಸಿ., ಎಐಟಿಯುಸಿ, ಎಚ್‌ಎಂಎಸ್, ಸಿಐಟಿಯು, ಎಐಯುಟಿಯುಸಿ, ಟಿಯುಸಿ., ಎಸ್‌ಇಡಬ್ಲ್ಯು.ಎ., ಎಐಸಿಸಿಟಿಯು., ಎಲ್‌ಪಿಎಫ್ ಮತ್ತು ಯುಟಿಯುಸಿ ಕರೆ ನೀಡಿವೆ.

ಕಾಂ. ಶಾಮ ಪ್ರಸಾದ್ ಕೇಸರ್

ಸಿಪಿಐ(ಎಂ)ನ ಜಮ್ಮು ಮತ್ತು ಕಾಶ್ಮೀರ ರಾಜ್ಯ ಸಮಿತಿಯ ಸದಸ್ಯ ಮತ್ತು ಜಮ್ಮು ಪ್ರಾದೇಶಿಕ ಸಮಿತಿಯ ಕಾರ್ಯದರ್ಶಿ ಕಾಂ.ಶಾಮ ಪ್ರಸಾದ್ ಕೇಸರ್ ಡಿಸೆಂಬರ್ 5ರಂದು ಕತ್ರಾದಲ್ಲಿ ನಿಧನರಾಗಿದ್ದಾರೆ. ಅವರ ಅಗಲಿಕೆಗೆ ರಾಜ್ಯದ ಹಿರಿಯ ಸಿಪಿಐ(ಎಂ) ಮುಖಂಡ ಮಹಮ್ಮದ್ ಯುಸುಫ್ ತರಿಗಾಮಿ ದುಃಖ ಮತ್ತು ಸಂತಾಪ ವ್ಯಕ್ತಪಡಿಸಿದ್ದಾರೆ.



ತಮ್ಮ ಜೀವನದುದ್ದಕ್ಕೂ ಇವರು ಕಾರ್ಮಿಕ ವರ್ಗದ ಹಕ್ಕುಗಳ ಹೋರಾಟಕ್ಕೆ ಕಟಿಬದ್ಧರಾಗಿದ್ದವರು. ಜಮ್ಮು ಪ್ರದೇಶದಲ್ಲಿ ಕೋಮು ಸೌಹಾರ್ದ ಮತ್ತು ಸೋದರತ್ವಕ್ಕಾಗಿ ಅವರ ನಿರಂತರ ಹೋರಾಟದಿಂದಾಗಿ ಎಲ್ಲರ ಗೌರವಕ್ಕೆ ಪಾತ್ರರಾಗಿದ್ದ ಮುಖಂಡರು. ಅವರು ಎಂದಿಗೂ ವಿಭಜನಕಾರಿ ಶಕ್ತಿಗಳ ಒತ್ತಡಕ್ಕೆ ತಲೆಬಾಗಲಿಲ್ಲ ಎಂದು ಸಿಪಿಐ(ಎಂ) ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತ ಹೇಳಿದೆ.



ವಸಂತರಾಜ್ ಎನ್.ಕೆ.

ಹೊಂಡುರಸ್ ನಲ್ಲಿ ಮಹಿಳಾ ಎಡ ಅಧ್ಯಕ್ಷರ ಆಯ್ಕೆ ಲ್ಯಾಟಿನ್ ಅಮೆರಿಕದಲ್ಲಿ ಮತ್ತೆ ಎಳೆಗೆಂಪು ಅಲೆಬೀಸುತ್ತಿದೆ



ದಕ್ಷಿಣ ಅಮೆರಿಕದಲ್ಲಿ ಇನ್ನೊಂದು ದೇಶದಲ್ಲಿ ಮತ್ತೆ ಎಡ–ಪ್ರಗತಿಪರ ಶಕ್ತಿಗಳು ಜಯಸಾಧಿಸಿವೆ. ನವೆಂಬರ ಕೊನೆಯಲ್ಲಿ ನಡೆದ ಅಧ್ಯ ಕ್ಷೀಯ ಚುನಾವಣೆಯಲ್ಲಿ ಲಿಬರ್ (ಲಿಬರ್ಟಿ ಮತ್ತು ರಿಫೌಂಡೇಶನ್) ಪಾರ್ಟಿಯ ಅಭ್ಯರ್ಥಿ ಕ್ಸಿಯೊಮಾರ ಕಾಸ್ಟ್ರೋ, ಆಳುವ ಬಲಪಂಥೀಯ ಪಕ್ಷ ನೇಶನಲ್ ಪಾರ್ಟಿಯ ಅಭ್ಯರ್ಥಿ ನಸ್ರಿ ಅಸ್ಫುರ ಅವರನ್ನು ಭಾರೀ ಅಂತರದೊಂದಿಗೆ ನಿರ್ಣಾಯಕವಾಗಿ ಸೋಲಿಸಿದ್ದಾರೆ. ಕಾಸ್ಟ್ರೋ ಶೇ.53.6 ಮತಗಳಿಸಿ ನಿಚ್ಚಳ ಬಹುಮತ ಪಡೆದಿದ್ದು, ಅಸ್ಫುಲರಾ ಕ್ಕಿಂತ ಶೇ.20 ರಷ್ಟು ಅಂತರ ಕಾಯ್ದುಕೊಂಡಿದ್ದರು. ಈ ವಿಜಯ ಹಲವು ಮಗ್ಗುಲುಗಳಿಂದ ಗಮನಾರ್ಹವಾದದ್ದು. ಕ್ಸಿಯೊಮಾರ ಕಾಸ್ಟ್ರೋ ಹೊಂಡುರಸ್ ನ ಮೊದಲ ಮಹಿಳಾ ಅಧ್ಯಕ್ಷರು. ಮಾತ್ರವಲ್ಲದೆ ಲ್ಯಾಟಿನ್ ಅಮೆರಿಕನ್ ಖಂಡದಲ್ಲೇ ಅಪರೂಪದ ವಿದ್ಯಮಾನ.

ಅಧ್ಯಕ್ಷರಾಗಿ 2005ರಲ್ಲಿ ಚುನಾಯಿತರಾಗಿದ್ದ ಕ್ಸಿಯೊಮಾರ ಅವರ ಪತಿ ಮನುಯೆಲ್ಜೆಲಯ ಅವರನ್ನು 2009 ರಲ್ಲಿ ಯು.ಎಸ್. ಬೆಂಬಲಿತ ಮಿಲಿಟರಿ ಕ್ಷಿಪ್ರಕ್ರಾಂತಿಯಲ್ಲಿ ಪದಚ್ಯುತಗೊಳಿಸಲಾಗಿತ್ತು. ಆಗಿನಿಂದ ಹನ್ನೆರಡು ವರ್ಷಗಳ ಕಾಲ, ಮಿಲಿಟರಿಯ ಮತ್ತು ಅದು ಹೊರಿಸಿದ ಬಲಪಂಥೀಯ ಅಧ್ಯಕ್ಷರು ಹಿಂಸಾತ್ಮಕ ದಮನಗಳ ಮೂಲಕ ಆಡಳಿತ ನಡೆಸಿದ್ದರು. ಮಿಲಿಟರಿ ಕ್ಷಿಪ್ರಕ್ರಾಂತಿಯಾದ ಕೇವಲ ಐದು ತಿಂಗಳುಗಳಲ್ಲಿ 270 ಮಾನವ ಹಕ್ಕುಗಳ ತೀವ್ರ ಉಲ್ಲಂಘನೆಯಾಗಿತ್ತು. ಇನ್ನೊಂದು ಅಧ್ಯಕ್ಷರ ಮೊದಲ ತಿಂಗಳುಗಳಲ್ಲೇ 36 ರಾಜಕೀಯ ಕೊಲೆಗಳು, ರಾಜಕೀಯ ಹಿಂಸಾಚಾರದಲ್ಲಿ 50ಕ್ಕೂ ಹೆಚ್ಚು ಸಾವುಗಳ ಸಂಭವಿಸಿದ್ದವು. ಇದರ ವಿರುದ್ಧ, ಎಲ್ಲ ಎಡಪ್ರಜಾಸತ್ತಾತ್ಮಕ ಶಕ್ತಿಗಳ ಹೋರಾಟ ಕೊನೆಗೂ ಗೆದ್ದಿದೆ. ಬೊಲಿವಿಯ ನಂತರ ಒಂದು ವರ್ಷದ ಒಳಗೆಯು. ಎಸ್. ಬೆಂಬಲಿ ತ ಮಿಲಿಟರಿ ಕ್ಷಿಪ್ರಕ್ರಾಂತಿಯನ್ನು ಚುನಾವಣೆಗಳ ಮೂಲಕ ಪ್ರಜಾಸತ್ತಾತ್ಮಕವಾಗಿಯೇ ಸೋಲಿಸಿರುವ ಎರಡನೆಯ ದೇಶವಾಗಿ ಹೊಂಡುರಾಸ್ ಹೊಮ್ಮಿದೆ. ಯು. ಎಸ್. ಬೆಂಬಲಿತ ಮಿಲಿಟರಿ ಕ್ಷಿಪ್ರಕ್ರಾಂತಿಯನ್ನು ಚುನಾವಣೆಗಳ ಮೂಲಕ ಹಿಮ್ಮೆಟ್ಟಿಸಲಾಯಿತಾದರೂ, ಅದರ ಹಿಂದೆ ಈ ಸರಕಾರಗಳನ್ನು ಬೇಕಾಬಿಟ್ಟಿ ಆಡಳಿತ ನಡೆಸಲು ಬಿಡದ ದುಡಿಯುವ ಜನರ ಮತ್ತು ಜನಸಂಘಟನೆಗಳ ಸಾಮೂಹಿಕ ಶಕ್ತಿ, ತೀವ್ರ ಪ್ರತಿರೋಧಗಳೂ ಇದ್ದವು. ಹಿಂದೆ ವೆನೆಜುವೇಲಾದಲ್ಲಿ ಚುನಾಯಿತ ಸರಕಾರ ಉರುಳಿಸುವ ಇಂತಹ ಪ್ರಯತ್ನಗಳನ್ನು ಯು.ಎಸ್. ಬೆಂಬಲದೊಂದಿಗೆ ಹಲವು ಬಾರಿ ಮಾಡಲಾಗಿದೆ. ಅರ್ಜೆಂಟಿನ, ಚಿಲಿಗಳ ನಂತರ ಈಗ ಹೊಂಡುರಸ್ ನಲ್ಲಿ ಎಡಶಕ್ತಿಗಳು ಚುನಾವಣಾ ವಿಜಯಸಾಧಿಸಿ ಬಲಪಂಥೀಯ ಶಕ್ತಿಗಳನ್ನು ನಿರ್ಣಾಯಕವಾಗಿ ಸೋಲಿಸಿವೆ. 1990ರ ಕೊನೆಯಿಂದ ಸುಮಾರು ಒಂದು ದಶಕಗಳ ಕಾಲ ಬೀಸಿದ್ದ ಎಡಶಕ್ತಿಗಳ ವಿಜಯದ 'ಎಳೆ ಗೆಂಪು ಅಲೆ' ಮತ್ತೆ ಬೀಸುತ್ತಿರುವಂತೆ ಕಾಣುತ್ತಿದೆ.

ನವ ಅಧ್ಯಕ್ಷರಾದ ಕಾಸ್ಟ್ರೋ ದೇಶದ ರಾಷ್ಟ್ರೀಯ ಸಾರ್ವಭೌಮತೆಯನ್ನು ಎತ್ತಿಹಿಡಿಯುವುದು, ಸಾಮಾಜಿಕ ನ್ಯಾಯ ಒದಗಿಸುವುದು, ಪ್ರಾದೇಶಿಕ ಸಹಕಾರ ಆಧಾರಿತ ಆರ್ಥಿಕ ಬೆಳವಣಿಗೆಯ ನೀತಿಗಳನ್ನು ಮತ್ತೆ ಜಾರಿಗೆ ತರುವುದು ತಮ್ಮ ಆಧ್ಯತೆ ಎಂದಿದ್ದಾರೆ. ತಮ್ಮ ಪತಿ 2005–09 ಅವಧಿಯಲ್ಲಿ ಕೈಗೊಂಡ ಪ್ರಗತಿ ಪರ ಕ್ರಮಗಳನ್ನು ಮತ್ತೆ ಜಾರಿಗೆ ತರುವುದುದಾಗಿ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿದ್ದಾರೆ. ಜೆಲಯ ಕನಿಷ್ಠ ವೇತನವನ್ನು ಇಮ್ಮಡಿಗೊಳಿಸಿದ್ದರು. 16 ಲಕ್ಷ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ, ಉಚಿತ ಶಿಕ್ಷಣವನ್ನು ಖಾತ್ರಿಗೊಳಿಸಲಾಗಿತ್ತು. ಭೂಸುಧಾರಣಾ ಕ್ರಮಗಳನ್ನು ಕೈಗೊಂಡು ಕೃಷಿ ಉತ್ಪಾದನೆ ಮತ್ತು ರಫ್ತು ಹೆಚ್ಚಿಸಿದ್ದರು. ಕ್ಯೂಬಾದ ಡಾಕ್ಟರುಗಳ ಆಧಾರಿತ ಉಚಿತ ಆರೋಗ್ಯ ಸೇವೆಯನ್ನು ಖಾತ್ರಿಗೊಳಿಸಿದ್ದರು. ದೇಶದ ಬಡತನ ಶೇ.10 ರಷ್ಟು ಕಡಿಮೆಯಾಗಿತ್ತು. ಸೊಟೊಕಾನೊದಲ್ಲಿನ ಯು.ಎಸ್. ಮಿಲಿಟರಿ ನೆಲೆಯನ್ನು ಮುಚ್ಚಿದ್ದರು. ಕ್ಯೂಬಾ, ವೆನೆಜುವೇಲಾ ನಾಯತ್ವದ ಲ್ಯಾಟಿನ್ ಅಮೆರಿಕ ದೇಶಗಳ ಸಹಕಾರಿ ಸಂಘಟನೆ ಅಲ್ಬಾದ ಸದಸ್ಯ ದೇಶವಾಗಿ ಕಡಿಮೆ ಬೆಲೆಯ ತೈಲ ಮತ್ತು ಅಭಿವೃದ್ಧಿ ನೆರವು ಪಡೆದಿತ್ತು. ಆ ಮೇಲೆ 12 ವರ್ಷಗಳ ಮಿಲಿಟರಿ ಬಲಪಂಥೀಯ ಆಡಳಿತದಲ್ಲಿ ಹೆಚ್ಚಿನ ಈ ನೀತಿಗಳನ್ನು ಬದಲಾಯಿಸಲಾಗಿತ್ತು. ಈ ನೀತಿಗಳನ್ನು ಮತ್ತೆ ತರುವುದಾಗಿ ಕಾಸ್ಟ್ರೋ ಘೋಷಿಸಿದ್ದಾರೆ.

ಈ 12 ವರ್ಷಗಳಲ್ಲಿ ಬಲಪಂಥೀಯ ಆಡಳಿತದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿತ್ತು. ಈ ಅವಧಿಯೆ ಎಲ್ಲ ಅಧ್ಯ ಕ್ಷರುಗಳು ಮತ್ತು ಪ್ರಮುಖ ಸಚಿವರ ವಿರುದ್ಧ ಸಾರ್ವಜನಿಕ ಹಣಕಾಸು ದುರುಪಯೋಗ, ಮಾದಕ ದ್ರವ್ಯ ವ್ಯಾಪಾರಕ್ಕೆ ರಕ್ಷಣೆ ಕೊಟ್ಟ ಕುರಿತು ಯು.ಎಸ್. ಆಡಳಿತ ಹಲವು ಪ್ರಕರಣಗಳನ್ನು ದಾಖಲಿಸಿದೆ. ಇದನ್ನು ತೊಡೆದು ಹಾಕಲು ವಿಶ್ವಸಂಸ್ಥೆ ಆಧಾರಿತ ಭ್ರಷ್ಟಾಚಾರ–ನಿಗ್ರಹ ಕಮಿಶನ್ ಮತ್ತು ಭ್ರಷ್ಟಾಚಾರಕ್ಕೆ ಅವಕಾಶ ಕೊಡುವ ಕಾನೂನುಗಳನ್ನು ರದ್ದು ಮಾಡುವುದಾಗಿಯೂ ಅವರು ಘೋಷಿಸಿದ್ದಾರೆ. ಯು.ಎಸ್ ಒತ್ತಡದಲ್ಲಿ ಹಿಂದಿನ ಸರಕಾರ ತೈವಾನ್ ಕೊಟ್ಟ ರಾಜತಾಂತ್ರಿಕ ಮನ್ನಣೆಯನ್ನು ಹಿಂತೆಗೆಯುವುದಾಗಿ ಹೇಳಿದ್ದಾರೆ. ಜನಪಾಲುಗೊಳ್ಳುವ ಪ್ರಜಾಸತ್ತೆ ಸ್ಥಾಪಿಸಲು ಅಗತ್ಯ ಸಂವಿಧಾನ ತಿದ್ದುಪಡಿ ತರುವುದು, ಗರ್ಭಪಾತದ ಅಪರಾಧೀಕರಣವನ್ನು ತೊಡೆಯುವುದು ಅವರು ಸೂಚಿಸಿರುವ ಇತರ ಕ್ರಮಗಳು. ಹಿಂದಿನ ಹಲವು ಚುನಾವಣೆಗಳಲ್ಲೂ ತೀವ್ರ ಅಕ್ರಮಗಳಾಗಿದ್ದು, ಬಲಪಂಥೀಯರು ಈ ಅಕ್ರಮಗಳ ಮೂಲಕವೇ ಜಯಗಳಿಸಿ ಅಧಿಕಾರದಲ್ಲಿ ಇದ್ದರು.



ಮಂಗಳೂರು, ಕುಂದಾಪುರ, ಬ್ರಹ್ಮಾವರಗಳಲ್ಲಿ ಕಟ್ಟಡ ಕಾರ್ಮಿಕರ ಧರಣಿ

ವರದಿ: ವಾ. ಉಚ್ಚಿಲ್

ಲಾಕ್‌ಡೌನ್ ಸಂದರ್ಭ ಕಟ್ಟಡ ಕಾರ್ಮಿಕರಿಗೆ ಸರಕಾರ ಘೋಷಿಸಿದ್ದ ರೂ.3,000 ಪರಿಹಾರ ಧನ, ಕಾರ್ಮಿಕರ ಮಕ್ಕಳ ಶೈಕ್ಷಣಿಕ ಅರ್ಜಿಗಳನ್ನು ಮಂಜೂರು ಮಾಡಿ ಪಾವತಿಸಬೇಕೆಂದು ಹಾಗೂ ಇತರ ಬೇಡಿಕೆಗಳನ್ನು ಮುಂದಿಟ್ಟು ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರು 2021 ಡಿಸೆಂಬರ್ 2 ರಂದು ರಾಜ್ಯಾದ್ಯಂತ ಹಮ್ಮಿಕೊಂಡ ಪ್ರತಿಭಟನೆಯ ಭಾಗವಾಗಿ, ಮಂಗಳೂರು ಮತ್ತು ಕುಂದಾಪುರದಲ್ಲೂ ಪ್ರತಿಭಟನಾ ಪ್ರದರ್ಶನಗಳನ್ನು ಹಮ್ಮಿಕೊಳ್ಳಲಾಯಿತು.

ಮಂಗಳೂರಿನಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಶನ್ ವತಿಯಿಂದ ಮಂಗಳೂರು ಸಹಾಯಕ ಕಾರ್ಮಿಕ ಆಯುಕ್ತರ ಕಚೇರಿಯ ಮುಂದೆ ನಡೆದ ಪ್ರತಿಭಟನೆಯನ್ನು ಸಿಐಟಿಯು ದ.ಕ. ಜಿಲ್ಲಾಧ್ಯಕ್ಷ ಜೆ. ಬಾಲಕೃಷ್ಣ ಶೆಟ್ಟಿ ಉದ್ಘಾಟಿಸಿ ಮಾತನಾಡಿದರು. ಫೆಡರೇಶನ್ನಿನ ದ.ಕ. ಜಿಲ್ಲಾಧ್ಯಕ್ಷ ವಸಂತ ಆಚಾರಿ ಮಾತನಾಡಿ, ದ.ಕ.ಜಿಲ್ಲೆಯಲ್ಲಿ 2018, 2019, 2020ರ ಕಟ್ಟಡ ಕಾರ್ಮಿಕರ ಸವಲತ್ತುಗಳು ಪಾವತಿಯಾಗದೆ ಉಳಿದಿದ್ದು, ಇಲಾಖೆಯ ಅಧಿಕಾರಿಗಳು ಶೀಘ್ರ ಮಧ್ಯೆ ಪ್ರವೇಶಿಸಿ ಬೇಡಿಕೆ ಅರ್ಜಿಗಳನ್ನು ವಿಲೇವಾರಿ ಮಾಡಬೇಕೆಂದು ಆಗ್ರಹಿಸಿದರು. ಫೆಡರೇಶನ್ನಿನ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯು.ಜಯಂತ ನಾಯ್ಕ್ ಕೂಡಾ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು. ಫೆಡರೇಶನ್ನಿನ ಮುಂದಾಳುಗಳಾದ ಜನಾರ್ಧನ ಕುತ್ತಾರ್, ದಿನೇಶ್ ಶೆಟ್ಟಿ, ವಸಂತಿ, ನೋಣಯ್ಯ ಗೌಡ, ಕೃಷ್ಣಪ್ಪ ಮೂಡಬಿದರೆ, ಮೋಹನ್ ಜಲ್ಲಿಗುಡ್ಡೆ, ತಿಮ್ಮಣ್ಣ ಕೊಂಚಾಡಿ, ರವಿಚಂದ್ರ ಕೊಂಚಾಡಿ, ಅಶೋಕ್ ಶ್ರೀಯಾನ್ ಮೊದಲಾದವರು ಭಾಗವಹಿಸಿದ್ದರು.

ಕುಂದಾಪುರ ತಾಲೂಕು ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಸಂಘದ ನೇತೃತ್ವದಲ್ಲಿ ಕುಂದಾಪುರ ಕಾರ್ಮಿಕ ನಿರೀಕ್ಷಕರ ಕಚೇರಿ ಎದುರು ನಡೆದ ಪ್ರದರ್ಶನವನ್ನುದ್ದೇಶಿಸಿ ಸಂಘದ ಪ್ರಧಾನ ಕಾರ್ಯದರ್ಶಿ ಸುರೇಶ್ ಕಲ್ಲಾಗರ, ತಾಲೂಕು ಸಂಚಾಲಕ ಎಚ್.ನರಸಿಂಹ ಮತ್ತಿತರರು ಉಪಸ್ಥಿತರಿದ್ದರು.

ಬ್ರಹ್ಮಾವರ ಪ್ರದೇಶ ಕಟ್ಟಡ ಕಾರ್ಮಿಕ ಸಂಘದ ವತಿಯಿಂದ ಡಿಸೆಂಬರ 4 ರಂದು ಬ್ರಹ್ಮಾವರ ತಾಲೂಕು ಕಚೇರಿ ಎದುರು ಪ್ರತಿಭಟನಾ ಪ್ರದರ್ಶನವನ್ನು ನಡೆಸಿ ಮನವಿ ಸಲ್ಲಿಸಲಾಯಿತು. ಉಡುಪಿ ಜಿಲ್ಲಾ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಸಂಘದ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ಮುಖಂಡರಾದ ಸುಭಾಶ್ ನಾಯಕ್, ಶಶಿಧರ ಗೊಲ್ಲ, ರಾಮ ಕರ್ಕಡ ಹಾಗೂ ತಾಲೂಕು ಸಮಿತಿ ಮುಖಂಡರು ಪ್ರತಿಭಟನಾ ಧರಣಿಯಲ್ಲಿ ಭಾಗವಹಿಸಿದ್ದರು.



ಕನ್ನಡ ವಿಶ್ವವಿದ್ಯಾಲಯ ಉಳಿಸೋಣ

ಬೆಂಗಳೂರಿನ ಜೈಭೀಮ್ ಭವನದಲ್ಲಿ "ಕನ್ನಡ ವಿಶ್ವವಿದ್ಯಾಲಯದ ಉಳಿವಿಗಾಗಿ ಹಾಗೂ ವಿವಿಯ ಮೂಲ ಆಶೋತ್ತರಗಳನ್ನು ರಕ್ಷಿಸಲು ನಾಡಿನ ಹೆಸರಾಂತ ಕವಿಗಳು, ಲೇಖಕರು, ಚಿಂತಕರು, ವಿವಿದ ಸಂಘಟನೆಯ ನಾಯಕರು ಭಾಗಿಯಾಗಿ ಶಕ್ತಿಯನ್ನು ತುಂಬಿ ಪ್ರತ್ಯಕ್ಷ & ಪರೋಕ್ಷವಾಗಿ ವಿವಿ & ವಿದ್ಯಾರ್ಥಿಗಳ ಬೆಂಬಲಕ್ಕೆ ನಿಂತರು.

ಕನ್ನಡ ವಿವಿ ಕನ್ನಡ ನಾಡಿನ ಧ್ವನಿಯಾಗಬೇಕಿದ್ದ ಸಂದರ್ಭದಲ್ಲಿ ಹೊಸ ಹೊಸ ಆಡಳಿತಾತ್ಮಕ ದೋಷಗಳಿಗೆ ಬಲಿಯಾಗುತ್ತಿದೆ. ಹಸಿದವರ, ದಲಿತರ, ಶೋಷಿತರ ಹಾಗೂ ಧ್ವನಿ ಇಲ್ಲದವರ ಧ್ವನಿಯಂತಿರುವ ಕನ್ನಡ ವಿಶ್ವವಿದ್ಯಾಲಯ ಹಳಿತಪ್ಪಿ ಅದರ ವಿರುದ್ಧದ ದಿಕ್ಕಿನಲ್ಲಿ ಸಾಗಿ ಭ್ರಷ್ಟಾಚಾರ, ಕಮಿಷನ್, ಪೋಲಿಸ್ ಕೇಸು, ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ಧಕ್ಕೆ, ವೈಯಕ್ತಿಕ ನಿಂದನೆ ಹೀಗೆ ಅನೇಕ ರೀತಿಯ ಸಮಸ್ಯೆಗಳ ತಾಣವಾಗಿದೆ.

ನೆಮ್ಮದಿಯಿಂದ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ಮಾಡಬೇಕಾದವರು ಇಂದು ಭಯಪಡುವ, ಕದ್ದು ಆಲಿಸುವ ಅನುಮಾನಗಳಿಗೆ ಹಾಗೂ ಪ್ರತಿ ನಿತ್ಯ ಧಾರವಾಹಿಯಂತೆ ಪತ್ರಿಕೆಯಲ್ಲಿ ಪ್ರಸಾವಾಗುತ್ತಿರುವುದು ನಿಜಕ್ಕೂ ಎಲ್ಲಾರು ಇದ್ದು ಯಾರೂ ಇಲ್ಲದಂತೆ ಭಾಸವಾಗುತ್ತಿದೆ. ಇದೆಲ್ಲದರ ಭಾಗವೆಂಬಂತೆ ಒಟ್ಟು ಕನ್ನಡ ವಿಶ್ವವಿದ್ಯಾಲಯದ ಉಳಿವಿಗಾಗಿ ಸತ್ಯಶೋಧನಾ ಸಮಿತಿ ರಚಿಸಿ ತನಿಖೆಗೆ ಆಗ್ರಹಿಸಲು ಇಂದು ನಾಡಿನ ಕವಿಗಳು ಸಾಹಿತಿಗಳು ಚಿಂತಕರು ಲೇಖಕರು ಹಲವು ಸಂಘಟನೆಯ ನಾಯಕರು ದುಂಡುಮೇಜಿನ ಸಭೆ ಸೇರಿತು.

ಬಂಜಗೆರೆ ಜಯಪ್ರಕಾಶ್, ಎಸ್.ಜಿ. ಸಿದ್ದರಾಮಯ್ಯ, ಪ್ರೊ. ಚಂದ್ರ ಪೂಜಾರ್, ಕೆ. ಪ್ರಕಾಶ್, ವಸುಂಧರಾ ಭೂಪತಿ, ಬಿ.ಟಿ. ಲಲಿತಾ ನಾಯಕ್, ಕೆ. ಶರೀಫ, ಎಸ್.ವೈ. ಗುರುಶಾಂತ್, ಗೋಪಾಲಕೃಷ್ಣ ಅರಳಹಳ್ಳಿ, ರಾಜಣ್ಣ, ಅಮರೇಶ ಕಡಗದ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.

ಹಲವು ಸಂಘಟನೆಗಳು ಹಾಗೂ ಪ್ರಮುಖ ವ್ಯಕ್ತಿಗಳಿಗೆ ಭಾಗವಹಿಸಲು ಸಾಧ್ಯವಾಗದೆ ಪರೋಕ್ಷವಾಗಿ ಬೆಂಬಲಿಸಿ ಮುಂದಿನ ದಿನಗಳಲ್ಲಿ ನಮ್ಮೊಂದಿಗೆ ಇರುವುದಾಗಿ ತಿಳಿಸಿದರು.

JANASHAKTHI KANNADA VARA PATRIKE DECEMBER 13-19, 2021 Price: Rs. 10/- Date of Publication: 10 DECEMBER 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

ಪ್ರಜಾಪ್ರಭುತ್ವದ ದೇಗುವವೆಂದು ಹೇಳಲಾಗುವ ಸಂಸತ್ತಿನಲ್ಲೇ ಪ್ರಜಾಪ್ರಭುತ್ವ ವ್ಯವಸ್ಥೆ ನಾಶವಾಗುತ್ತಿದೆ

ಸಿಪಿಐ(ಎಂ) ಕೋಲಾರ ಜಿಲ್ಲಾ 17ನೇ ಸಮ್ಮೇಳನ



ಪ್ರಜಾಪ್ರಭುತ್ವದ ದೇಗುವವೆಂದು ಹೇಳಲಾಗುವ ಸಂಸತ್ತಿನಲ್ಲೇ ಪ್ರಜಾಪ್ರಭುತ್ವ ವ್ಯವಸ್ಥೆ ನಾಶವಾಗುತ್ತಾ ಇದ್ದು ಆಳುವ ಬಿಜೆಪಿ ಸರಕಾರ ತನ್ನ ಅತಿಯಾದ ಬಹುಮತವನ್ನು ಬಳಸಿಕೊಂಡು ಪ್ರತಿಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ದಬ್ಬಾಳಿಕೆಯ ಮಾರ್ಗದಿಂದ ಕಾನೂನುಗಳನ್ನು ಅಂಗೀಕರಿಸತ್ತಾ ಇದೆ ಎಂದು ಸಿಪಿಐಎಂ ರಾಜ್ಯ ಮುಖಂಡ ಜಿ.ಸಿ ಬಯ್ಯಾರೆಡ್ಡಿ ತಿಳಿಸಿದರು.

ನಗರದ ಹಾಲಿಸ್ಟರ್ ಮೆಮೋರಿಯಲ್ ಹಾಲ್ ನಲ್ಲಿ ಭಾನುವಾರ ಭಾರತ ಕಮ್ಯೂನಿಸ್ಟ್ ಪಕ್ಷ ಮಾರ್ಕ್ಸ್‌ವಾದಿಯ 17 ಜಿಲ್ಲಾ ಸಮ್ಮೇಳನದ ಬಹಿರಂಗ ಅಧಿವೇಶನವನ್ನು ಉದ್ಘಾಟಿಸಿ ಮಾತನಾಡಿದ ಅವರು ಜಾತೀಯತೆ, ಮತೀಯವಾದ, ಅಸಮಾನತೆಯನ್ನು ಜೀವಂತವಾಗಿರಿಸಿ ಮನುವಾದಿ ಬೆಂಬಲಿತ ಸಂವಿಧಾನವನ್ನು ಬಲಿಷ್ಠಗೊಳಿಸುವ ಶಕ್ತಿಗಳು ಸಂಸತ್ ನಲ್ಲಿ ಅಧಿಕಾರ ವಹಿಸಿಕೊಂಡು ಸರ್ವಾಧಿಕಾರಿಯಾಗಿ ಇದ್ದು ಮುಂದಿನ ದಿನಗಳಲ್ಲಿ ದೇಶಕ್ಕೆ ಅಪಾಯವನ್ನು ತರುತ್ತದೆ ಎಂದರು. ಬಿಜೆಪಿ ಪಕ್ಷ ಅಧಿಕಾರಕ್ಕೆ ಬಂದ ನಂತರದಿಂದ ಸಾಮಾನ್ಯ ವರ್ಗದ ಹಿತ ರಕ್ಷಣೆ ಮಾಡುವ ಅಂಬೇಡ್ಕರ್ ಅವರ ಸಂವಿಧಾನಕ್ಕೆ ಗಂಡಾಂತರ ಬಂದಿದೆ ಮುಂದೆ ಒಂದು ದಿನ ಹಳ್ಳಿಗಳಲ್ಲಿ, ಹಾದಿಬೀದಿಗಳಲ್ಲಿ ದೇಶಕ್ಕೆ ಆರ್. ಎಸ್.ಎಸ್ ಸಂಘದ ಮನುವಾದ ಬೇಕಾ ಇಲ್ಲವೇ ಅಂಬೇಡ್ಕರ್ ಅವರ ಸಂವಿಧಾನ ಬೇಕಾ ಎಂಬುದು ಚರ್ಚೆ ನಡೆಯುತ್ತದೆ ನಾವು ಎಚ್ಚರಿಕೆಯಿಂದ ಇವುಗಳನ್ನು ಎದುರಿಸಬೇಕಾಗಿದೆ ಎಂದರು.

ಜಿಲ್ಲೆಯಲ್ಲಿ ಜಾತ್ಯಾತೀತ ತತ್ವಗಳು ಅಂಬೇಡ್ಕರ್ ಹಾಗೂ ಸಂವಿಧಾನದ ಬಗ್ಗೆ ಮಾತನಾಡುವ ಕಾಂಗ್ರೆಸ್ ಪಕ್ಷದ ಮುಖಂಡರು ಕೆಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವಂತೆ ಮಾಡಿದ್ದಾರೆ ಜಿಲ್ಲೆಯಲ್ಲಿ ಕೋಮುವಾದಿ ಬೆಳವಣಿಗೆಗೆ ಕಾಂಗ್ರೆಸ್ ಪಕ್ಷದ ಕೊಡುಗೆ ಅಪಾರವಾಗಿದೆ ಗಾಂಧೀಜಿಯವರ ಮೌಲ್ಯಗಳು ಸಂವಿಧಾನದ ಆಶಯಗಳ ಬಗ್ಗೆ ಗೌರವ ಇದ್ದರೆ ಕಾಂಗ್ರೆಸ್ ಪಕ್ಷದ ಎರಡು ಬಣಗಳು ಒಗ್ಗೂಡಬೇಕು ಮತ್ತು ಪ್ರಗತಿಪರ ಆಲೋಚನೆಗಳ ಜೊತೆ ಕೈಜೋಡಿಸಬೇಕಾಗಿದೆ ಎಂದರು.

ದೇಶದಲ್ಲಿ ರಾಜಕೀಯ ಸ್ವಾತಂತ್ರ್ಯ ಸಿಕ್ಕರೆ ಸಾಲದು ಸಾಮಾಜಿಕ ನ್ಯಾಯ ಪರಿಕಲ್ಪನೆಯ ಸ್ವಾತಂತ್ರ್ಯದ ವ್ಯವಸ್ಥೆ ಪ್ರತಿಯೊಬ್ಬರಿಗೂ ಸಿಗಬೇಕಾಗಿದೆ ಶೋಷಿತರಿಗೆ ಮಹಿಳೆಯರಿಗೆ ದಲಿತರಿಗೆ ಎಲ್ಲಾ ರಂಗದಲ್ಲಿ ಸಮಾನ ಅವಕಾಶಗಳು ಸಿಕ್ಕಾಗ ಮಾತ್ರ ಸ್ವಾತಂತ್ರಕ್ಕೆ ಅರ್ಥ ಬರುತ್ತದೆ ದೇಶದ ಸ್ವಾತಂತ್ರ ಸಂಗ್ರಾಮದಲ್ಲಿ 200ವರ್ಷಗಳಿಂದ ಪಕ್ಷಾಂತರ ಜನರ ಆಸ್ತಿ ಪ್ರಾಣ ಬಲಿದಾನ ವಾಗಿದೆ ಅವರ ಮೌಲ್ಯಗಳನ್ನು ಆಧಾರದಲ್ಲಿ ಅಂಬೇಡ್ಕರ್ ಸಂವಿಧಾನದ ಮೂಲಕ ನಮಗೆ ನೀಡಿದ ಹಕ್ಕುಗಳಾಗಿವೆ ಸಂವಿಧಾನದ ಆಶಯಗಳಿಗೆ ಧಕ್ಕೆ ಕೊಡುವ ಮನುವಾದಿ ಶಕ್ತಿಗಳನ್ನು ಕೇಂದ್ರ ಮತ್ತು ರಾಜ್ಯದಿಂದ ಅಧಿಕಾರದಿಂದ ಕೆಳಗಿಳಿಸಲು ಕೆಂಪು ಹಳದಿ ಮತ್ತು ಹಸಿರು ಬಣ್ಣದ ಧ್ವಜಗಳು ಒಟ್ಟಿಗೆ ಸಂಘಟಿತರಾಗಿ ದೇಶವನ್ನು ರಕ್ಷಣೆ ಮಾಡಬೇಕಾಗಿದೆ

ಕಾರ್ಯಕ್ರಮದಲ್ಲಿ ಸಿಪಿಐಎಂ ರಾಜ್ಯ ಸಮಿತಿ ಸದಸ್ಯ ಪಿ.ಜಯರಾಮರೆಡ್ಡಿ ಮಾತನಾಡಿ ಪ್ರತಿಯೊಬ್ಬ ನಾಗರೀಕನಿಗೂ ಸಮಾನವಾದ ಅವಕಾಶಗಳನ್ನು ಒದಗಿಸುವುದು ಸಿಪಿಐಎಂ ಪಕ್ಷದ ಸಿದ್ಧಾಂತವಾಗಿದ್ದು ಬಿಜೆಪಿ ಕೇವಲ ಅಂಬಾನಿ ಅದಾನಿ ಯಂತಹ ಶ್ರೀಮಂತ ವರ್ಗದವರ ಹಿತ ರಕ್ಷಣೆ ಮಾಡುವುದು ಮೋದಿ ಸರಕಾರದ ದೊಡ್ಡ ಸಾಧನೆಯಾಗಿದೆ ಕಾರ್ಪೊರೇಟ್ ಸಂಸ್ಥೆಗಳ ಬೆಂಬಲಕ್ಕೆ ದೇಶದ ಸಾರ್ವಜನಿಕ ಉದ್ಯಮವನ್ನು ಮಾರಾಟ ಮಾಡಲು ಹೊರಟಿದ್ದಾರೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಿಪಿಐಎಂ ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಗಾಂಧಿನಗರ ನಾರಾಯಣಸ್ವಾಮಿ ಮಾತನಾಡಿ ಸಮ್ಮೇಳನವು ಜಿಲ್ಲೆಯ ಅಭಿವೃದ್ಧಿಯನ್ನು ದೃಷ್ಟಿಯಿಂದ ನಡೆಯುತ್ತಾ ಇದ್ದು ಶಾಶ್ವತ ನೀರಾವರಿ ಯೋಜನೆಗಳು, ಸ್ಥಳೀಯ ಕೈಗಾರಿಕೆಗಳು, ಬೆಮಲ್ ಉಳಿಸಬೇಕು ಬಿಜಿಎಂಎಲ್ ಪುನಃ ಪ್ರಾರಂಭಿಸಲು ಹಾಗೂ ಜನರ ಮೂಲಭೂತ ಸೌಲಭ್ಯಗಳನ್ನು ಒದಗಿಸುವಂತೆ ಮಾಡುವುದು ಸಮ್ಮೇಳನದ ಉದ್ದೇಶವಾಗಿದೆ ಎಂದರು.



ಕಾರ್ಯಕ್ರಮದಲ್ಲಿ ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಪಿ.ಶ್ರೀನಿವಾಸ್, ಪ್ರಾಸ್ತಾವಿಕವಾಗಿ ಮಾತನಾಡಿದರು ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಪಿ.ಆರ್ ಸೂರ್ಯನಾರಾಯಣ, ವಿ.ಗೀತಾ, ಎ.ಆರ್ .ಬಾಬು, ಟಿ.ಎಂ ವೆಂಕಟೇಶ್, ಜಿಲ್ಲಾ ಸಮಿತಿ ಸದಸ್ಯರಾದ ಪುಣ್ಯಹಳ್ಳಿ ಶಂಕರ್, ಚಲಪತಿ, ತಂಗರಾಜ್, ಈರಪ್ಪರೆಡ್ಡಿ, ನವೀನ್, ಇದ್ದು ಕಾರ್ಯಕ್ರಮದ ಧ್ವಜಾರೋಹಣವನ್ನು ಹಿರಿಯ ಸಂಗಾತಿ ಅರ್ಜುನನ್ ನೆರವೇರಿಸಿದರು.

ಪಕ್ಷದ ಕೋಲಾರ ಜಿಲ್ಲಾ 17ನೇ ಸಮ್ಮೇಳನ ಡಿಸೆಂಬರ್ 5, 6 ರಂದು ಕೋಲಾರದಲ್ಲಿ ಯಶಸ್ವಿಯಾಗಿ ನಡೆದಿದೆ. ಸಮ್ಮೇಳನವು 17 ಜನರ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಿತು.

ನೂತನ ಜಿಲ್ಲಾ ಸಮಿತಿ:

ಕಾರ್ಯದರ್ಶಿ ಮಂಡಳಿಯ ಸದಸ್ಯರು:

1) ಗಾಂಧಿನಗರ ನಾರಾಯಣಸ್ವಾಮಿ
2) ಪಿ. ಶ್ರೀನಿವಾಸ್
3) ವಿ. ಗೀತಾ
4)ಪಿ.ಆರ್. ಸೂರ್ಯನಾರಾಯಣ
5) ಎ.ಆರ್. ಬಾಬು
6) ಟಿ.ಎಂ. ವೆಂಕಟೇಶ್

ಜಿಲ್ಲಾ ಸಮಿತಿ ಸದಸ್ಯರು

7) ಪಾತಕೋಟೆ ನವೀನ್ ಕುಮಾರ್
8) ಪಿ. ತಂಗರಾಜ್
9) ಎಂ. ವಿಜಯಕೃಷ್ಣ
10) ಪಿ.ಆರ್. ಶಂಕರಪ್ಪ
11) ಎಸ್.ಡಿ. ಆನಂದನ್
12) ಎನ್. ಅಶೋಕ್
13) ಗಂಗಮ್ಮ
14) ಎಂ. ಜಯಲಕ್ಷ್ಮಿ

(ಒಂದು ಮಹಿಳಾ ಸ್ಥಾನ ಸೇರಿದಂತೆ 3 ಸ್ಥಾನಗಳನ್ನು ಖಾಲಿ ಇಡಲಾಗಿದೆ.)



ಆಹ್ವಾನಿತ ಸದಸ್ಯರು:

1) ಹನುಮಂತರಾಯ
2) ಆರ್. ಜಯರಾಮನ್
3) ಅಮರನಾರಾಯಣ

ಗಾಂಧಿನಗರ ನಾರಾಯಣಸ್ವಾಮಿ ರವರು ಕಾರ್ಯದರ್ಶಿಯಾಗಿ ಸರ್ವಾನುಮತದಿಂದ ಆಯ್ಕೆಯಾದರು.



ಹಿರಿಯ ಸಂಗಾತಿಗಳಿಗೆ ಗೌರವ ಸನ್ಮಾನ



JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**